
ರಂಜನೆ ಬೋಧನೆ ಪ್ರಬೋಧನೆ

ಗೌರಿ ಲಂಕೇಶ್

24 ಆಗಸ್ಟ್ 2016 ಪುಟ 20 ರೂ. 15/-



ಕಿರಣ್‌ಬೇಡಿ ಹೇಳಿಕೆ ಖಂಡನಾರ್ಹ



ಹೋಮಕ್ಕೆ ಹವಿಸ್ಸಾದ ಭಾಸ್ಕರ್ ಶೆಟ್ಟಿ



ಜಿಲೇಬಿ ಟಾರ್ಗೆಟ್ ಕೆಂಪಯ್ಯ

ಕೊಡಗು
ಕಲ್ಲಡ್ಕ ಭಟ್ಟನಿಗೆ ಮುಖಭಂಗ

ಹೊಳಲ್ಕೆರೆ
ಆಂಜನೇಯ ಲೆಕ್ಕಾಚಾರಕ್ಕೆ ಹನುಮಲಿ ಷಣ್ಮುಖಪ್ಪನ 'ಜಾತಿಬಲ'

ಬಳ್ಳಾರಿ
ಜಿಂದಾಲ್ ಕಂಪನಿಯ ಕಾರ್ಮಿಕ ದ್ರೋಹ

ತುಮಕೂರು
ಅಜ್ಜಗೊಂಡನಹಳ್ಳಿಗೆ ತ್ಯಾಜ್ಯ ಎಂಬ ತಲೆನೋವು

ತಳಸಮುದಾಯಗಳನ್ನು 'ಕ್ರಿಮಿನಲ್ ಬುಡಕಟ್ಟುಗಳು' ಎಂದ ಅಪಮಾನಿಸುವುದು ಖಂಡನಾರ್ಹ

ಮಾಜಿ ಐಪಿಎಸ್ ಅಧಿಕಾರಿಯೂ, ರಾಜಕೀಯ ಪಕ್ಷವೊಂದರ ಸಕ್ರಿಯ ಕಾರ್ಯಕರ್ತರೂ, ಪಾಂಡಿಚೇರಿಯ ಲೆಫ್ಟಿನೆಂಟ್ ಗವರ್ನರ್ ಆಗಿರುವ ಕಿರಣ್ ಬೇಡಿಯವರು ಇತ್ತೀಚೆಗೆ ವಸಾಹತು ಆಡಳಿತದ ಸಂದರ್ಭದಲ್ಲಿ 'ಅಪರಾಧಿ ಬುಡಕಟ್ಟುಗಳು' ಎಂದು ಪಟ್ಟಿ ಮಾಡಲಾದ ಸಮುದಾಯಗಳನ್ನು ಅಪಮಾನಿಸಿ ನಿಂದಿಸುವ ಒಂದು ಟ್ವೀಟ್ ಮಾಡಿದ್ದಾರೆ. ಅದರಲ್ಲಿ ಅವರು ಹೀಗೆ ಬರೆದಿದ್ದಾರೆ: 'ಮಾಜಿ ಕ್ರಿಮಿನಲ್ ಟ್ರೈಬ್‌ಗಳು ಅತ್ಯಂತ ಕ್ರೂರಿಗಳೆಂದೇ ಹೆಸರಾಗಿದ್ದಾರೆ. ಅಪರಾಧಗಳನ್ನು ನಡೆಸುವುದರಲ್ಲಿ ಅವರು ನಿಷ್ಣಾತರಾಗಿದ್ದಾರೆ. ಅವರನ್ನು ಹಿಡಿಯುವುದಾಗಲೀ, ಶಿಕ್ಷೆ ನೀಡುವುದಾಗಲೀ' ಆಗುತ್ತಿಲ್ಲ.'

ಕಿರಣ್ ಬೇಡಿಯವರ ಈ ಮಾತುಗಳು ಈ ದೇಶದಲ್ಲಿ 'ಕ್ರಿಮಿನಲ್ ಬುಡಕಟ್ಟುಗಳೆಂದು' ಹಣೆಪಟ್ಟಿ ಪಡೆದು, ಬ್ರಿಟಿಷ್ ಮತ್ತು ಭಾರತದ ಸರ್ಕಾರಗಳಿಂದ ಅತ್ಯಂತ ಅಮಾನವೀಯವಾಗಿ ನಡೆಸಿಕೊಳ್ಳಲಾಗುತ್ತಿರುವ ಅಲೆಮಾರಿ ಮತ್ತು ಆದಿವಾಸಿ ಸಮುದಾಯಗಳ ಮನಸ್ಸಿನಲ್ಲಿ ಅತ್ಯಂತ ನೋವನ್ನುಂಟುಮಾಡುವ ಮಾತುಗಳಾಗಿವೆ. ಕನಿಷ್ಠ ನಾಗರಿಕ ಪ್ರಜ್ಞೆ ಇರುವ ಯಾರೂ ಇಂತಹ ಮಾತುಗಳನ್ನು ಉಚ್ಚರಿಸಲಾರರು. ಮಾಜಿ ಪೊಲೀಸ್ ಅಧಿಕಾರಿಯೂ, ಹಾಲಿ ರಾಜಕಾರಣಿಯೂ ಆಗಿರುವ ಕಿರಣ್ ಬೇಡಿ ಅವರ ಈ ಜಾತಿನಿಂದನೆಯ ಮಾತುಗಳನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಕಿರಣ್ ಬೇಡಿ ಅವರು ಈ ಕೂಡಲೇ ತಮ್ಮ ಮಾತುಗಳನ್ನು ಹಿಂಪಡೆಯಬೇಕೆಂದು ಒತ್ತಾಯಿಸುತ್ತೇವೆ.


ಕಿರಣ್ ಬೇಡಿಯವರು ಮೇಲಿನ ಮಾತುಗಳನ್ನು ಹೇಳಿದ್ದು ಇತ್ತೀಚೆಗೆ ಉತ್ತರ ಪ್ರದೇಶದ ಬುಲಂದ್‌ಶಹರ್‌ನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಹಿನ್ನೆಲೆಯಲ್ಲಿ. ಈ ಘಟನೆಯಲ್ಲಿ 'ಬವಾರಿಯಾ ಬುಡಕಟ್ಟು ಸಮುದಾಯದ ಪಾತ್ರವಿದೆ' ಎಂದು ಅತ್ಯಂತ ಪೂರ್ವಾಗ್ರಹಪೀಡಿತವಾಗಿ ಉತ್ತರ ಪ್ರದೇಶದ ಪೊಲೀಸರು ತಿಳಿಸಿದ್ದರು. ಇದನ್ನನುಸರಿಸಿ ಕೆಲ ಮಾಧ್ಯಮಗಳೂ ಸಹ ಇಡೀ ಬವಾರಿಯಾ ಸಮುದಾಯವನ್ನು ರಾಕ್ಷಸೀಕರಿಸುವ ಪ್ರಯತ್ನ ನಡೆಸಿದವು. ಇಲ್ಲಿ ಒಂದು ಪ್ರಶ್ನೆಯನ್ನು ಕೇಳಲಿಚ್ಛಿಸುತ್ತೇವೆ. ಇದೇ ಸಮಯದಲ್ಲಿ ದಲಿತ ದಂಪತಿಗಳನ್ನು ಕೇವಲ 15 ರೂಪಾಯಿ ವಿಚಾರದಲ್ಲಿ ಕೊಲೆ ಮಾಡಿದ ವ್ಯಕ್ತಿಯೊಬ್ಬನ ಹೆಸರಿನಲ್ಲಿ 'ಮಿಶ್ರಾ' ಎಂದು ಇತ್ತು, ಹಾಗಂತ 'ಮಿಶ್ರಾ' ಎಂದು ಹೆಸರಿಟ್ಟುಕೊಳ್ಳುವ ಸಮುದಾಯದವರೆಲ್ಲರೂ ಕೊಲೆಗಡುಕರೇ? ಮೇಲೆ ತಿಳಿಸಿದ ಅತ್ಯಾಚಾರ ಪ್ರಕರಣದಲ್ಲಿ ನಿಜವಾದ ಅಪರಾಧಿಗಳು ಯಾರೆಂದು ಇನ್ನೂ ಪತ್ತೆಯಾಗುವುದರೊಳಗಾಗಿ ಬವಾರಿಯಾ ಬುಡಕಟ್ಟು ಸಮುದಾಯವನ್ನು ಗುರಿಪಡಿಸಿರುವುದರಲ್ಲಿ ಜಾತಿವಾದಿ ಮತ್ತು ಜನಾಂಗ ದ್ವೇಷಿ ಮನಸ್ಥಿತಿ ಕೆಲಸ ಮಾಡಿದೆ. 'ಕ್ರಿಮಿನಲ್ ಬುಡಕಟ್ಟುಗಳೆಂದು' ಕೆಲವು ಸಮುದಾಯಗಳನ್ನು ಪಟ್ಟಿ ಮಾಡಿದ್ದು ವಸಾಹತು ಆಡಳಿತ.

ವಸಾಹತು ಆಡಳಿತ ಈ ಕುರಿತು 1871ರಲ್ಲಿ ಕ್ರಿಮಿನಲ್ ಬುಡಕಟ್ಟು ಕಾಯ್ದೆ ರಚಿಸಿ ಜಾರಿಗೆ ತಂದಿತು. ವಸಾಹತು ಆಡಳಿತದ ಸಂದರ್ಭದಲ್ಲಿ ರೂಪುಗೊಂಡ ಒಂದು ಅಮಾನವೀಯ ಮತ್ತು ಶುದ್ಧ ಸಾಮ್ರಾಜ್ಯಶಾಹಿ ಮನೋಭಾವದ ಕಾಯ್ದೆ ಇದು. ಈ ಕಾಯ್ದೆಯು ಮುಖ್ಯವಾಗಿ ಭಾರತದ ವ್ಯವಸಾಯಿ ಸಂಬಂಧಗಳನ್ನು ಬೆಸೆಯುತ್ತಿದ್ದ ಕುಶಲಕರ್ಮಿ, ಅಲೆಮಾರಿ ಮತ್ತು ಆದಿವಾಸಿ ಸಮುದಾಯಗಳನ್ನು ನಿಯಂತ್ರಿಸುವ ಸಲುವಾಗಿ ರೂಪುಗೊಂಡಿತು. ವಸಾಹತು ಆಡಳಿತ ತನ್ನ 'ಕಾನೂನು ಸುವ್ಯವಸ್ಥೆಯ' ಕಾರಣಕ್ಕಾಗಿ ಈ ಕಾಯ್ದೆಯನ್ನು ಜಾರಿಗೆ ತಂದಿತು ಎಂದು ಹೇಳಲಾಗುತ್ತಿದೆಯಾದರೂ ಈ ಕಾಯ್ದೆಯನ್ನು ರೂಪಿಸುವ ಹಿಂದೆ ವಸಾಹತು ಆಡಳಿತಕ್ಕೆ ತನ್ನದೇ ಆದ ರಾಜಕೀಯಾರ್ಥಿಕ ಕಾರಣಗಳೂ ಇದ್ದವು. ವಸಾಹತು ಆಡಳಿತ 'ಕ್ರಿಮಿನಲ್‌ಗಳು' ಎಂದು ಬೇಟೆಯಾಡಿದ್ದು, ವಾಸ್ತವದಲ್ಲಿ ತಮ್ಮ ಕರಾಳ ಆಡಳಿತ ಮತ್ತು ಕಾನೂನುಗಳಿಗೆ ಪ್ರತಿರೋಧ ಒಡ್ಡಿದ್ದ ಆದಿವಾಸಿ, ಅಲೆಮಾರಿ ಸಮುದಾಯಗಳನ್ನು.

1774 ಮತ್ತು 1871ರ ನಡುವಿನ ಭಾರತದ ಇತಿಹಾಸ ಅತ್ಯಂತ ರಕ್ತಪಾತದಿಂದ ಕೂಡಿದ ಇತಿಹಾಸವಾಗಿದೆ. ಭಾರತದ ಸ್ಥಳೀಯ ರಾಜ್ಯಗಳ ವಿರುದ್ಧ ಈ ಅವಧಿಯಲ್ಲಿ ಕಂಪನಿ ಮತ್ತು ವಸಾಹತು ಆಡಳಿತವು ಅತ್ಯಂತ ಕ್ರೂರ ಯುದ್ಧಗಳನ್ನು ಮಾಡಿತು. ಆಂಗ್ಲೋ ಮರಾಠ ಯುದ್ಧ, ಮೈಸೂರು ಯುದ್ಧ, ಹೋಳ್ಕರ ಶರಣಾಗತಿ, ಪೇಶ್ವೆಗಳ ಸೋಲು, ವೆಲ್ಲೂರಿನ ಸಿಪಾಯಿದಂಗೆ, ಮೈಸೂರು ಮತ್ತು ಕೂರ್ಗ್‌ಗಳನ್ನು ವಶಪಡಿಸಿಕೊಂಡದ್ದು, ಸಿಂಧ್, ಸಿಖ್, ಔಧ್ ಪ್ರದೇಶಗಳನ್ನು ಯುದ್ಧಗಳ ಮೂಲಕ ವಶಪಡಿಸಿಕೊಂಡದ್ದು ಮತ್ತು 1857ರಲ್ಲಿ ನಡೆದ ಸಿಪಾಯಿ ದಂಗೆಗಳು ಹಲವು ಸ್ಥಳೀಯ ಸಮುದಾಯಗಳನ್ನು ನೆಲೆ ಇಲ್ಲದಂತೆ ಮಾಡಿದವು. ಈ ಸಮುದಾಯಗಳೇ ಮುಂದೆ ಅಲೆಮಾರಿಗಳಾಗಿ ಪರಿವರ್ತಿತವಾದವು. ಮುಖ್ಯವಾಗಿ ಆಧುನಿಕ ಪೂರ್ವ ಭಾರತದ ಅನೇಕ ಪಾಳೆಪಟ್ಟುಗಳು ಮತ್ತು ಸ್ಥಳೀಯ ರಾಜರು ಅನಿವಾರ್ಯವಾಗಿ ಕಂಪನಿ ಆಡಳಿತದ ಜೊತೆ ಕೈಜೋಡಿಸಬೇಕಿತ್ತು, ಇಲ್ಲವೆ ಅವರೊಡನೆ ಕಾದಾಡಬೇಕಿತ್ತು. ಈ ಎರಡೂ ಸಂದರ್ಭದಲ್ಲಿ ದೇಶೀಯ ಶ್ರಮಜೀವಿಗಳು ಆರ್ಥಿಕವಾಗಿ ಕುಸಿದು ಹೋದರು. ಕಂಪನಿ ಆಡಳಿತವನ್ನು ಒಪ್ಪಿಕೊಂಡರೆ ಅದರ ಸೈನ್ಯವನ್ನು ಸ್ಥಳೀಯ ರಾಜರು ಸಾಕಬೇಕಿತ್ತು. ಅಕಸ್ಮಾತ್ ಕಂಪನಿ ಆಡಳಿತದ ವಿರುದ್ಧ ತಿರುಗಿ ಬಿದ್ದು ಕಾದಾಡಿದರೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಅಪಾಯದಲ್ಲಿ ಇಂಡಿಯಾದ ಎಲ್ಲ ಸ್ಥಳೀಯ ಸಂಸ್ಥಾನಗಳು ಸಿಲುಕಿಕೊಂಡವು. ಆದರೆ ಬಹುತೇಕ ಎಲ್ಲ ಸಂಸ್ಥಾನಗಳನ್ನು ಬ್ರಿಟಿಷ್ ಆಡಳಿತ ತನ್ನ ತಂತ್ರಗಳ ಮೂಲಕ ವಶಪಡಿಸಿಕೊಳ್ಳುತ್ತಲೇ ಹೋಯಿತು. ತಿರುಗಿಬಿದ್ದ ಸಮುದಾಯಗಳನ್ನು ಕಾನೂನುಗಳ ಮೂಲಕ ಹತ್ತಿಕ್ಕಲು ಕೆಲವು ನಿಯಮಗಳನ್ನು ರೂಪಿಸಿತು. ಈ ಹಂತದಲ್ಲಿಯೇ Criminal Tribes Act ಜಾರಿಗೆ ಬಂದಿತು.

1871ರಲ್ಲಿ Criminal Tribes Act ಜಾರಿಗೆ ಬಂದರೂ, ಉತ್ತರ ಭಾರತದಲ್ಲಿ ಕಂಪನಿ ಸರಕಾರವು 1793ರಲ್ಲಿಯೇ ಕೆಲವು ಸಮುದಾಯಗಳನ್ನು ಪಟ್ಟಿ ಮಾಡಿ ಇವು ತಮ್ಮ ಆಡಳಿತಕ್ಕೆ ಅಪಾಯಕಾರಿಗಳೆಂದು ಗುರುತಿಸಿತು. ಆ ಪಟ್ಟಿ ನಮಗೆ ಈಗ ಲಭ್ಯವಿಲ್ಲ, ಆದರೆ ಅತ್ಯಂತ ಶಾಂತವಾಗಿದ್ದ ಶ್ರಮಜೀವಿಗಳೇ ಬದುಕುತ್ತಿದ್ದ ರೋಹಿಲ್ ಖಂಡ್‌ನ್ನು ವಶಪಡಿಸಿಕೊಳ್ಳಲು ಬ್ರಿಟಿಷರು 1770ರಲ್ಲಿ ಒಂದು ಭೀಕರ ಯುದ್ಧವನ್ನೇ ನಡೆಸಿದರು. ಭಯಂಕರ ರಕ್ತಪಾತ ಮತ್ತು ಸಾವುನೋವುಗಳು ಸಂಭವಿಸಿದವು. ರೋಹಿಲ್‌ಖಂಡ್ ಬ್ರಿಟಿಷ್ ವಶವಾಯಿತು. ಆದರೆ ಅಲ್ಲಿ ಮುಗ್ಧವಾಗಿ ಬದುಕಿ ಬಂದಿದ್ದ ದುಡಿಮೆಗಾರರು ದಿಕ್ಕೆಟ್ಟು ಹೋದರು. ಅಲ್ಲದೆ ಇವರು ಕಂಪನಿ ಆಡಳಿತದ ಮೇಲೆ ಉಗ್ರವಾದ ಸಿಟ್ಟನ್ನು ಬೆಳೆಸಿಕೊಂಡರು. ಬ್ರಿಟಿಷರ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸಲಾರಂಭಿಸಿದರು. ಇಲ್ಲಿನ ಬಹುತೇಕ ಶ್ರಮಜೀವಿಗಳು ಮತ್ತು ಆದಿವಾಸಿಗಳು ತಮ್ಮ ನೆಲೆಗಳನ್ನು ಕಳೆದುಕೊಂಡು ಅಲೆಮಾರಿಗಳಾದರು. ಕಂಪನಿ ಆಡಳಿತ ಪ್ರಬಲವಾಗುತ್ತಿದ್ದಂತೆ ಈ ದೇಶದ ಸ್ಥಳೀಯ ರಾಜರು ನಿವೃತ್ತರಾಗಿ ಪಿಂಚಣಿ ಪಡೆಯಲಾರಂಭಿಸಿದರು. ಭೂಮಾಲಿಕರು ರಾಜಿ ಮಾಡಿಕೊಂಡು ತಮ್ಮ ಆಸ್ತಿಗಳನ್ನು ರಕ್ಷಿಸಿಕೊಂಡರು. ಆದರೆ ಎಲ್ಲವನ್ನೂ ಕಳೆದುಕೊಂಡದ್ದು ಶ್ರಮಜೀವಿ ವರ್ಗ ಮಾತ್ರ. ಕಂಪನಿ ಆಡಳಿತದ ವಿರುದ್ಧ ಇವರು ಹೋರಾಡಲೇಬೇಕಾದ ಚಾರಿತ್ರಿಕ ಅನಿವಾರ್ಯತೆ ಏರ್ಪಟ್ಟಿತು. ಜೊತೆಗೆ ಈ ಹೋರಾಟ ಸ್ಪಷ್ಟ ರಾಜಕೀಯ ತಳಹದಿಯ ಮೇಲೆ ರೂಪಗೊಂಡಿತ್ತು, ಮನುಷ್ಯನ ಸಹಜ ಹಕ್ಕುಗಳಾದ, ಮಾತನಾಡುವ, ಪ್ರಶ್ನಿಸುವ, ಸ್ವತಃ ತಮ್ಮನ್ನು ತಾವು ಆಳಿಕೊಳ್ಳುವ, ತಮ್ಮ ಆಸ್ತಿ ರಕ್ಷಣೆ ಮಾಡಿಕೊಳ್ಳುವ ಮತ್ತು ತಮ್ಮ ಅನನ್ಯತೆಗಳನ್ನು ಉಳಿಸಿಕೊಳ್ಳುವ ಜನತಾಂತ್ರಿಕ ಆಶಯಗಳಿಂದಲೇ ಈ ಹೋರಾಟಗಳು ರೂಪುಗೊಂಡಿದ್ದವು. ಆದರೆ ಅರಾಜಕಗೊಂಡಿದ್ದ ಭಾರತದ ರಾಜಕೀಯ ಸಂದರ್ಭವು ನಿತ್ರಾಣಗೊಂಡಿತ್ತು. ಆದರೆ ಅಲ್ಲಲ್ಲಿ ಜೀವಂತವಿದ್ದ ಸ್ವಾಭಿಮಾನಿ ಸಂಸ್ಥಾನಗಳು ಮಾತ್ರ ಬ್ರಿಟಿಷ್ ಆಡಳಿತದ ವಿರುದ್ಧ ಉಗ್ರವಾಗಿಯೇ ತಿರುಗಿ ಬೀಳುತ್ತಿದ್ದವು. ಯಾವ ಸಮುದಾಯಗಳು ಸ್ಥಳೀಯ ರಾಜರ ಸೈನ್ಯದಲ್ಲಿದ್ದು ಕಂಪನಿ ಆಡಳಿತದ ವಿರುದ್ಧ ಹೋರಾಡುತ್ತಿದ್ದವೋ ಆ ಎಲ್ಲ ಸಮುದಾಯಗಳನ್ನು ಕಂಪನಿ ಸರಕಾರ ಯುದ್ಧಾನಂತರ ಅನೇಕ ಬಗೆಯಲ್ಲಿ ಹಿಂಸಿಸುತ್ತಿತ್ತು, ಉದಾ. ಹೈದರ್ ಅಲಿ ಮತ್ತು ಟಿಪ್ಪುವಿನ ಸೋಲಿನನಂತರ ಅವರ ಸೈನ್ಯವನ್ನು ಬ್ರಿಟಿಷರು ಇನ್ನಿಲ್ಲದಂತೆ ನಾಶಮಾಡಿದರು. ಅವರಿಗೆ ಭಾರತದ ಸಮಾಜದ ಕುರಿತು ಸರಿಯಾದ ಕಲ್ಪನೆಯೇ ಇರಲಿಲ್ಲ, ಅಲೆಮಾರಿ ಪಶುಪಾಲಕರು, ವೃತ್ತಿ ಸಂಗೀತಗಾರರು, ಆದಿವಾಸಿಗಳು, ದೊಂಬರಾಟದವರು, ಜಿಪ್ಸಿಗಳು, ಹಾವಾಡಿಸುವವರು, ಅಲೆಮಾರಿ ವೈದ್ಯರು, ಈ ಸಮುದಾಯಗಳನ್ನು ಬ್ರಿಟಿಷರು ಅರ್ಥಮಾಡಿಕೊಳ್ಳಲಿಲ್ಲ, ಈ ಸಮುದಾಯಗಳನ್ನು ಅವರು ಸದಾ ಅನುಮಾನಿಸುತ್ತಲೇ ಬಂದರು. ಸಹಜವಾಗಿಯೇ ಈ ಸಮುದಾಯಗಳು 'ಅಪರಾಧಿ ಸಮುದಾಯ'ಗಳ ಪಟ್ಟಿಗೆ ಸೇರಿಸಲ್ಪಟ್ಟವು.

1871ರ Criminal Tribes Act ಕಂಪನಿ ಆಡಳಿತದ ಅಧಿಕಾರಿಗಳಿಗೆ ಒಂದು ಅಸ್ತ್ರವಾಗಿ ಪರಿಣಮಿಸಿತು. ಈ ಕಾಯ್ದೆಯು ಅಲೆಮಾರಿ ಸಮುದಾಯಗಳನ್ನು, ಕಾಡಿನ ಅಂಚಿನಲ್ಲಿರುವ ಆದಿವಾಸಿಗಳನ್ನು ನಿಯಂತ್ರಿಸಲು ಮತ್ತು ಈ ಸಮುದಾಯಗಳ ಮೇಲೆ ವಿನಾಕಾರಣ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಕಂಪನಿ ಆಡಳಿತದ ಅಧಿಕಾರಿಗಳಿಗೆ ನೀಡಿತು. ಅಲೆಮಾರಿತ್ವ ಎನ್ನುವುದು ಅಪರಾಧವಾಗಿ ಪರಿಗಣಿತವಾಗಿಬಿಟ್ಟಿತು. ಮೂಲತಃ ಅಲೆಮಾರಿಗಳಾಗಿದ್ದ ಸಮುದಾಯಗಳನ್ನು ನೆಲೆ ನಿಲ್ಲಿಸಲು ಒತ್ತಾಯ ಮಾಡಲಾಯಿತು. ಹಳ್ಳಿಗಳಲ್ಲಿ ಗೌರವಾನ್ವಿತವಾಗಿ ಬದುಕಲು ಇಚ್ಛಿಸುವ ಸಮುದಾಯಗಳಿಗೆ ಲೈಸೆನ್ಸ್ ಕೊಡಲು ನಿರ್ಧರಿಸಲಾಯಿತು. ಯಾರಾದರೂ ಲೈಸೆನ್ಸ್ ಇಲ್ಲದೆ ಅಲೆಮಾರಿಗಳಾಗಿ ತಿರುಗಲಾರಂಭಿಸಿದರೆ ಅವರನ್ನು ತಕ್ಷಣವೇ ಬಂಧಿಸಿ ವಿಚಾರಣೆಗೆ ಒಳಪಡಿಸಲಾಗುತ್ತಿತ್ತು, ತಮ್ಮದೇ



ನೆಲದಲ್ಲಿ ಸ್ವಚ್ಛಂದವಾಗಿ ಬದುಕುತ್ತಿದ್ದ ಸಮುದಾಯಗಳು ಈ ಹೊಸ ಕಾಯ್ದೆಯಿಂದ ಅನ್ಯರಾಗಿ, ಅಪರಾಧಿಗಳಾಗಿ ಬದುಕುವಂತಾಯಿತು. ಜೊತೆಗೆ ತಮ್ಮ ಹಕ್ಕುಗಳ ಕುರಿತು ಈ ಸಮುದಾಯಗಳು ಎಚ್ಚೆತ್ತುಕೊಂಡವು. ಕಾಡಿನ ಅಂಚಿನಲ್ಲಿ ಬದುಕುತ್ತ ಅಲೆಮಾರಿ ವ್ಯಾಪಾರಿಗಳಿಂದ ಮುಖ್ಯವಾಹಿನಿಯ ಜೊತೆಗೆ ವಾಣಿಜ್ಯ ಸಂಬಂಧಗಳನ್ನಿಟ್ಟುಕೊಂಡಿದ್ದ ಆದಿವಾಸಿಗಳೂ ಸಹ ಈ ಕಾಯ್ದೆಯ ಕೆಂಗಣ್ಣಿಗೆ ಗುರಿಯಾದರು. ವಸಾಹತು ಆಡಳಿತಕ್ಕೂ ಮುನ್ನ ಭಾರತದ ಆದಿವಾಸಿಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಮುಕ್ತವಾದ ಮತ್ತು ತಮ್ಮದೇ ಆದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬದುಕನ್ನು ಕಟ್ಟಿಕೊಂಡಿದ್ದರು. ಜೊತೆಗೆ ಆಯಾ ಸಾಮ್ರಾಜ್ಯಗಳ ಗಡಿಗಳನ್ನು ರಕ್ಷಿಸುವ ಹೊಣೆಯನ್ನು ಹೊತ್ತ ಆದಿವಾಸಿಗಳು ಕಾಡಿನಲ್ಲಿದ್ದುಕೊಂಡೇ ತಾವು ವಾಸಿಸುವ ಪ್ರದೇಶದ ರಕ್ಷಣೆ ಮಾಡುತ್ತಿದ್ದರು. ಶಿವಾಜಿಯ ಸೈನ್ಯದಲ್ಲಿ ಈ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದವರು ಆದಿವಾಸಿಗಳು. ಆದರೆ ಕಂಪನಿ ಆಡಳಿತದ ಸಂದರ್ಭದಲ್ಲಿ ಯಾವುದೇ ದೇಶಿ ಸಂಸ್ಥಾನವನ್ನು ಬ್ರಿಟಿಷ್ ಸೈನ್ಯ ವಶಪಡಿಸಿಕೊಳ್ಳಲು ಹೊರಟಾಗ ಮೊದಲು ಈ ಸೈನ್ಯಕ್ಕೆ ಮುಖಾಮುಖಿಯಾಗುತ್ತಿದ್ದುದು ಈ ಅಲೆಮಾರಿ ಮತ್ತು ಆದಿವಾಸಿ ಸಮುದಾಯಗಳು. ಮುಖ್ಯವಾಹಿನಿಯ ಸಮಾಜವು ಅನೇಕ ಅನಿವಾರ್ಯತೆಗಳಿಂದಾಗಿ ಕಂಪನಿ ಆಡಳಿತದ ಜೊತೆಗೆ ರಾಜಿ ಒಪ್ಪಂದಗಳನ್ನು ಮಾಡಿಕೊಂಡರೂ ಈ ಸೇವಕವರ್ಗ ಮತ್ತು ಆದಿವಾಸಿಗಳು ಪ್ರತಿ ಹೋರಾಟ ನಡೆಸಲೇಬೇಕಿತ್ತು, ಹೀಗೆ ವಸಾಹತು ಆಡಳಿತದ ವಿರುದ್ಧ ತಿರುಗಿ ಬಿದ್ದ ಆದಿವಾಸಿಗಳನ್ನು ಮತ್ತು ಸೇವಕವರ್ಗಕ್ಕೆ ಸೇರಿದ ಸಮುದಾಯಗಳನ್ನು ನಿಯಂತ್ರಿಸಲೆಂದೇ ಈ ಕ್ರಿಮಿನಲ್ ಟ್ರೈಬ್ಸ್ ಆಕ್ಟ್‌ನ್ನು ರೂಪಿಸಲಾಯಿತು ಮತ್ತು ಈ ಕಾಯ್ದೆಯನ್ನು ಮುಂದಿಟ್ಟುಕೊಂಡು ವಸಾಹತು ಸೈನ್ಯವು ಈ ಸಮುದಾಯಗಳನ್ನು ಹಿಂಸಾತ್ಮಕವಾಗಿಯೂ ಹತ್ತಿಕ್ಕಿತು.

ವಸಾಹತು ಆಡಳಿತದ ಸಂದರ್ಭದಲ್ಲಿ ಈ ಸಮುದಾಯಗಳಿಗೆ ಕನಿಷ್ಠಮಟ್ಟದ ನಾಗರಿಕ ಹಕ್ಕುಗಳನ್ನೂ ನಿರಾಕರಿಸಲಾಗಿತ್ತು, ದುರಂತವೆಂದರೆ ಈ ಪಟ್ಟಿಯಲ್ಲಿದ್ದ ಸಮುದಾಯಗಳನ್ನು ಕಂಪನಿ ಸರಕಾರವು ಜನ್ಮತಃ ಅಪರಾಧಿಗಳು (Born criminals) ಎಂದು ಪರಿಗಣಿಸಿಬಿಟ್ಟಿತ್ತು, ಪೊಲೀಸರಿಗೆ ತರಬೇತಿ ಕೊ… ಸಂದರ್ಭದಲ್ಲಿ, ಅಲ್ಲಿನ ಪಠ್ಯಕ್ರಮದಲ್ಲಿ 'ಅ… ಬುಡಕಟ್ಟುಗಳನ್ನು' ಗುರುತಿಸುವುದು ಮತ್ತು ಕಾ… ಮೂಲಕ ಅವರನ್ನು ಹೇಗೆ ನಿಯಂತ್ರಿಸುವುದು ಕುರಿತು ಪಾಠಗಳನ್ನು ಸೇರಿಸಿತು.

ದುರಂತದ ಸಂಗತಿಯೆಂದರೆ, ಭಾರತಕ್ಕೆ ಅ… ಹಸ್ತಾಂತರವಾದ ನಂತರ 1952ರಲ್ಲಿ ಬ್ರಿಟಿಷರ ಕ್ರಿ… ಟ್ರೈಬ್ಸ್ ಕಾಯ್ದೆ' ಭಾರತದಲ್ಲಿ ರದ್ದಾದರೂ ಸಹ ಪೊ… ತರಬೇತಿಯ ಪಠ್ಯಕ್ರಮದಿಂದ 'ಅಪರಾಧಿ ಬು… ಕಾಯ್ದೆ'ಯ ಪಾಠಗಳು ತೊಲಗಲಿಲ್ಲ, ಅವರನ್ನು … ಭಾರತದ ಸರಕಾರವು 'ಪಾರಂಪರಿಕ ಅಪರಾಧಿ ಕಾ… (Habitual offender Act) ಅಡಿ… ಗುರುತಿಸಬೇಕೆಂದು ತಮ್ಮ ಪೊಲೀ… ಬೋಧಿಸಲಾಯಿತು. ಈ ಕಾಯ್ದೆ 'ವ್ಯಕ್ತಿ … ಸಮುದಾಯವೊಂದನ್ನು ಅಪರಾಧಿ' ಎಂದು ಗುರು… ರೂಪುಗೊಂಡಂತೆ ಕಂಡರೂ, ವಸಾಹತೋತ್ತರ ಕಾಲ… ನಂತರ ಭಾರತಕ್ಕೆ ಅಧಿಕಾರ ಹಸ್ತಾಂತರವಾದ ಮೆ… 127 ಡಿನೋಟಿಫೈಡ್ ಸಮುದಾಯಗಳ ವ್ಯಕ್ತಿ… ಗುರಿಯಾಗಿಟ್ಟುಕೊಂಡಿತು. ಈ ಕಾಯ್ದೆಯು ಅಪರಾ… ಒಂದು ಕಾಯಿಲೆಯೆಂದೂ, ಅಪರಾಧಿಯನ್ನು … ಯೆಂದೂ ಪರಿಗಣಿಸಿದೆ.

ಇಲ್ಲಿ ನಮಗೆ ನಿಚ್ಚಳವಾಗುವ ವಿಷಯವೇ… ನಾವೀಗ 70ನೇ ಸ್ವಾತಂತ್ರ್ಯ ದಿನಾಚರ… ಸಂಭ್ರಮಾಚರಣೆಯ ಹೊಸ್ತಿಲಿನಲ್ಲಿ ನಿಂತಿದ್ದರೂ… ಬ್ರಿಟಿಷರು ರೂಪಿಸಿದ್ದ ಕರಾಳ ಕಾನೂನುಗಳ ಪ್ರಭಾ… ನಮ್ಮ ಸರ್ಕಾರ, ಪೊಲೀಸ್ ವ್ಯವಸ್ಥೆ ಹೊರಕ್ಕೆ ಬ… ಯಾವ ಹಿಂದುಳಿದ, ಆದಿವಾಸಿ, ಅಲೆಮಾರಿ ಸಮು… ಗಳನ್ನು ಮುಖ್ಯವಾಹಿನಿಯೊಂದಿಗೆ ಕರೆದುಕೊ… ಹೋಗುವ ಮಾತನಾಡುತ್ತಾ, ಅಭಿವೃದ್ಧಿಯಲ್ಲಿ ಒಳಗೊ… ಮಾತನಾಡುತ್ತಿದ್ದೇವೆಯೋ ಅದೇ ಸಂದರ್ಭದಲ್ಲಿ… ಹಿರಿಯ ಮಾಜಿ ಪೊಲೀಸ್ ಅಧಿಕಾರಿಯಿಂದ ಇ… ಮಾತುಗಳು ಬರುತ್ತಿರುವುದು ವಿಪರ್ಯಾಸ. ಭಾ… ಸಂವಿಧಾನವು ಜಾತಿ, ಧರ್ಮ, ಲಿಂಗ, ಭಾಷೆಗಳ ಆಧಾ… ತಾರತಮ್ಯ ಮಾಡಕೂಡದೆಂದು ಹೇಳುತ್ತದೆ. ಆದರೆ… ಕಿರಣ್ ಬೇಡಿಯವರು ಬುಡಕಟ್ಟುಗಳನ್ನು ಕ್ರಿಮಿನಲ… ಎಂದು ಹೇಳುವ ಮೂಲಕ ಸಂವಿಧಾನದ ಆಶ… ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಕಿರಣ್ ಬೇಡಿ… ಕೇವಲ ಕ್ಷುಲ್ಲಕ ರಾಜಕೀಯ ಹೇಳಿಕೆಯಲ್ಲ, ಈ ಹೇ… ಹಿಂದೆ ಜಾತಿವಾದಿ ಮತ್ತು ಅಖಂಡ ಜನಾಂಗ … ನಿಲುವುಗಳಿರುವುದು ಸ್ಪಷ್ಟವಾಗಿಯೇ ಕಾಣಿಸುತ್ತಿದೆ…

ಅದು ಕಿರಣ್ ಬೇಡಿಯವರೇ ಇರಲಿ, ಉತ್ತರ ಪ್ರ… ಪೊಲೀಸರೇ ಇರಲಿ ಯಾರೇ ಇರಲಿ; ಯಾರೋ ಮ… ಅಪರಾಧಕ್ಕೆ ಚಾರಿತ್ರಿಕವಾಗಿ ನೊಂದು, ಬೆಂದು ಈ ನಾ… ಜಗತ್ತಿನೊಂದಿಗೆ ಹೊಂದಿಕೊಂಡು ಹೋ… ಹೆಣಗುತ್ತಿರುವ ತಳಸಮುದಾಯಗಳನ್ನು 'ಕ್ರಿಮಿ… ಬುಡಕಟ್ಟುಗಳು', 'ಅಪರಾಧಿಗಳು' ಎಂದೆಲ್ಲಾ ಅಪಮಾ… ತ್ತಿರುವುದನ್ನು ಈ ಮೂಲಕ ತೀವ್ರವಾಗಿ ಖಂಡಿಸು…

● ಡಾ.ಸಿ.ಎಸ್.ದ್ವಾರಕಾನಾ… ಡಾ.ಓ.ಎನ್.ಚಂದ್ರಕಾಂತ್, ಡಾ.ಎ.ಎಸ್.ಪ್ರಭು… ಹರ್ಷಕುಮಾರ್ ಕುಗ್ವೆ, ಲೋಹಿತ್ ನಾ…
ತಳಸ್ತರದ ವೇದಿಕೆಯ ಸದ…

ದಲಿತರ ಮೇಲೆ ಮೋದಿಗೆ ಯಾಕೆ ಪ್ರೀತಿ ಉಕ್ಕಿಬಂತು



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ವಿಮಾನ ಸಿಕ್ಕಾಗಲೆಲ್ಲ ವಿದೇಶಗಳಿಗೆ ಹಾರಿಹೋಗುವ ಪ್ರಧಾನಿ ನರೇಂದ್ರ ಮೋದಿ ಅಲ್ಲೆಲ್ಲ ಹತ್ತಾರು ಬಾರಿ ಚಪ್ಪಾಳೆ ಗಿಟ್ಟಿಸುವಂತಹ ಭಾಷಣಗಳನ್ನು ಬಿಗಿಯುತ್ತಾನೆ. ಆದರೆ ಆತ ಅಪರೂಪಕ್ಕೆ ಭಾರತಕ್ಕೆ ಬಂದಾಗ ಮುಖ್ಯವಾದ ವಿಷಯಗಳ ಬಗ್ಗೆಯೂ 'ಮೌನ' ವಹಿಸುತ್ತಾನೆ. ಈ ಕಾರಣಕ್ಕೋ ಏನೋ ಆತ ಕಳೆದ ಶನಿವಾರ ಮತ್ತು ಭಾನುವಾರ ಎರಡೂ ದಿನ ದಲಿತರ ಮೇಲಾದ ಹಲ್ಲೆಯನ್ನು ಖಂಡಿಸಿದ್ದು ಎಲ್ಲರಲ್ಲೂ - ಆತನ ಅಪಾರ ಭಕ್ತಗಣದಲ್ಲೂ - ಅಚ್ಚರಿ ಮೂಡಿಸಿತು. ರಾಜಕೀಯ ಪಂಡಿತರು ಮತ್ತು ಸಂಪಾದಕೀಯಗಳನ್ನು ಬರೆಯುವವರು ಮೋದಿ ಯಾಕೆ ಹೀಗೆ ಒಂದೇ ವಿಷಯದ ಬಗ್ಗೆ ಸತತವಾಗಿ ಎರಡು ದಿನ ಮಾತನಾಡಿದ ಎಂದು ವಿಶ್ಲೇಷಿಸಿದರು. ಆದರೆ ಮೋದಿಯ ಮಾತಿನ ಹಿಂದಿನ ತರ್ಕಗಳನ್ನು ಸರಿಯಾಗಿ ವಿಶ್ಲೇಷಿಸಿದ್ದು ವಾರ್ತಾ ಭಾರತಿ ಪತ್ರಿಕೆ ಮಾತ್ರ. ದಲಿತರನ್ನು ಥಳಿಸಿದ ಗೋರಕ್ಷಕರನ್ನು ಭಸ್ಮಾಸುರರಿಗೆ ಹೋಲಿಸಿದ ವಾರ್ತಾ ಭಾರತಿ ಸಂಪಾದಕೀಯ ಅವರೀಗ ಮೋದಿಯ ತಲೆಯಮೇಲೆ ತಮ್ಮ ಅಂಗೈಯನ್ನು ಇಡಲು ಮುಂದಾಗಿರುವುದರಿಂದ ಮೋದಿ ಈ ಮಾತುಗಳನ್ನಾಡಿದ್ದಾರೆ ಎಂದು ಸ್ಪಷ್ಟಪಡಿಸಿತ್ತು.

ಇರಲಿ, ಮೋದಿ ತುಂಬಾ ಭಾವುಕನಾಗಿ "ದಲಿತರ ಮೇಲೆ ಬೇಡ, ನನ್ನ ಮೇಲೆ ಹಲ್ಲೆ ಮಾಡಿ" ಎಂದು ಕರೆಕೊಟ್ಟಿದ್ದಾನೆ. ಆದರೆ ಇವತ್ತು ಆತನ ಚಡ್ಡಿ ಬಾಂಧವರು ಮೋದಿಯ ಮಾತುಗಳನ್ನು ಕೇಳುವ ತಾಳ್ಮೆಯನ್ನೂ ಉಳಿಸಿಕೊಂಡಿಲ್ಲ. ಯಾಕೆಂದರೆ ಮೋದಿ "ನಕಲಿ ಗೋರಕ್ಷಕರ" ವಿರುದ್ಧ ಗುಡುಗಿದ ನಂತರವೂ ಹಲವರು ಉತ್ತರ ಪ್ರದೇಶದಲ್ಲಿ ದನ ಸಾಗಿಸುತ್ತಿದ್ದರು ಎಂದು ನಾಲ್ವರ ಮೇಲೆ ದಾಳಿ ಮಾಡಿದ್ದರೆ, ಆಂಧ್ರದಲ್ಲಿ ಸತ್ತ ದನದ ಚರ್ಮ ಸುಲಿಯುತ್ತಿದ್ದರು ಎಂದು ಮೂವರು ದಲಿತರ ಮೇಲೆ ಅಮಾನುಷವಾಗಿ ಹಲ್ಲೆ ಮಾಡಿದ್ದಾರೆ. ಏಟು ತಿಂದ ಮೂವರಲ್ಲಿ ಒಬ್ಬರ ಸ್ಥಿತಿ ಇವತ್ತಿಗೂ ಚಿಂತಾಜನಕವಾಗಿದೆ.


ದಲಿತರ ರಕ್ಷಣೆ ಬಗ್ಗೆ ಅಪಾರ ಕಾಳಜಿಯನ್ನು ಮೋದಿ ವ್ಯಕ್ತಪಡಿಸಿರುವುದನ್ನು ಕೆಲವರು ಮೆಚ್ಚಿಕೊಂಡಿದ್ದಾರೆ. ಆದರೆ ಮೋದಿ ತನ್ನ ಎರಡೂ ಭಾಷಣಗಳಲ್ಲಿ ಎಲ್ಲೂ ದಲಿತರ ಪ್ರಾಣ ದನಗಳ ಪ್ರಾಣಕ್ಕಿಂತ ಮುಖ್ಯ ಎಂದಾಗಲಿ, ಬೀಫ್ ತಿನ್ನುವ ಹಕ್ಕು ಅವರಿಗೆ ಇದೆ ಎಂದಾಗಲಿ, ದನದ ಚರ್ಮ ಸುಲಿದು ಜೀವನೋಪಾಯ ನಡೆಸುವುದು ಕಾನೂನು ವಿರೋಧಿ ಅಲ್ಲ ಎಂದಾಗಲಿ, ಗೋವು ಪವಿತ್ರ ಪ್ರಾಣಿ ಅಲ್ಲ ಎಂದಾಗಲಿ ಹೇಳಿಲ್ಲ. ಬದಲಾಗಿ ನಿಜವಾಗಿಯೂ ಗೋ ಸೇವೆ ಮಾಡುವುದಿದ್ದರೆ ಅವುಗಳು ಪ್ಲಾಸ್ಟಿಕ್ ತಿನ್ನದಂತೆ ನೋಡಿಕೊಳ್ಳಿ ಎಂದೂ, ಅಸಲಿ ಗೋಸೇವಕರು ನಕಲಿ ಗೋಸೇವಕರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದೂ ಮೋದಿ ಅಭಿಪ್ರಾಯಪಟ್ಟಿದ್ದಾನೆ.

ಸಮಸ್ಯೆ ಎದುರಾಗುವುದೇ ಇಲ್ಲಿ. ದೇಶ ಅಂದರೆ ಮನುಷ್ಯರು; ಭೂಪಟವಲ್ಲ ಎಂಬ ಜ್ಞಾನವೂ ಇಲ್ಲದ; ರಾಷ್ಟ್ರೀಯತೆ-ಭಾರತ ಮಾತೆಯ ಭೌತಿಕ ಪಟ-ಗೋವು ಪವಿತ್ರ ಎಂಬ ತತ್ವಗಳನ್ನೇ ತಲೆಗೆ ತುಂಬಿಸಿಕೊಂಡಿರುವ ಆತನ ಭಕ್ತಗಣದ ರೌಡಿಗಳಿಗೆ ಮೊದಲೇ ದಲಿತರೆಂದರೆ ತಿರಸ್ಕಾರದ ಭಾವ. ಜೊತೆಗೆ ದಲಿತರೆಲ್ಲರೂ ಮೀಸಲಾತಿ ಪಡೆದು 'ಉದ್ಧಾರ' ಆಗುತ್ತಿದ್ದಾರೆ ಎಂಬ ಕೋಪ. ಅದರೊಟ್ಟಿಗೆ ದಲಿತರು ಮೂರು ಕೋಟಿ ದೇವತೆಗಳಿರುವ ತಮ್ಮ ಗೋಮಾತೆಯನ್ನು ಸೇವಿಸುತ್ತಾರೆ ಎಂಬ ಸಿಟ್ಟು. ಅದಕ್ಕೆ ಈ ಹೋರಿ ಪುತ್ರರು ದಲಿತರ ಮೇಲೆ ನಿರಂತರವಾಗಿ ದಾಳಿ ಮಾಡುತ್ತಲೇ ಬಂದಿರುವುದು; ಮೋದಿಯ 'ಭಾವುಕ' ಕರೆಯ ನಂತರವೂ ಅದನ್ನು ಮುಂದುವರೆಸುತ್ತಿರುವುದು.

ಮುಖ್ಯವಾಗಿ ಇಲ್ಲಿ ಮೋದಿ ದಲಿತ ಮತಬ್ಯಾಂಕನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಉತ್ತರ ಪ್ರದೇಶದ ದಾದ್ರಿಯಲ್ಲಿ ಇಂತದೇ ಚಡ್ಡಿ ರೌಡಿಗಳು ಮೊಹಮ್ಮದ್ ಅಖ್ಲಾಕ್‌ನನ್ನು ಕೊಂದ 18 ದಿನಗಳ ನಂತರ ಆನಂದ ಬಜಾರ್ ಪತ್ರಿಕೆಗೆ ಕೊಟ್ಟ ಉಚಿತ ಸಂದರ್ಶನದಲ್ಲಿ "ವಿಷಾದಕರ" ಎಂದಷ್ಟೇ ಮೋದಿ ಹೇಳಿದ್ದ; ಆದರೆ ದಲಿತರ ಮೇಲೆ ಗುಜರಾತ್‌ನ ಉನಾದಲ್ಲಿ ದಾಳಿ ನಡೆದ ನಂತರ ಮೋದಿ "ನನ್ನ ದಲಿತ ಸಹೋದರರ ಮೇಲೆ ದಾಳಿ ಮಾಡಬೇಡಿ" ಎಂದಿದ್ದಾನೆ. ದಲಿತರಂತೆ ಮುಸಲ್ಮಾನರೂ ಈ ದೇಶದ ಪ್ರಜೆಗಳಾಗಿದ್ದು ಅವರೂ ದಲಿತರಂತೆ ತನಗೆ ಸಹೋದರರು ಎಂದು ಯಾಕೆ ಮೋದಿಗೆ ಅನಿಸಲಿಲ್ಲ? ಯಾಕೆಂದರೆ ಮೋದಿಗೆ ಗೊತ್ತು; ಹೇಗಿದ್ದರೂ ತನ್ನ ಬಿಜೆಪಿ ಪಕ್ಷಕ್ಕೆ ಮುಸಲ್ಮಾನರು ಓಟು ಹಾಕುವುದಿಲ್ಲ ಎಂದು. ಹಾಗೆಯೇ ಆತನಿಗೆ ಚೆನ್ನಾಗಿ ಗೊತ್ತು; ದಲಿತರ ಮತಗಳಿಲ್ಲದೆ ತನ್ನ ಪಕ್ಷ ಗೆಲ್ಲಲಾರದು ಎಂದು. ಅದಕ್ಕೆ ಇದ್ದಕ್ಕಿದ್ದಂತೆ ದಲಿತರ ಬಗ್ಗೆ ಮೋದಿಗೆ ಪ್ರೀತಿ ಉಕ್ಕಿಬಂದಿದೆ.

ಗುಜರಾತ್‌ನಲ್ಲಿ 2002ರಲ್ಲಿ ನಡೆದ ಮಾರಣಹೋಮದಲ್ಲಿ ಚಡ್ಡಿಗಳಿಗೆ ಕಾಲಾಳುಗಳಾಗಿದ್ದು ಪರಿಶಿಷ್ಟ ವರ್ಗದವರು. ಆಗ ಮುಸಲ್ಮಾನರ ಮೇಲೆ ದಾಳಿ ನಡೆಸಲು ಇದೇ ದಲಿತರನ್ನು ಮೋದಿ ಮತ್ತು ಆತನ ಸಂಘಪರಿವಾರ ಚೆನ್ನಾಗಿ ಉಪಯೋಗಿಸಿಕೊಂಡಿತ್ತು. ಹಾಗೆಯೇ ಕಳೆದ ಲೋಕಸಭೆ ಚುನಾವಣೆಯಲ್ಲಿ 'ಸಬ್ಕಾ ಸಾತ್ ಸಬ್ಕಾ ವಿಕಾಸ್' ಎನ್ನುತ್ತ ದಲಿತರ ಮತಗಳನ್ನೂ ಬಿಜೆಪಿ ಪಡೆದಿತ್ತು. ಇದು ಉತ್ತರ ಪ್ರದೇಶದಲ್ಲಂತೂ ದೊಡ್ಡ ಮಟ್ಟದಲ್ಲಿ ವರ್ಕ್‌ಔಟ್ ಆಗಿತ್ತು. ಆ ರಾಜ್ಯದಲ್ಲಿ ಮಾಯಾವತಿ ನೇತೃತ್ವದ ಬಹುಜನ್ ಸಮಾಜ್ ಪಕ್ಷ ಪ್ರಮುಖವಾದದ್ದು. ಆದರೆ ದಲಿತರು ಆ ಚುನಾವಣೆಯಲ್ಲಿ ಮೋದಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲಿಸಿದ್ದರಿಂದ ಬಿಎಸ್‌ಪಿ ಪಕ್ಷಕ್ಕೆ ಒಂದೇ ಒಂದು ಸೀಟೂ ಗಿಟ್ಟಿರಲಿಲ್ಲ.

ಮುಂದಿನ ವರ್ಷ ಉತ್ತರ ಪ್ರದೇಶದಲ್ಲಿ ಚುನಾವಣೆಗಳು ನಡೆಯಲಿವೆ. ಉನಾ ಪ್ರಕರಣದಿಂದ ದಲಿತರು ಬಿಜೆಪಿಯಿಂದ ದೂರ ಸರಿಯುತ್ತಿದ್ದಾರೆ. ಅದನ್ನು ತಡೆಯಲೆಂದೇ ಮೋದಿ "ಅಯ್ಯೋ ದಲಿತರನ್ನು ಥಳಿಸಬೇಡಿ. ಬೇಕಿದ್ದರೆ ನನ್ನನ್ನೇ ಬಾರಿಸಿ" ಎಂದು ಗೋಗರೆದಿದ್ದಾನೆ. ಆದರೆ ಹಾಗೆ ಗೋಗರೆಯುವಾಗಲೂ ಆತ ಮತ್ತೆ ದಲಿತರನ್ನು ಮುಸಲ್ಮಾನರ ವಿರುದ್ಧ ಎತ್ತಿಕಟ್ಟುವ ಹುನ್ನಾರವನ್ನೂ ಮಾಡಿದ್ದಾನೆ. ಮೋದಿಯ ಇಂತಹ ಕಪಟತನವನ್ನು ಅರ್ಥಮಾಡಿಕೊಳ್ಳದ ನಮ್ಮ ಮುಖ್ಯವಾಹಿನಿಯ ಮಾಧ್ಯಮಗಳು ಆತ ಕೊಟ್ಟ ಕರೆಗೆ ಒತ್ತು ಕೊಟ್ಟವೇ ಹೊರತು ಆತ ಅದೇ ಭಾಷಣದಲ್ಲಿ ಮಾಡಿದ ಕುತಂತ್ರದ ಬಗ್ಗೆ ಪ್ರಸ್ತಾಪಿಸದೇ ಇದ್ದುದ್ದರಿಂದ ಅದನ್ನು ಇಲ್ಲಿ ಹೇಳಬೇಕಿದೆ.



ನಕಲಿ ಗೋಭಕ್ತರ ವಿರುದ್ಧ ತನ್ನ ಮುನಿಸನ್ನು ವ್ಯಕ್ತಪಡಿಸುವ ಮುನ್ನ ಮೋದಿ ಇತಿಹಾಸದ ಒಂದು ಕತೆ ಹೇಳಿದ್ದಾನೆ. ಆತ ಆಡಿದ ಮಾತುಗಳು ಹೀಗಿವೆ: "ಪ್ರಾಚೀನ ಕಾಲದಲ್ಲಿ ನಾವು ಬಾದ್‌ಷಾ ಮತ್ತು ರಾಜನ ನಡುವಿನ ಯುದ್ಧದ ಬಗ್ಗೆ ಕೇಳಿದ್ದೇವೆ. ಆ ಯುದ್ಧದಲ್ಲಿ ಬಾದ್‌ಷಾ ತನ್ನ ಸೈನ್ಯದ ಮುಂಭಾಗದಲ್ಲಿ ಗೋವುಗಳನ್ನು ನಿಲ್ಲಿಸಿದ್ದ. ಅವನ್ನು ಕಂಡು ರಾಜನಿಗೆ ಉಭಯಸಂಕಟವಾಯಿತು. ಬಾದ್‌ಷಾನ ಸೈನ್ಯದ ವಿರುದ್ಧ ಹೋರಾಡಬೇಕೆಂದರೆ ರಾಜ ಗೋವುಗಳನ್ನು ಸಾಯಿಸಬೇಕು. ಗೋವುಗಳನ್ನು ಸಾಯಿಸಿದರೆ ಪಾಪ ತಟ್ಟುತ್ತದೆ. ಈ ಉಭಯಸಂಕಟದಲ್ಲೇ ರಾಜ ಯುದ್ಧದಲ್ಲಿ ಸೋತ." ಇಲ್ಲಿ ಎರಡು ಮುಖ್ಯ ಅಂಶಗಳನ್ನು ಗಮನಿಸಬೇಕು. ಮೊದಲನೆಯದಾಗಿ ಮೋದಿ ಇಲ್ಲಿ ಬಾದ್‌ಷಾ ಎಂದು ಕರೆದಿರುವುದು ಘಾಜಿ ಸೈಯದ್ ಸಾಲಾರ್ ಮಸೂದ್ ಎಂಬಾತನನ್ನು ಮತ್ತು ರಾಜ ಎಂದಿರುವುದು ಸುಹೇಲ್‌ದೇವ್ ಎಂಬುವವನನ್ನು. ಇವರಿಬ್ಬರೂ ಹನ್ನೊಂದನೆ ಶತಮಾನದಲ್ಲಿ ಬದುಕಿದ್ದವರು. ಮಸೂದ್ ಘಾಜ್ನಿಯಿಂದ ಭಾರತದ ಮೇಲೆ ದಾಳಿ ಮಾಡಲು ಬಂದಿದ್ದ ಮುಸಲ್ಮಾನ ಸೈನ್ಯಾಧಿಕಾರಿಯಾದರೆ, ಸುಹೇಲ್‌ದೇವ್ ದಲಿತನಾದರೂ ಉತ್ತರ ಪ್ರದೇಶದಲ್ಲಿ ಒಂದು ಸಾಮ್ರಾಜ್ಯದ ರಾಜನಾಗಿದ್ದ. ಇವರಿಬ್ಬರ ಕತೆಯನ್ನು ಹೇಳುವ ಮೂಲಕ ಮೋದಿ ಮತ್ತದೇ ಮುಸಲ್ಮಾನರ ವಿರುದ್ಧ ದಲಿತರನ್ನು ಎತ್ತಿಕಟ್ಟಲು ಯತ್ನಿಸಿದ್ದಾನೆ.

ಎರಡನೆಯದಾಗಿ, ದಲಿತ ರಾಜ ಸುಹೇಲ್‌ದೇವ್ ಯುದ್ಧದಲ್ಲಿ ಸೋತರೂ ಪರವಾಗಿಲ್ಲ ಎಂದೇ ಆತ ಗೋವುಗಳನ್ನು ಸಾಯಿಸಲಿಲ್ಲ ಎಂಬ ಸಂದೇಶವನ್ನು ರವಾನಿಸುವ ಮೂಲಕ ಈಗಿನ ದಲಿತರೂ ಆ ರಾಜನಂತೆ ಗೋವುಗಳನ್ನು ರಕ್ಷಿಸಬೇಕು, ಪೂಜಿಸಬೇಕು, ಕೊಲ್ಲದೆ ಪಾಪದಿಂದ ಮುಕ್ತರಾಗಬೇಕು ಎಂದು ಪರೋಕ್ಷವಾಗಿ ಸೂಚಿಸಿದ್ದಾನೆ. ಅದರಲ್ಲೂ ಉತ್ತರಪ್ರದೇಶದಲ್ಲಿ ಈಗಲೂ ಜನಪ್ರಿಯತೆಯನ್ನು ಹೊಂದಿರುವ ದಲಿತ ರಾಜ ಸುಹೇಲ್‌ದೇವ್ ಬಗ್ಗೆ ಪ್ರಸ್ತಾಪಿಸುವ ಮೂಲಕ ಆ ರಾಜ್ಯದ ದಲಿತರ ಮನವೊಲಿಸಲು ಯತ್ನಿಸಿದ್ದಾನೆ ಮೋದಿ.

ಆದರೆ ಐತಿಹಾಸಿಕ ವಾಸ್ತವ ಬೇರೆಯದೇ ಇದೆ. ಅಲೆಕ್ಸಾಂಡರ್‌ನನ್ನು ಬಿಹಾರದ ತನಕ ಎಳೆದುತಂದಿದ್ದ, ಪಾಕಿಸ್ತಾನದಲ್ಲಿರುವ ತಕ್ಷಶಿಲಾವನ್ನೂ ಬಿಹಾರಕ್ಕೆ ಸ್ಥಳಾಂತರಿಸಿದ್ದ ಮೋದಿ, ಈ ಬಾರಿಯೂ ಒಂದು ಐತಿಹಾಸಿಕ ಘಟನೆಯನ್ನು ತನಗೆ ಬೇಕಾದಂತೆ ತಿರುಚಿದ್ದಾನೆ. ಮಸೂದ್ 1034ರಲ್ಲಿ ಈಗಿನ ಉತ್ತರ ಪ್ರದೇಶದಲ್ಲಿ ಇದ್ದ ಸಾಮ್ರಾಜ್ಯಗಳ ಮೇಲೆ ದಾಳಿ ಮಾಡಲು ಬಂದಾಗ ಭರೈಚ್ ಮತ್ತು ಸುತ್ತಮುತ್ತಲಿನ ಹಿಂದೂ ರಾಜರು ಒಂದು ಒಕ್ಕೂಟವನ್ನು ಮಾಡಿಕೊಂಡು ಆತನ ವಿರುದ್ಧ ಸೆಣೆಸಾಡುತ್ತಿದ್ದರು. ಆದರೆ ಅವರನ್ನೆಲ್ಲ ಮಸೂದನ ಸೈನ್ಯ ಸೋಲಿಸಿತ್ತು. ಕೊನೆಗೆ ರಾಜ ಸುಹೇಲ್‌ದೇವ್ ಆ ಯುದ್ಧವನ್ನು ಸೇರಿಕೊಂಡ. ಆದರೆ ಮೋದಿ ಹೇಳಿದಂತೆ ರಾಜ ಸುಹೇಲ್‌ದೇವ್ ಗೋವುಗಳನ್ನು ಸಾಯಿಸದೇ ಇದ್ದದ್ದರಿಂದ ಸೋಲಲಿಲ್ಲ. ಬದಲಾಗಿ ಸುಹೇಲ್‌ದೇವ್ ಯುದ್ಧದಲ್ಲಿ ಗೆದ್ದು ಮಸೂದ್ ಯುದ್ಧ ಭೂಮಿಯಲ್ಲಿ ಸತ್ತ. ಆತ ಸತ್ತ ಜಾಗದಲ್ಲಿ ಒಂದು ದರ್ಗಾವನ್ನು ಕಟ್ಟಲಾಗಿದೆ. ಮಸೂದನ ಸೈನ್ಯದ ಮುಂದೆ ಗೋವುಗಳು ಇದ್ದವೆಂದೂ, ಅದರಿಂದಾಗಿ ಉಭಯಸಂಕಟಕ್ಕೆ ಬಿದ್ದ ರಾಜ ಸುಹೇಲ್‌ದೇವ್ ಸೋತ ಎಂಬುದೆಲ್ಲಾ ಚಡ್ಡಿಗಳು ಆನಂತರ ಹೆಣೆದ ಕಾಲ್ಪನಿಕ ಕತೆಗಳಾಗಿವೆ.

"ದಲಿತರ ಮೇಲಿನ ದಾಳಿಗೆ ರಾಜಕೀಯ ಬೆರೆಸಿ ಸಮಾಜದಲ್ಲಿ ಬಿರುಕುಗಳನ್ನು ಮೂಡಿಸದಿರಿ" ಎಂದಿರುವ ಮೋದಿಯೇ ಹೀಗೆ ದಲಿತರು ಮತ್ತು ಮುಸಲ್ಮಾನರ ನಡುವೆ ಬಿರುಕು ಮೂಡಿಸಲು ಯತ್ನಿಸಿದ್ದಾನೆ.

ಮೋದಿ ಅಸಲಿ ಗೋಸೇವಕರು ನಕಲಿ ಗೋರಕ್ಷಕರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಿದೆ ಎಂದೂ ಹೇಳಿದ್ದಾನೆ. ಆದರೆ ಅಸಲಿ ಮತ್ತು ನಕಲಿ ಎಂದು ವಿಂಗಡಿಸುವುದು ಹೇಗೆ? ಯಾರು ಅಸಲಿ ಯಾರು ನಕಲಿ ಎಂದು ಸರ್ಟಿಫಿಕೇಟ್ ಕೊಡುವವರು ಯಾರು? ಕೇಸರಿ ಶಾಲುಗಳನ್ನು ಹೊದ್ದು ಕೋಮು ಕಿತಾಪತಿ ಮಾಡುವ ವಿಶ್ವ ಹಿಂದೂ ಪರಿಷತ್ತಿನ ಸದಸ್ಯರು ಮತ್ತು ಕೇಸರಿ ತಿಲಕಗಳನ್ನು ಹಚ್ಚಿಕೊಂಡು ಜನರನ್ನು ಥಳಿಸುವ ಭಜರಂಗದಳದವರು ಅಸಲಿ ಗೋ ಸೇವಕರಾಗಿದ್ದು ದನಗಳನ್ನು ಸಾಕುವ, ಅವುಗಳ ಮೈ ತಿಕ್ಕುವ, ಸಗಣಿ ಬಳಿಯುವ ರೈತರು ನಕಲಿ ಗೋರಕ್ಷಕರೆ? ದೊಗಳೆ ಖಾಕಿ ಚಡ್ಡಿಗಳನ್ನು ಧರಿಸುವ ಆದರೆ ದನಗಳನ್ನ ಸಾಕದ ಆರೆಸ್ಸೆಸಿಗರು ಅಸಲಿ ಆಗಿದ್ದು ದನದ ಚರ್ಮ ಸುಲಿಯುವ, ದನದ ಮಾಂಸ ಮಾರುವ ಬಡವರು ನಕಲಿಗಳೆ?


ಅಸಲಿ ಸಂಗತಿ ಯಾವುದೆಂದರೆ ಗೋರಕ್ಷಕರು ಎಂಬ ರೌಡಿ ಪಡೆಗಳಿಗೆ ಜನ್ಮ ನೀಡಿದ್ದೇ ಮೋದಿ. ಆತ ಬಹಳ ಕಾಲದಿಂದ ಗೋರಕ್ಷಣೆ ಪರವಾಗಿಯೂ, ದನದ ಮಾಂಸ ರಫ್ತಿನ ವಿರುದ್ಧವೂ ದನಿ ಎತ್ತುತಲೇ ಬಂದಿದ್ದಾನೆ. 2012ರಲ್ಲಿ ಆತ ಜೈನ ಉದ್ಯಮಿಗಳ ಸಭೆಯನ್ನು ಉದ್ದೇಶಿಸಿ ಹೀಗೆ ಹೇಳಿದ್ದ: "ಇವತ್ತು ಕೇಂದ್ರ ಸರ್ಕಾರ ವಿಶ್ವದಾದ್ಯಂತ ಗೋಮಾಂಸವನ್ನು ರಫ್ತು ಮಾಡಿ ದೇಶದಲ್ಲಿ ಪಿಂಕ್ ಕ್ರಾಂತಿಯನ್ನು ತರುವುದಾಗಿ ಹೇಳುತ್ತಿದೆ. ಈ ವರ್ಷ ಭಾರತ ವಿಶ್ವದ ಅತ್ಯಂತ ದೊಡ್ಡ ಗೋಮಾಂಸ ರಫ್ತುದಾರ ಎಂದು ಘೋಷಿಸಿದೆ. ಇದು ಹೆಮ್ಮೆ ಪಡುವಂತಹ ವಿಚಾರವೇ? ಸಹೋದರ ಮತ್ತು ಸಹೋದರಿಯರೆ, ಇದನ್ನು ಕೇಳಿ ನಿಮಗೆ ಬೇಸರವಾಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ, ಆದರೆ ನನ್ನ ಹೃದಯವಂತೂ ಕೋಪದಿಂದ ಕಿರುಚಿಕೊಳ್ಳುತ್ತಿದೆ. ಇದನ್ನೆಲ್ಲ ನೀವುಗಳು ಯಾಕೆ ಸುಮ್ಮನೆ ಸಹಿಸಿಕೊಂಡಿದ್ದೀರಿ ಎಂಬುದೇ ನನಗೆ ಅರ್ಥವಾಗುತ್ತಿಲ್ಲ."

ಮಹಾರಾಣಾ ಪ್ರತಾಪನ ಜನ್ಮ ದಿನೋತ್ಸವದ ಸಂದರ್ಭದಲ್ಲೂ ಮೋದಿ ಹೀಗೆ ಹೇಳಿದ್ದ: "ರಾಣಾ ಪ್ರತಾಪ್ ಗೋರಕ್ಷಣೆಗಾಗಿ ತಮ್ಮ ಜೀವವನ್ನೇ ಮುಡುಪಾಗಿಟ್ಟಿದ್ದರು. ಗೋರಕ್ಷಣೆಗಾಗಿ ಅವರು ಯುದ್ಧಗಳಲ್ಲಿ ಹೋರಾಡಿ ಯುವಕರನ್ನು ತ್ಯಾಗ ಮಾಡಿದ್ದರು. ಆದರೆ ಇವತ್ತು ಏನು ನಡೆಯುತ್ತಿದೆ? ಸುಪ್ರೀಂಕೋರ್ಟ್ ಕೂಡ ರಾಷ್ಟ್ರೀಯ ಗೋರಕ್ಷಣಾ ಕಾನೂನನ್ನು ಜಾರಿಗೆ ತರಬೇಕು ಎಂದಿದೆ. ಆದರೆ ಮತ ಬ್ಯಾಂಕ್ ರಾಜಕೀಯದಿಂದಾಗಿ ಕೇಂದ್ರ ಸರ್ಕಾರ ಅಂತಹ ಕಾನೂನನ್ನು ಜಾರಿಗೆ ತರುತ್ತಿಲ್ಲ. ಆದ್ದರಿಂದ ನಾನು ಇಂದು ಹೆಮ್ಮೆಯಿಂದ ರಾಣಾ ಪ್ರತಾಪರನ್ನು ನೆನೆಯುತ್ತಿದ್ದೇನೆ. ಇವತ್ತು ನಾವೆಲ್ಲ ಹಸಿರು ಕ್ರಾಂತಿ, ಬಿಳಿ ಕ್ರಾಂತಿಯ ಬಗ್ಗೆ ಮಾತನಾಡುತ್ತಿದ್ದರೆ ಕೇಂದ್ರ ಸರ್ಕಾರ ಪಿಂಕ್ ಕ್ರಾಂತಿಯ ಬಗ್ಗೆ ಮಾತಾಡುತ್ತಿದೆ. ಹಣ ಸಂಪಾದಿಸಲು ಗೋಮಾತೆಯನ್ನು ಬಲಿ ಕೊಡಲಾಗುತ್ತಿದೆ."

2014ರ ಚುನಾವಣಾ ಪ್ರಚಾರದ ಸಮಯದಲ್ಲೂ ಮೋದಿ ಪಿಂಕ್ ಕ್ರಾಂತಿಯ ವಿರುದ್ಧ ಮಾತನಾಡುವ ಮೂಲಕ ಚಡ್ಡಿಗಳಲ್ಲಿ 'ಗೋಭಕ್ತಿ' ಉಲ್ಬಣಿಸುವಂತೆ ಮಾಡಿದ್ದ. ಒಂದು ಭಾಷಣದಲ್ಲಿ ಆತ ಹೀಗೆ ಹೇಳಿದ್ದ: "ನಾನು ಇವತ್ತು ದ್ವಾರಕಾ ನಗರದಿಂದ ಬರುತ್ತಿದ್ದೇನೆ. ದ್ವಾರಕಾ ಯದುವಂಶೀಯರ ನಾಡು. ಶ್ರೀಕೃಷ್ಣನನ್ನು ಪೂಜಿಸುವ ಯಾದವರು ಗೋವುಗಳನ್ನು ಸಾಕುತ್ತಾರೆ, ಅವುಗಳ ಸೇವೆ ಮಾಡುತ್ತಾರೆ. ಆದರೆ ಇವತ್ತು ಇದೇ ಯಾದವರ ನಾಯಕರು ಗೋವು ಕಟುಕರೊಂದಿಗೆ ಒಂದೇ ಹಾಸಿಗೆಯಲ್ಲಿ ಮಲಗಿದ್ದಾರೆ. ಮುಲಾಯಂ ಸಿಂಗ್ ಯಾದವ್ ಮತ್ತು ಲಾಲೂ ಪ್ರಸಾದ್ ಯಾದವ್ ಅವರನ್ನು ನಾನು ಪ್ರಶ್ನಿಸುತ್ತೇನೆ: ಪಿಂಕ್ ಕ್ರಾಂತಿಯನ್ನು ತರಬಯಸುವವರನ್ನು ನೀವು ಯಾಕೆ ಬೆಂಬಲಿಸುತ್ತೀರಿ ಎಂದು. ನಮ್ಮ ದೇಶದಾದ್ಯಂತ ಗೋವುಗಳನ್ನು ಕೊಲ್ಲಲಾಗುತ್ತಿದೆ. ಅವುಗಳನ್ನು ಕದ್ದು ಬಾಂಗ್ಲಾ ದೇಶಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಅಷ್ಟೇ ಅಲ್ಲ ಗೋವುಗಳನ್ನು ಸಾಕುವವರಿಗೆ ಸಹಾಯ ಧನ ನೀಡದ ಕೇಂದ್ರ ಸರ್ಕಾರ ಗೋವುಗಳ ವಧೆ ಮಾಡುತ್ತಿರುವವರಿಗೆ ಸಬ್ಸಿಡಿ ಕೊಡುತ್ತಿದೆ."

ಹೀಗೆ ಗೋವು ರಕ್ಷಣೆಗೆ ಯುವಕರ ಪ್ರಾಣ ಹೋದರೂ ಪರವಾಗಿಲ್ಲ, ಗೋವುಗಳನ್ನು ಕೊಲ್ಲಬಾರದು ಎಂದೆಲ್ಲ ದೇಶದಾದ್ಯಂತ ಮೋದಿ ಅರ್ಭಟಿಸಿದ್ದರಿಂದಲೇ ಇವತ್ತು ಪಾಪಿಷ್ಟ ಗೋರಕ್ಷಕರೆಂಬ ಗೂಂಡಾಗಳು ಹುಟ್ಟಿಕೊಂಡಿರುವುದು; ಮುಸಲ್ಮಾನರ ಕೊಲೆ ಮತ್ತು ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿರುವುದು.

ಈ ರೌಡಿಗಳು ಮೋದಿಯ ಪಾಪದ ಪಿಂಡಗಳಲ್ಲದೆ ಮತ್ತೇನಲ್ಲ. ●


ಕೆಂಪಯ್ಯ

ಟಾರ್ಗೆಟ್ ಕೆಂಪಯ

ವರಸೆ-1

* ಲಿಕ್ಕರ್ ಮಾಫಿಯಾ ವಿರುದ್ಧ ಧೀರೋದ್ದಾತ ಹೋರಾಟ ನಡೆಸಿದ ಡಿವೈಎಸ್‌ಪಿ ಅನುಪಮಾ ಶೆಣೈಗೆ ಇಷ್ಟೆಲ್ಲಾ ಕಿರುಕುಳ ನೀಡಿದ ಈ ಐಪಿಎಸ್ ಅಧಿಕಾರಿಗೆ ಗೃಹ ಇಲಾಖೆಗೆ ವಿಶೇಷ ಸಲಹೆಗಾರರಾದ ನಿವೃತ್ತ ಐಪಿಎಸ್ ಕೆಂಪಯ್ಯನವರೇ ಕುಮ್ಮಕ್ಕು ಕೊಡುತ್ತಿದ್ದಾರೆ.

- ಮೇಲ್ಜಾತಿ ರಿಯಲ್ ಎಸ್ಟೇಟ್ ಮಾಫಿಯಾ ಮಾಲಿಕತ್ವದ ನ್ಯೂಸ್ ಚಾನಲ್ಲೊಂದರ ಆ್ಯಂಕರ್‌ನ ಆರೋಪ

ವರಸೆ-2

* ಇದು ಜಾತಿ ತಾರತಮ್ಯವನ್ನೇ ಉದ್ದೇಶವಾಗಿರಿಸಿಕೊಂಡ ಸರ್ಕಾರ. ಮುಖ್ಯಮಂತ್ರಿಗಳ ಕಚೇರಿಯಲ್ಲಿ ಗೌಡರು, ಲಿಂಗಾಯತರು, ಬ್ರಾಹ್ಮಣರಿಗೆ ಸಂಬಂಧಪಟ್ಟ ಯಾವುದೇ ಫೈಲುಗಳು ಬಂದರೂ ಅದನ್ನು 'ಜಿಲೇಬಿ' ಫೈಲುಗಳೆಂದು ವಿಶೇಷ ಕೋಡ್‌ವರ್ಡ್ ಮೂಲಕ ವಾಪಸ್ಸು ಕಳಿಸಲಾಗುತ್ತದೆ. ಈ 'ಜಿಲೇಬಿ' ಎಂಬ ಸಂಕೇತ ಪದದ ಸಂಕ್ಷಿಪ್ತ ರೂಪವೇ ಜಿ.ಎಲ್.ಬಿ! ಅಂದರೆ ಗೌಡ, ಲಿಂಗಾಯತ, ಬ್ರಾಹ್ಮಣ ಎಂದರ್ಥ. ಈ ಮೂರು ಜಾತಿಯ ಅಧಿಕಾರಿಗಳ ಯಾವುದೇ ಬಡ್ತಿ, ನೇಮಕಾತಿ, ಬಿಲ್ಲು, ಟೆಂಡರ್ ಯಾವುದಕ್ಕೂ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಆಸ್ಪದವಿಲ್ಲ.

- ಎಚ್.ಡಿ. ಕುಮಾರಸ್ವಾಮಿ, ಕಲ್ಲಪ್ಪ ಹಂಡಿಭಾಗ್ ಆತ್ಮಹತ್ಯೆ ವಿರುದ್ಧ ಹುಬ್ಬಳ್ಳಿಯ ಪತ್ರಿಕಾಗೋಷ್ಠಿಯಲ್ಲಿ!

ವರಸೆ-3

* ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆಗೆ ಸರ್ಕಾರದ ಜಾತಿ ತಾರತಮ್ಯವೇ ಮುಖ್ಯ ಕಾರಣ. ಡಿವೈಎಸ್‌ಪಿ ಅನುಪಮಾ ರಾಜಿನಾಮೆ ನೀಡುವುದಕ್ಕೆ ಇರುವ ಕಾರಣವೇ ಗಣಪತಿ ಆತ್ಮಹತ್ಯೆಗೂ ಕಾರಣವಾಗಿದೆ. ನಿರ್ದಿಷ್ಟ ಜಾತಿಗಳ ಅಧಿಕಾರಿಗಳಿಗೆ ಈ ಸರ್ಕಾರದಲ್ಲಿ ಯಾವುದೇ ರಕ್ಷಣೆಯಿಲ್ಲ, ಇದು ಕೆಲವೇ ಜಾತಿಗಳ ಭ್ರಷ್ಟ ಅಧಿಕಾರಿಗಳ ಹಿತ ಕಾಯುವ ಸರ್ಕಾರ!

- ಜಗದೀಶ್ ಶೆಟ್ಟರ್, ವಿಧಾನಮಂಡಲದ ಅಧಿವೇಶನದಲ್ಲಿ

ವರಸೆ-4

ಈ ಸರ್ಕಾರದಲ್ಲಿ ಆಯ್ದ ಕೆಲವೇ ಜಾತಿಗಳ ಅಧಿಕಾರಿಗಳಿಗಷ್ಟೇ ಬಡ್ತಿ ಪೋಸ್ಟಿಂಗ್, ಅನುಕೂಲ ಎಲ್ಲವೂ ನಡೆಯುತ್ತಿದೆ. ತಮಗೆ ಆಗದ ಅಧಿಕಾರಿಗಳನ್ನು ಹುಡುಕಿ ಹುಡುಕಿ ಟಾರ್ಚರ್ ಕೊಡುತ್ತಿದ್ದಾರೆ.

- ಆತ್ಮಹತ್ಯೆಗೂ ಮುನ್ನ ಡಿವೈಎಸ್‌ಪಿ ಗಣಪತಿ ಚಾನಲ್ಲೊಂದಕ್ಕೆ ನೀಡಿದ ಸಂದರ್ಶನದಲ್ಲಿ

ವರಸೆ-5


ನಾಡಿನ ಯುವಜನತೆ ಜಾತಿ ತಾರತಮ್ಯದ ವಿರುದ್ಧ ಸಿಡಿದೇಳಬೇಕು. ಈ ನಿಟ್ಟಿನಲ್ಲಿ... ಸೇನೆ ರಾಜ್ಯಾದ್ಯಂತ ಯುವಕರನ್ನು ಸಂಘಟಿಸಲಿದೆ.. ಇನ್ನು ಕೈಕಟ್ಟಿ ಕೂತರೆ ಇಲ್ಲಿ ಯಾರಿಗೂ ಉಳಿಗಾಲವಿಲ್ಲ, ಅನ್ಯಾಯದ ವಿರುದ್ಧ ಯುವಕರು ಆಯುಧ ಹಿಡಿಯಬೇಕು...!

- ಸೋಕಾಲ್ಡ್ ಕನ್ನಡಪರ ಸಂಘಟನೆಯೊಂದರ ಮಾಜಿ ಡಾನ್ ಉವಾಚ

ಮೇಲಿನ ಎಲ್ಲಾ ಹೇಳಿಕೆಗಳು ಪರಸ್ಪರ ಒಂದಕ್ಕೊಂದು ಸಂಬಂಧವಿಲ್ಲದ ಪ್ರತ್ಯೇಕ ಪ್ರಸಂಗಗಳೇ. ವಿಧಾನಮಂಡಲದಲ್ಲಿ ವಿರೋಧಿ ನಾಯಕ ಶೆಟ್ಟರ್ ಗಣಪತಿ ಆತ್ಮಹತ್ಯೆಗೂ ಸರ್ಕಾರದ ತಳ ಸಮುದಾಯಗಳ ಪುಷ್ಟೀಕರಣಕ್ಕೂ ಜಾತಿ ಹಣೆಪಟ್ಟಿ ಅಂಟಿಸುತ್ತಿದ್ದರೆ ಅದನ್ನು ಜೆಡಿಎಸ್ ನಾಯಕ ಕುಮಾರಸ್ವಾಮಿ ಬೆಂಬಲಿಸುತ್ತಾರೆ. ಮತ್ತೊಂದೆಡೆ ಕುಮಾರಸ್ವಾಮಿಯೇ ನೇರವಾಗಿ ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣ ಸಮುದಾಯದ ಗುತ್ತಿಗೆದಾರರು, ಅಧಿಕಾರಿಗಳ ಫೈಲುಗಳನ್ನು ಮುಖ್ಯಮಂತ್ರಿಗಳ ಕಚೇರಿಯಲ್ಲೇ ಅಸ್ಪೃಶ್ಯತೆಗೀಡುಮಾಡುತ್ತಾರೆಂದು ಆರೋಪಿಸುತ್ತಾರೆ. ಈ ರೀತಿ ಗೌಡ, ಲಿಂಗಾಯತ ಮತ್ತು ಬ್ರಾಹ್ಮಣ ಅಂದರೆ ಜಿಎಲ್‌ಬಿ ಎಂದು ಸಂಕೇತಾಕ್ಷರದಲ್ಲಿ 'ಜಿಲೇಬಿ' ಫೈಲುಗಳೆಂದು ಹಣೆಪಟ್ಟಿ ಹಾಕಿ ವಾಪಸ್ಸು ಮಾಡಲಾಗುತ್ತಿದೆ ಎಂಬುದಕ್ಕೆ ಓರ್ವ ಜವಾಬ್ದಾರಿಯುತ ನಾಯಕನಾಗಿ ಕುಮಾರ ಸ್ವಾಮಿ ಒಂದಾದರೂ ಉದಾಹರಣೆ ಕೊಡಬೇಕಲ್ಲವೆ?


ಕುಮಾರಣ್ಣನದು ಮುಖ್ಯಮಂತ್ರಿಯ ವಾಚ್ ಪ್ರಕರಣದಲ್ಲಿ ಕದ್ದ ವಾಚೆಂಬ ತನ್ನದೇ ಆರೋಪವನ್ನು ಸಾಬೀತುಪಡಿಸದೇ ಪರಾರಿಯಾದ ಹಾಗೆಯೇ 'ಜಿಲೇಬಿ' ಫೈಲುಗಳ ವಿಷಯದಲ್ಲೂ ಹಿಟ್ ಅಂಡ್ ರನ್ ಬುದ್ಧಿಯೇ...!

ಆದರೆ ಇಂಥ ತಲೆಬುಡವಿಲ್ಲದ ಕುಮಾರಸ್ವಾಮಿಯ ಆರೋಪಗಳಿಗೆಲ್ಲ ಪ್ರಮುಖ ನಾಲ್ಕು ನ್ಯೂಸ್ ಚಾನಲ್ಲುಗಳು ನೀಡುತ್ತಿರುವ ಕುಮ್ಮಕ್ಕಿದೆಯಲ್ಲ; ಅದು ಒಂದು ಸುಳ್ಳನ್ನು ಪದೇಪದೇ ಹೇಳುವ ಮೂಲಕ ಸತ್ಯವನ್ನಾಗಿಸುವ ಗೋಬೆಲ್ಸ್‌ನ ಧೂರ್ತ ಥಿಯರಿಯೆ. ನಿಜಕ್ಕೂ ಸಿದ್ದು ಸರ್ಕಾರದಲ್ಲಿ ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣ ಅಧಿಕಾರಿಗಳನ್ನು ದಮನಿಸಲಾಗುತ್ತಿದೆಯೇ? ಜಾತಿಯ ಕಾರಣಕ್ಕೇ ಇಂಥ ಮೇಲ್ಜಾತಿಗಳ ಫೈಲುಗಳನ್ನು ಮುಖ್ಯಮಂತ್ರಿ ಕಚೇರಿಯಲ್ಲಿ ಅದುಮಿಡಲಾಗುತ್ತಿದೆ ಎಂಬುದೇ ನಿಜವಾಗಿದ್ದರೆ ಶೆಟ್ಟರ್, ಕುಮಾರಸ್ವಾಮಿಗಳೇ ಆರೋಪಿಸುವಂತೆ ಇದು ಭ್ರಷ್ಟರ ಸರ್ಕಾರ, ಪ್ರತಿ ಫೈಲುಗಳನ್ನೂ ಪರ್ಸೆಂಟೇಜಿನ ಮೇಲೆ ವಿಲೇವಾರಿ ಮಾಡಲಾಗುತ್ತದೆ, ಮಂತ್ರಿಗಳೆಲ್ಲ ಲಂಚ ಹೊಡೆಯು ವುದಕ್ಕೆಂದೇ ನಿಂತಿದ್ದಾರೆಂಬ ಆರೋಪ ಅರ್ಥ ಕಳೆದುಕೊಳ್ಳುವುದಿಲ್ಲವೆ?


ಶೆಟ್ಟರ್

ಅಂದರೆ ಈ ಸರ್ಕಾರದಲ್ಲಿ ಮೇಲ್ಜಾತಿಯವರ ಲೂಟಿಗೆ ಆಸ್ಪದವಿಲ್ಲವೆಂಬ ಕಟುಸತ್ಯವನ್ನು ಮೇಲ್ಜಾತಿಯದ್ದೇ ಪ್ರತಿನಿಧಿಗಳಾದ ಕುಮಾರಸ್ವಾಮಿ ಮತ್ತು ಶೆಟ್ಟರ್ ತಮಗರಿವಿಲ್ಲದೆಯೇ ಬಾಯಿಬಿಡುತ್ತಿದ್ದಾರಾ? ಇವರುಗಳ ಮಾತಿನ ಪ್ರಕಾರವೇ ಹೇಳುವುದಾದರೆ ಜಿಲೇಬಿ ಫೈಲುಗಳನ್ನು ಹಿಮ್ಮೆಟ್ಟಿಸುವ ಮೂಲಕ ಸಿದ್ದು ಸರ್ಕಾರ ದಶಕಾದಿಗಳಿಂದಲೂ ದಮನಕ್ಕೊಳಗಾಗುತ್ತಲೇ ಬಂದಿರುವ ತಳ ಸಮುದಾಯಗಳು ಅಂದರೆ ಕುರುಬರು, ಈಡಿಗರು, ವಾಲ್ಮೀಕಿ, ಬೆಸ್ತರು, ದಲಿತರು, ಕ್ರೈಸ್ತರು, ಮುಸ್ಲಿಮರು, ತಿಗಳರು, ಗಾಣಿಗರು, ಲಂಬಾಣಿ, ಬುಡಕಟ್ಟು ಸಮುದಾಯಗಳ ಅಧಿಕಾರಿಗಳಿಗೆ ಆಯಕಟ್ಟಿನ ಹುದ್ದೆಗಳು, ಬಡ್ತಿ, ಈ ಹಿಂದೆ ಮೇಲ್ಜಾತಿಯ ಅಧಿಕಾರಿಗಳಿಂದಾದ ಕಿರುಕುಳ, ತಾರತಮ್ಯಗಳ ವಿರುದ್ಧ ಯಾವುದೋ ಒಂದು ರೀತಿಯಲ್ಲಿ ನಷ್ಟ ಪರಿಹಾರ ಕಾರ್ಯಾಚರಣೆಗೆ ಕೈಯಿಟ್ಟಿದೆಯೆಂದೇ ತಾನೇ ಅರ್ಥ?

ಮೇಲುನೋಟಕ್ಕೆ ಬಿಜೆಪಿ ನಾಯಕ ಶೆಟ್ಟರ್ ಮತ್ತು ಜೆಡಿಎಸ್ ನಾಯಕ ಕುಮಾರಸ್ವಾಮಿ 'ಜಿಲೇಬಿ ಫೈಲುಗಳ' ಮುಖ್ಯಮಂತ್ರಿ ಕಚೇರಿ ಕೋಡ್ ತಾರತಮ್ಯದ ವಿರುದ್ಧ


ಸಿದ್ದು ಪರಮೇಶ್ವರ

ದನಿಯೆತ್ತುತ್ತಿರುವುದೇ ಅವರ ಮೇಲ್ಜಾತಿಗಳ ಪರವಾದ ಹಿತಾಸಕ್ತಿಯ ವಕಾಲತ್ತನ್ನು ಸಿದ್ದರಾಮಯ್ಯನವರ ಸರ್ಕಾರದ ಅಹಿಂದ ಪರವಾದ ಪ್ರಾಮಾಣಿಕ ಕಾಳಜಿಯನ್ನೂ ಸಾಬೀತುಪಡಿಸುತ್ತಿಲ್ಲವೇ? ಅಂದರೆ ಬಿಜೆಪಿ, ಜೆಡಿಎಸ್‌ಗಳೇ ಸಿದ್ದು ಸರ್ಕಾರದ ತಳಸಮುದಾಯಗಳ ಪರವಾದ ಬದ್ಧತೆಗೆ ಸರ್ಟಿಫಿಕೇಟು ಕೊಡುತ್ತಿದ್ದಾರೆ?

ಇದೊಂಥರದ ವಿಚಿತ್ರ ಮತ್ತು ಕುಟಿಲ ಕಾರ್ಯತಂತ್ರವೆ. ಕಲ್ಲಪ್ಪ ಹಂಡಿಭಾಗ್ ಆತ್ಮಹತ್ಯೆ ಮಾಡಿಕೊಂಡಿದ್ದೇ ಅನುಪಮಾ ಶೆಣೈ ಪರ ತುತ್ತೂರಿ ಊದುತ್ತಿದ್ದ ಮೇಲ್ಜಾತಿ ನ್ಯೂಸ್ ಚಾನಲ್ಲುಗಳಿಗೆ ಸಿದ್ದು ಸರ್ಕಾರದ ವಿರುದ್ಧ ಹೊಸ ಅಸ್ತ್ರ ಸಿಕ್ಕಂತಾಯಿತು. ಅನುಪಮಾ ಶೆಣೈ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಖಡ್ಗ ಝಳಪಿಸಿದ ಝಾನ್ಸಿರಾಣಿಯೆಂಬಂತೆ ಬಿಂಬಿಸುತ್ತಿದ್ದ ಒಂದು ಗುಂಪಿನ ಮೀಡಿಯಾಗಳ ಷಡ್ಯಂತ್ರ ಖುದ್ದು ಅನುಪಮಾ ಮಾಡಿಕೊಂಡ ಹುಚ್ಚಾಟಗಳಿಂದಾಗಿಯೇ ಹಾಸ್ಯಾಸ್ಪದವೆನಿಸಿತ್ತು. ಜನರೇ ಮೇಲ್ಜಾತಿ ಮೀಡಿಯಾಗಳನ್ನು ಗೇಲಿ ಮಾಡಲಾರಂಭಿಸಿದ್ದರು. ಯಾವತ್ತು ಡಿವೈಎಸ್‌ಪಿ ಹಂಡಿಭಾಗ್ ಆತ್ಮಹತ್ಯೆ ಮಾಡಿಕೊಂಡರೋ ಮತ್ತೆ ಕುಮಾರಸ್ವಾಮಿಯ ಹಿಟ್ ಅಂಡ್ ರನ್ ಪ್ರವೃತ್ತಿಗೆ ಜೀವ ಬಂತು. ಕಲ್ಲಪ್ಪ ಹಂಡಿಭಾಗ್ ಜಾತಿಯಿಂದ ಕುರುಬರು. ಆ ಮೂಲಕ ಕುರುಬರನ್ನೂ ಓಲೈಸಿ ತನ್ಮೂಲಕ ಸಿದ್ದು ಸರ್ಕಾರವನ್ನೂ ಹಣಿದು ತನ್ನ ಮೇಲ್ಜಾತಿ ಹಿತಾಸಕ್ತಿಗೆ ಇಂಬು ಕೊಡುವುದು ಕುಮಾರಸ್ವಾಮಿಯ ತಂತ್ರವಾಗಿತ್ತು.

ಇಲ್ಲದಿದ್ದರೆ ಅಹಿಂದ ವರ್ಗದ ಕಲ್ಲಪ್ಪರ ಆತ್ಮಹತ್ಯೆ ವಿರುದ್ಧ ಹುಬ್ಬಳ್ಳಿಗೆ ಬಂದಿದ್ದ ಕುಮಾರಣ್ಣ ಜಿಲೇಬಿ ಫೈಲುಗಳ ಕತೆಯೇಕೆ ಕಟ್ಟುತ್ತಿದ್ದರು?

ಹಂಡಿಭಾಗ್ ಆತ್ಮಹತ್ಯೆಯ ಬೆನ್ನಲ್ಲೇ ಮತ್ತೊಬ್ಬ ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಮಾಡಿಕೊಂಡರಲ್ಲ, ಆಗ ಮತ್ತೆ ಕುಮಾರಣ್ಣನ ಅಹಿಂದ ದಮನ ತಂತ್ರ ಬಯಲಾಯಿತು. ಪೊಲೀಸ್ ಇಲಾಖೆ ಪೂರ್ತಿ ಐಪಿಎಸ್ ಕೆಂಪಯ್ಯನವರೇ ನಿಯಂತ್ರಿಸುತ್ತಿದ್ದಾರೆ ಆಯಕಟ್ಟಿನ ಪೊಲೀಸ್ ಉನ್ನತಾಧಿಕಾರಿಗಳು ಕೆಂಪಯ್ಯನವರ ಮೂಲಕವೇ ನೇಮಕಗೊಂಡವರಾ ಸಹಜವಾಗೇ ಅವರೆಲ್ಲ ಅಹಿಂದ ವರ್ಗದವರೆಂದೂ, ಮೇಲ್ಜಾತಿ ಅಧಿಕಾರಿಗಳ ದಮನಕ್ಕಿಳಿದಿರುವುದೇ ಗ ಆತ್ಮಹತ್ಯೆಗೆ ಕಾರಣವೆಂದು ಬಿಂಬಿಸುವುದು ಕುಮಾರಣ್ಣನ ಹುನ್ನಾರವಷ್ಟೇ ಆಗಿದ್ದರೆ ಆ ಮಾತು ಆದರೆ ಬಿಜೆಪಿ ಕೂಡ 'ಜಿಲೇಬಿ' ಷಡ್ಯಂತ್ರದ ಪಾಲುದಾರನಾಗಿಯೇ ಮತ್ತೊಂದು ದಿಕ್ಕ ದಾಳಿಗಿಳಿದಿತ್ತು.

ಪೊಲೀಸ್ ಅಧಿಕಾರಿಗಳ ಆತ್ಮಹತ್ಯೆಯ ಉಪಾಯವಾಗಿ ಗೃಹ ಇಲಾಖೆ ಸಲಹೆಗಾರ ಕೆಂಪಯ್ಯ ತಲೆಗೆ ಕಟ್ಟುವ ಮೂಲಕ ಅಹಿಂದ ವರ್ಗಗಳ 'ಜಿಲೇಬಿ' ವರ್ಗ ಅಂದರೆ ಒಕ್ಕಲಿಗ, ಲಿಂಗಾ ಬ್ರಾಹ್ಮಣರನ್ನು ಎತ್ತಿ ಕಟ್ಟುವ ಕಾರ್ಯಾಚರಣೆಗೆ ಚಾನಲ್ಲುಗಳ ಜಿಲೇಬಿಗಳೂ ಕೈ ಜೋಡಿಸಿಬಿಟ್ಟರು. ಗ ಆತ್ಮಹತ್ಯೆಗೂ ಕೆಂಪಯ್ಯನವರಿಗೂ ಸೂತ್ರ ಸಂಬಂಧ ನಿಜ. ಯಾವತ್ತು ಕುಮಾರಸ್ವಾಮಿಯ ಬಾಯಿಂದ ಗ ಆತ್ಮಹತ್ಯೆಗೆ ಕೆಂಪಯ್ಯ ಕಾರಣವೆಂಬ ಆರೋಪ ಕೇಳಿಬ ನ್ಯೂಸ್ ಚಾನಲ್ಲುಗಳ ಜಿಲೇಬಿಗಳಿಗೆ ಅದೇ ನೆ ಪರಿಣಮಿಸಿತ್ತು.


ಮುಖ್ಯವಾಗಿ ಮೇಲ್ಜಾತಿ ಮಾಲೀಕರು ಸಿಬ್ಬಂದಿಗಳಿಂದಲೇ ತುಂಬಿರುವ ನಾಲ್ಕು ನ ಚಾನಲ್ಲುಗಳು ಅನುಪಮಾ, ಹಂಡಿಭಾಗ್, ಗ ಪ್ರಕರಣಗಳನ್ನು ಕೆಂಪಯ್ಯನವರ ತಲೆಗೆ ಕಟ್ಟಿಬಿಟ್ಟವು. ಎಂಥಾ ಚಾಲಾಕಿತನವೆಂದರೆ ಸದ್ಯ ಸಿಸಿಬಿಯ ಮತ್ತು ಮಾದಕ ದ್ರವ್ಯ ಘಟಕದ ಎಸಿಪಿಯಾ ಶಾಂತಕುಮಾರ್ ಎಂಬ ಕುರುಬ ಜಾತಿಯ ಅಧಿಕಾ ಗಣಪತಿಯುವರ ಆತ್ಮಹತ್ಯೆ ಮೂಲಕಾರಣವೇ ನೆಲಗಳ್ಳರ ನ್ಯೂಸ್ ಚಾನಲ್ಲೊಂದು ಬಿಂಬಿಸಿತು. ಸದರಿ ಚಾನಲ್ ಕೊಟ್ಟ ಕಾರಣ ಅದ ಹಾಸ್ಯಾಸ್ಪದವಾಗಿತ್ತೆಂದರೆ; ಹಿಂದೊಮ್ಮೆ ಗಣಪತಿ ಬೆಂಗ

ಕೆಂಪಯ್ಯ ವಿರುದ್ಧವೇ ಕೆಂಗಣ್ಣೇಕೆ?

'ಅನಿಷ್ಟಕ್ಕೆಲ್ಲಾ ಶನೇಶ್ವರ' ಎಂಬಂತೆ ಗೃಹ ಇಲಾಖೆ ಸಲಹೆಗಾರ ಕೆಂಪಯ್ಯನವರೇ ಮೇಲ್ಜಾತಿ ಹಿತಾಸಕ್ತಿಗಳ ಕೆಂಗಣ್ಣಿಗೆ ಗುರಿಯಾಗಲು ಇರುವ ಕಾರಣಗಳಾದರೂ ಎಂಥಾದ್ದು?

ಉತ್ತರ ತುಂಬಾ ಸರಳ. ಕೆಂಪಯ್ಯ ಕೇವಲ ಜಾತಿಯಿಂದಷ್ಟೇ ಅಲ್ಲ ವೈಚಾರಿಕವಾಗಿಯೂ ಅಹಿಂದ ಹಿತಾಸಕ್ತಿಗಳ ಕಟ್ಟರ್ ಪ್ರತಿಪಾದಕರು. ಬಂಗಾರಪ್ಪ ಮತ್ತು ಮೊಯ್ಲಿ ಮುಖ್ಯಮಂತ್ರಿಗಳಾಗಿದ್ದ ನಾಲ್ಕು ವರ್ಷಗಳ ಅವಧಿ ಅಂದರೆ 1991ರಿಂದ 1994ರವರೆಗಷ್ಟೇ ಚೂರುಪಾರು ತಳಸಮುದಾಯಗಳಿಗೆ ಅವಕಾಶವಾಗಿದ್ದು ಬಿಟ್ಟರೆ, ಮಿಕ್ಕಂತೆ ಕಳೆದ ಎರಡು ದಶಕಗಳಿಂದಲೂ ಅಧಿಕಾರದ ಸುಪ್ಪತ್ತಿಗೆಯಲ್ಲಿ ತೇಲಿದ್ದು 'ಜಿಲೇಬಿ' ವರ್ಗಗಳೇ. ಎಸ್.ಎಂ. ಕೃಷ್ಣ, ದೇವೇಗೌಡ, ಕುಮಾರಸ್ವಾಮಿ, ಸದಾನಂದಗೌಡ ಒಕ್ಕಲಿಗರ ಸಮುದಾಯದ ಪ್ರತಿನಿಧಿಗಳಾದರೆ ಜೆ.ಹೆಚ್. ಪಟೇಲ್, ಯಡಿಯೂರಪ್ಪ ಮತ್ತು ಶೆಟ್ಟರ್ ಹೇಳಿಕೇಳಿ ಬಲಾಢ್ಯ ಲಿಂಗಾಯತ ಕೋಮಿನ ಹಿತ ಕಾಯ್ದವರೇ.

ಈ ಮಧ್ಯೆ ಧರ್ಮಸಿಂಗ್ ಮೇಲ್ಜಾತಿ ಆಧಿಪತ್ಯಕ್ಕೆ ಅಲ್ಪ ವಿರಾಮದಂತೆ ಕಂಡರೂ ಆತ ದೇವೇಗೌಡರ ಕೈಗೊಂಬೆಯಾಗಿಯೇ ತನ್ನ ಅಲ್ಪಾವಧಿಯ ಅಂತ್ಯ ಕಂಡರು. 1995 ರಿಂದ 2013ರವರೆಗೂ ಹೆಚ್ಚು ಕಮ್ಮಿ ಎರಡು ದಶಕಗಳ ಕಾಲ ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣರೆ ಅಧಿಕಾರದ ಸೌಭಾಗ್ಯವಂತರು. ಇಷ್ಟು ಸುದೀರ್ಘ ಅವಧಿಯವರೆಗೂ ಅವಕಾಶ ವಂಚಿತರಾಗುತ್ತಿದ್ದ ಶಾಶ್ವತವಾಗಿದ್ದ ಕೆಳಜಾತಿ ಅಂದರೆ ಅಹಿಂದ ವರ್ಗಕ್ಕೆ ನಿಜಕ್ಕೂ ಉಸಿರಾಡುವಂತ ವಾತಾವರಣ ಸೃಷ್ಟಿಯಾಗಿದ್ದು ಸಿದ್ದು ಮುಖ್ಯಮಂತ್ರಿಯಾದ ನಂತರವೇ. ಕುರುಬರು ಮಾತ್ರವೇ ಅಲ್ಲ ತಿಗಳರು, ಬೆಸ್ತರು, ಈಡಿಗರು, ವಾಲ್ಮೀಕಿ, ಗಾಣಿಗ, ಬಲಿಜ, ದಲಿತ, ಮುಸ್ಲಿಂ, ಕ್ರೈಸ್ತ ಸಮುದಾಯದ ನೊಂದ ಅಧಿಕಾರಿಗಳಿಗೆಲ್ಲ ಅಹಿಂದದ ಆಕ್ಸಿಜನ್ ಸಿಕ್ಕಂತಾಗಿತ್ತು.



ಬಂಗಾರಪ್ಪ-ಮೊಯ್ಲಿ-ಯಡಿಯೂರಪ್ಪ-ಕುಮಾರಸ್ವಾಮಿ


ಅರಸು ಪ್ರಣೀತ ಸಾಮಾಜಿಕ ನ್ಯಾಯವೆಂಬುದು ಚೂರುಪಾರಾದರೂ ಸ್ಥಾಪನೆಗೊಂಡ ಅನುಭವ ಶೋಷಿತ ವರ್ಗಗಳಿಗಾಗಿತ್ತು.

ಇದನ್ನು ಪೊಲೀಸ್ ವ್ಯವಸ್ಥೆಯ ಮಟ್ಟಿಗೆ ಸಾಕಾರಗೊಳಿಸಿದ್ದು ಕೆಂಪಯ್ಯ. ಮೇಲ್ಜಾತಿ ಅಧಿಕಾರಿಗಳ ಕೆಂಗಣ್ಣಿಗೆ ಬಲಿಯಾಗಿ ಅನ್ಯಾಯವಾಗಿ ಕಿರುಕುಳಕ್ಕೀಡಾಗಿದ್ದ ಅನೇಕ ದಲಿತ ಅಧಿಕಾರಿಗಳಿಗೆ ಕೆಂಪಯ್ಯರಿಂದಾಗಿಯೇ ಬಿಡುಗಡೆ ಸಿಕ್ಕಂತಾಯಿತು. ಮುಸ್ಲಿಂ, ಕ್ರಿಶ್ಚಿಯನ್ ಅಧಿಕಾರಿಗಳಷ್ಟೇ ಅಲ್ಲ, ಅಹಿಂದ ವರ್ಗದ ಅನೇಕ ಇನ್ಸ್‌ಪೆಕ್ಟರ್‌ಗಳು, ಡಿವೈಎಸ್‌ಪಿಗಳು, ಐಪಿಎಸ್ ಅಧಿಕಾರಿಗಳಿಗೂ ಆಯ ಹುದ್ದೆಗಳು ಸಿಗುವಂತಾಯಿತು. ಹಾಗಂತ ಮೇಲ್ ಅಧಿಕಾರಿಗಳನ್ನೇನೂ ಮೂಲೆಗುಂಪು ಮಾಡಿ ಪ್ರಾಮಾಣಿಕತೆ ಮತ್ತು ಪ್ರತಿಭೆಯ ಮಾನದಂಡದ ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ ಅಧಿಕಾರಿಗಳಿಗೂ ಸಿಕ್ಕುತ್ತಾದರೂ ಸಿಕ್ಕಿದ್ದನ್ನೆಲ್ಲಾ ತಾವೇ ಮುಕ್ಕುವ ಹಿತ ಧಕ್ಕೆ ಬಂದಿತ್ತು.


ಯಡಿಯೂರಪ್ಪ ಕುಮಾರಸ್ವಾಮಿ ಕಾಲದಲ್ಲಿ ತ ದರ್ಬಾರ್ ಎಂಬಂತೆ ಮೆರೆದವರಿಗೆ ದಲಿ ಕೆಳಜಾತಿಯವರು, ಮುಸ್ಲಿಮರ ಸಮೂಹದ ಅಧಿಕಾ ಆಯಕಟ್ಟಿಗೆ ಬಂದರೆಂದರೆ ಹೇಗೆ ತಾನೇ ಸಹಿಸಲು ಅದರಲ್ಲೂ ಪೊಲೀಸ್ ವ್ಯವಸ್ಥೆಯಲ್ಲಿ ನೆಲೆಯೂರಿದ್ದ ಮೆ ಹಿತಾಸಕ್ತಿಗೆ ಧಕ್ಕೆ ತಂದ ಕೆಂಪಯ್ಯ ಸಹಜವಾಗೇ ಬಿ ಜೆಡಿಎಸ್‌ಗಳ ಕೆಂಗಣ್ಣಿಗೆ ಗುರಿಯಾಗುತ್ತಾರೆಂದರೆ ಕೆ ತಳ ಸಮುದಾಯಗಳ ಹಿತಾಸಕ್ತಿ ಕಾಯುವಲ್ಲಿ ಸರಿ ಮಾರ್ಗದಲ್ಲಿದ್ದಾರೆಂದೇ ಅರ್ಥ.

ಇಲ್ಲಿ ಕೆಂಪಯ್ಯ ಮೇಲ್ಜಾತಿ ಹಿತಾಸಕ್ತಿಗಳ ಟಾ ಆದರೂ ಆ ಮೂಲಕ ಮೇಲ್ಜಾತಿ ಲಾ ಗುರಿಯಿರುವುದು ಮುಖ್ಯಮಂತ್ರಿ ಸಿದ್ದು ಮೇಲೆಯೇ


ಉಚಿತ ವಾಹನ ನಿಲುಗಡೆ ಸ್ಥಳಕ್ಕೆ ತೆರಳದಂತೆ ಬ್ಯಾರಿಕೇಡ್ ಇಟ್ಟಿರುವುದು


ಉಚಿತ ವಾಹನ ನಿಲುಗಡೆಗೆ ಅವಕಾಶವಿದ್ದ ಸ್ಥಳದಲ್ಲಿ ಪೊಲೀಸರು ಅಳವಡಿಸಿದ್ದ ಸೂಚನಾಫಲಕ

ಹಾಸನ ಬಸ್ ನಿಲ್ದಾಣ: ಜನಹಿತ ಕಡೆಗಣಿಸಿದವರ ಮೂರ್ಖ ನಿರ್ಧಾರ



ರೈಲ್ವೆ ಗೇಟ್ ಹಾಕಿದ ಸಂದರ್ಭದಲ್ಲಿ ಬಸ್ ನಿಲ್ದಾಣ ಮತ್ತು ಹಾಸನ ನಗರ ಸಂಪರ್ಕಿಸುವ ರಸ್ತೆಯಲ್ಲಿ ಉಂಟಾಗಿರುವ ಟ್ರಾಫಿಕ್ ಸಮಸ್ಯೆ

ಜನರ ತೆರಿಗೆ ಹಣದಲ್ಲಿ ನಿರ್ಮಿಸಲ್ಪಟ್ಟ ಬಸ್ ನಿಲ್ದಾಣವೊಂದು, ಯಾರಿಗೋ ಲಾಭ ಮಾಡಿಕೊಡುವ ಉದ್ದೇಶದಿಂದ ಸಾರ್ವಜನಿಕರಿಗೆ ಇನ್ನಿಲ್ಲದ ಕಿರಿಕಿರಿಯನ್ನುಂಟುಮಾಡಲು ಅಸ್ತ್ರವಾಗಿರುವ ನಿದರ್ಶನ ಬಹುಶಃ ಹಾಸನದ ಹೈಟೆಕ್ ಬಸ್ ನಿಲ್ದಾಣವಲ್ಲದೇ ಮತ್ತೆಲ್ಲೂ ಕಾಣಸಿಗದೇನೊ.

ರೈಲ್ವೆ ನಿಲ್ದಾಣದ ಸಮೀಪದಲ್ಲೇ ಸದ್ಯ ಸಾರಿಗೆ ಸಂಸ್ಥೆಯ ಡಿಪೋ ಇರುವ ಸ್ಥಳದಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಿಸಬೇಕೆನ್ನುವ ಜನರ ಆಗ್ರಹಕ್ಕೆ ಕಿವಿಗೊಡದೆ ನಗರ ಹೊರವಲಯದ ಚನ್ನಪಟ್ಟಣದಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಿಸಿದ ಸಂದರ್ಭದಿಂದಲೂ ಹಾಸನದ ಜನ, ಜನವಿರೋಧಿ ನಿರ್ಧಾರಗಳ ಮೂಲಕ ತಮಗೆ ಇನ್ನಿಲ್ಲದ ತೊಂದರೆ ನೀಡುತ್ತಿರುವ ವ್ಯವಸ್ಥೆ ಮತ್ತದರ ಮೇಲೆ ಹಿಡಿತ ಸಾಧಿಸಿರುವ ಪ್ರಭಾವಿ ರಾಜಕಾರಣಿಗೆ ಹಿಡಿಶಾಪ ಹಾಕುತ್ತಲೇ ಬಂದಿದ್ದಾರೆ.

ಹಾಸನ ನಗರದ ಹೃದಯಭಾಗವಾದ ಎನ್‌ಆರ್ ವೃತ್ತದಿಂದ ಹೈಟೆಕ್ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಮೇಲೆಯೇ ರೈಲುಮಾರ್ಗ ಹಾದು ಹೋಗಿರುವುದರಿಂದ ರೈಲ್ವೆ ಗೇಟ್ ಬಂದ್ ಆದಾಗಲೆಲ್ಲ ವಾಹನಗಳು ಸಾಲುಗಟ್ಟಿ ನಿಲ್ಲಬೇಕಾದ ಪರಿಸ್ಥಿತಿ ಇದೆ. ಪ್ರತಿ ಬಾರಿ ರೈಲ್ವೆ ಬಜೆಟ್ ಮಂಡನೆಯಾದಾಗಲೂ ನಮ್ಮ ಜಿಲ್ಲೆಯ ಜನ ಕಣ್ಣುಬಾಯಿ ಬಿಟ್ಟುಕೊಂಡು ನೋಡುವುದು, 'ಈ ಬಾರಿಯಾದರೂ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಹಸಿರುನಿಶಾನೆ ದೊರೆತಿದೆಯೇ?' ಎಂಬ ಅಂಶವನ್ನು. ಆದರೆ ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ಎದುರಾಗುತ್ತಿರುವುದು ನಿರಾಶೆಯೇ.

ಇರುವ ಸಮಸ್ಯೆಗಳು ಸಾಲದೆಂದು ಕೆಲ ತಿಂಗಳುಗಳಿಂದ 'ವಾಹನ ನಿಲುಗಡೆ' ವಿಚಾರದಲ್ಲೂ ಸಾರ್ವಜನಿಕರ ಹಿತ ಬದಿಗಿರಿಸಿ ಯಾರದೋ ಹಿತಾಸಕ್ತಿ ಕಾಯುವ ಸಲುವಾಗಿ ಇಲ್ಲಿನ ವ್ಯವಸ್ಥೆ ಕೈಗೊಂಡಿರುವ ಮೂರ್ಖ ನಿರ್ಧಾರದಿಂದಾಗಿ ಜನಸಾಮಾನ್ಯರು ಅನಗತ್ಯ ತೊಂದರೆ ಅನುಭವಿಸುವಂತಾಗಿದೆ.

ಮೊದಲೆಲ್ಲ ನಾನಾ ಕಾರಣಗಳಿಗಾಗಿ ಬಸ್ ನಿಲ್ದಾಣಕ್ಕೆ ಬಂದುಹೋಗುವ ಜನ, ತಮ್ಮ ವಾಹನಗಳನ್ನು ಬಸ್ ನಿಲ್ದಾಣ ಕಟ್ಟಡದ ಸಮೀಪದವರೆಗೂ ತೆಗೆದುಕೊಂಡು ಹೋಗಲು ಅವಕಾಶವಿತ್ತು. ಬಸ್ ನಿಲ್ದಾಣ ನಿರ್ಮಿಸುವ ಸಂದರ್ಭದಲ್ಲಿಯೇ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಶುಲ್ಕ ಪಾವತಿ ವಾಹನ ನಿಲುಗಡೆಯೊಂದಿಗೆ ಜನಸ್ನೇಹಿ ಉಚಿತ ವಾಹನ ನಿಲುಗಡೆ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿತ್ತು. ಆದರೆ ಇದೀಗ ಬಸ್ ನಿಲ್ದಾಣಕ್ಕೆ ಬಂದು ಹೋಗುವವರು ತಮ್ಮ ವಾಹನಗಳನ್ನು ಒಂದೋ ಶುಲ್ಕ ಪಾವತಿಸಿ ವಾಹನ ನಿಲುಗಡೆ ಮಾಡುವ ಸ್ಥಳದಲ್ಲಿ ನಿಲ್ಲಿಸಬೇಕು ಅಥವಾ ಬಸ್ ನಿಲ್ದಾಣ ಕಟ್ಟಡದಿಂದ 100 ಮೀ. ದೂರದಲ್ಲಿರುವ ರಸ್ತೆ ಬದಿಯಲ್ಲಿ ನಿಲ್ಲಿಸಿ ಅಲ್ಲಿಂದ ತಮ್ಮ ಲಗೇಜು ಹೊತ್ತುಕೊಂಡು ನಿಲ್ದಾಣಕ್ಕೆ ಹೋಗಬೇಕು. ರಾತ್ರಿ ವೇಳೆ ಅಭದ್ರತೆಯೂ ಕಾಡುತ್ತದೆ.

ಶುರುವಿನಲ್ಲಿ ತಮ್ಮ ವಾಹನಗಳನ್ನು ಬಸ್ ನಿಲ್ದಾಣದಲ್ಲಿ ನಿಲ್ಲಿಸಿ ಬೇರೆ ಊರುಗಳಿಗೆ ಹೋಗಿಬರುವವರು ಮಾತ್ರ ಶುಲ್ಕ ಪಾವತಿಸಬೇಕಿರುವ ಪಾರ್ಕಿಂಗ್ ಸ್ಲಾಟ್ ಆಯ್ದುಕೊಳ್ಳುತ್ತಿದ್ದರು. ಹಾಗೆ ಬಂದು ಹೀಗೆ ಹೋಗುವವರು ನಿಲ್ದಾಣದ ಸಮೀಪವೇ ತಮ್ಮ ವಾಹನ ನಿಲ್ಲಿಸಲು ಅವಕಾಶವಿತ್ತು. ಇದೀಗ ಅತ್ತ ರಸ್ತೆಯಲ್ಲಿ ನಿಲ್ಲಿಸಿದ ತಮ್ಮ ವಾಹನದ ಸುರಕ್ಷತೆ ಕುರಿತು ಚಿಂತಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಸಾಲದ್ದಕ್ಕೆ ಈ ಸಂಬಂಧ ಕೆಲ ತಿಂಗಳುಗಳ ಹಿಂದೆ ಪೊಲೀಸರೆ ಮೊದಲು ಉಚಿತ ವಾಹನ ನಿಲುಗಡೆಗೆ ಅವಕಾಶವಿದ್ದ ಸ್ಥಳದಲ್ಲಿ 'ದ್ವಿಚಕ್ರ ವಾಹನಗಳ ಕಳ್ಳರಿರುತ್ತಾರೆ. ಆದ್ದರಿಂದ ಬಸ್ ನಿಲ್ದಾಣದ ಪ್ರಯಾಣಿಕರು ತಿರುಗಾಡುವ ರಸ್ತೆಯು ಆವರಣದ ಮುಂದೆ ಹೆಚ್ಚು ಸಮಯ ವಾಹನ ನಿಲ್ಲಿಸಬಾರದು' ಅಂತ ಸೂಚನಾ ಫಲಕ ಅಳವಡಿಸಿದ್ದರು. ಉಚಿತ ವಾಹನ ನಿಲುಗಡೆಗೆಂದೇ ಇರುವ ಸ್ಥಳಕ್ಕೆ ವಾಹನಗಳು ತೆರಳದಂತೆ ಈ ಮೊದಲು ಬ್ಯಾರಿಕೇಡ್ ಹಾಗು ಸಿಮೆಂಟ್ ಬ್ರಿಕ್ಸ್ ಇಡಲಾಗಿತ್ತು. ಇದೀಗ ಶಾಶ್ವತ ತಡೆಗಳನ್ನೇ ನಿರ್ಮಿಸಲಾಗಿದೆ. ಆ ಸ್ಥಳ ನಿರುಪಯುಕ್ತವಾಗಿ ಬಿದ್ದಿದೆ.

ಪ್ರತಿ ಬಾರಿ ಹೈಟೆಕ್ ಬಸ್ ನಿಲ್ದಾಣಕ್ಕೆ ಹೋಗುವಾಗಲೂ ಜನ, ಯಾರಿಗೋ ಲಾಭ ಮಾಡಿಕೊಡುವ ಸಲುವಾಗಿ ಜನವಿರೋಧಿ ನಿಲುವು ತಳೆಯುತ್ತಿರುವ ಅಧಿಕಾರಿಗಳಿಗೆ ಮತ್ತವರ ಬೆಂಬಲಕ್ಕೆ ನಿಂತಿರುವ ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.


■ ಎಚ್.ಕೆ.ಶರತ್

ಮಡಿವಾಳ ಪೊಲೀಸ್ ಠಾಣೆಯಲ್ಲಿ ಕಳ್ಳರಿಂದ ವಶಪಡಿಸಿಕೊಂಡಿದ್ದ ಚಿನ್ನಾಭರಣಗಳನ್ನು ಠಾಣೆಯ ಪುಸ್ತಕದಲ್ಲಿ ದಾಖಲಿಸದೆ ತನ್ನ ಸ್ವಂತಕ್ಕೆ ಬಳಸಿಕೊಂಡ ಬಗ್ಗೆ ಇಲಾಖಾ ತನಿಖೆಯಿತ್ತಲ್ಲ; ಆಗ ಶಾಂತಕುಮಾರರೇ ಮಡಿವಾಳ ಉಪವಿಭಾಗದಲ್ಲಿ ಎಸಿಪಿಯಾಗಿದ್ದೇ ಕಾರಣವೆಂದೂ ಅವರ ಪಿತೂರಿಗಳ ಫಲವಾಗೇ ಗಣಪತಿ ಸುಳ್ಳು ಆರೋಪಕ್ಕೆ ಸಿಲುಕಬೇಕಾಯಿತೆಂದೂ ಸದರಿ ಚಾನಲ್ ಚಿತ್ರಿಸಿದ್ದ ಕತೆಯಾಗಿತ್ತು.

ವಾಸ್ತವವೆಂದರೆ ಗಣಪತಿ ಮಡಿವಾಳ ಠಾಣೆಗೆ ಇನ್ಸ್‌ಪೆಕ್ಟರ್ ಆಗಿದ್ದ ಹೊತ್ತಿಗೆ ಶಾಂತಕುಮಾರ್ ಎಸಿಪಿಯಾಗಿ ಇರಲೇ ಇಲ್ಲ!

ಇನ್ನೂ ವಿಚಿತ್ರವೆಂದರೆ ಗಣಪತಿ ಆತ್ಮಹತ್ಯೆಗೆ ಶಾಂತಕುಮಾರ್‌ರನ್ನು ಲಿಂಕ್ ಮಾಡಿದ ಅದೇ ಚಾನಲ್ ಸದ್ಯ ಸಿಸಿಬಿಯಲ್ಲಿ ಶಾಂತಕುಮಾರ್‌ರೇ ಬೇರೆಲ್ಲ ಅಧಿಕಾರಿಗಳ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆಂದೂ, ಜಾತಿಯಿಂದ ಶಾಂತಕುಮಾರ್ ಕುರುಬರಾದ್ದರಿಂದಲೇ ಅವರನ್ನು ಕೆಂಪಯ್ಯ ಸಿಸಿಬಿಗೆ ತಂದಿದ್ದಾರೆಂದೂ, ಕೆಂಪಯ್ಯ ಕೂಡ ಕುರುಬರಾದ್ದರಿಂದ ಜಾತಿ ಬುದ್ಧಿಗೆ ಬಿದ್ದು ಕೆಂಪಯ್ಯ, ಜಾತಿಯ ಶಾಂತಕುಮಾರ್‌ಗೆ ಕುಮ್ಮಕ್ಕು ಕೊಡುತ್ತಿದ್ದಾರೆಂದೂ, ಸಿಸಿಬಿ ಪೂರ್ತಿ ಶಾಂತಕುಮಾರ್‌ರ ನಿಯಂತ್ರಣದಲ್ಲೇ ಇದೆಯೆಂದೂ ಆ ರಿಯಲ್ ಎಸ್ಟೇಟ್ ಚಾನಲ್ ಕತೆ ಹೊಸೆದಿತ್ತು.


ಆದರೆ ಎಸಿಪಿ ಶಾಂತಕುಮಾರ್‌ಗೆ ಸಂಬಂಧಪಟ್ಟ ಸತ್ಯಗಳೇ ಬೇರೆಯಿತ್ತು. ನಿಜಕ್ಕೂ ಶಾಂತಕುಮಾರ್ ಸಿಸಿಬಿಯ ಸೂತ್ರಧಾರರೇ ಆಗಿದ್ದರೆ ಅಷ್ಟೇನೂ ಮಹತ್ವದ್ದಲ್ಲದ ಮಿಸ್ಸಿಂಗ್ ಅಂಡ್ ನಾರ್ಕೋಟಿಕ್ಸ್ ವಿಂಗ್‌ಗೆ ಬರುತ್ತಿರಲಿಲ್ಲ, ಸಿಸಿಬಿಯ ಪ್ರತಿಷ್ಠಿತ ರೌಡಿ ನಿರೋಧಕ ದಳಕ್ಕೋ, ಫ್ರಾಡ್ ಸೆಕ್ಷನ್ನಿಗೋ ಬರುತ್ತಿದ್ದರು. ನಿಜಕ್ಕೂ ಸಿಸಿಬಿಗೆ ತನಗೆ ಬೇಕಾದ ಅಧಿಕಾರಿಗಳನ್ನು ಹಾಕಿಸಿಕೊಳ್ಳುವಷ್ಟು ಕೆಂಪಯ್ಯ ಬಲಾಢ್ಯರಾಗಿದ್ದರೆ, ಎಸಿಪಿ ಶಾಂತಕುಮಾರ್ ಜಾತಿಕಾರಣಕ್ಕೆ ಕೆಂಪಯ್ಯರ ಪಕ್ಷಪಾತವನ್ನೇ ಗಳಿಸಿದ್ದರೆ ಸಿಸಿಬಿಯ ಆ್ಯಂಟಿ ರೌಡಿ ಸ್ಕ್ವಾಡಿಗೋ, ಫ್ರಾಡ್ ಸೆಕ್ಷನ್ನಿಗೋ ಬರುವುದನ್ನು ಬಿಟ್ಟು ಆಟಕ್ಕುಂಟು ಲೆಕ್ಕಕ್ಕಿಲ್ಲದ ಮಹಿಳೆ ಮತ್ತು ಮಾದಕ ದ್ರವ್ಯ (ಡ್ರಗ್ಸ್) ಘಟಕಕ್ಕೇಕೆ ಎಸಿಪಿಯಾಗುತ್ತಿದ್ದರು?


ಅನುಪಮಾ ಶೆಣೈ


ಗಣಪತಿ

ಹಕೀಕತ್ತೇನೆಂದರೆ ಹಿಂದೊಮ್ಮೆ ಬಿಎಂಆರ್‌ಡಿಎಯ ಮುಖ್ಯಸ್ಥನಾಗಿ ಭೂಕಂಟಕರು, ನೆಲಗಳ್ಳರು, ರಿಯಲ್ ಎಸ್ಟೇಟ್ ಮಾಫಿಯಾಗಳ ಜೊತೆ ಶಾಮೀಲಾಗಿ ಅಮೂಲ್ಯ ಸರ್ಕಾರಿ ಭೂಮಿಯನ್ನೆಲ್ಲ ನುಂಗಿ ಹಾಕಿ ಆ ಮೂಲಕವೇ ಸಹಸ್ರಾರು ಕೋಟಿಯ ಒಡೆಯನಾದ ಖದೀಮ ಮಹೇಂದ್ರನೇ ತನ್ನ ಪಾಪ ಮುಚ್ಚಿಕೊಳ್ಳಲೆಂದು ಸದರಿ ನ್ಯೂಸ್ ಚಾನಲ್ಲನ್ನು ಹುಟ್ಟುಹಾಕಿದ್ದ. ಜಾತಿಯಿಂದ ಈತ ಕುಮಾರಣ್ಣನ ಕುಲಬಾಂಧವ. ಈತನ ಭೂಕಬಳಿಕೆಯ ಏಜೆಂಟರಂತಿದ್ದ ಕೆಲ ಭ್ರಷ್ಟ ಪೊಲೀಸರೇ ರಿಯಲ್ ಎಸ್ಟೇಟ್ ಉದ್ದೇಶದಿಂದ ಶಾಂತಕುಮಾರ್ ಮತ್ತು ಕೆಂಪಯ್ಯನವರ ಕತೆ ಕಟ್ಟಿದ್ದರು.

ಸಿಸಿಬಿಯ ರೌಡಿ ನಿರೋಧಕ ದಳಕ್ಕೆ ಜೈಮಾರುತಿ ಎಂಬ ಒಕ್ಕಲಿಗ ಎಸಿಪಿಯನ್ನೂ, ಫ್ರಾಡ್ ಸೆಕ್ಷನ್ನಿಗೆ ಶಂಕ್ರಯ್ಯ ಎಂಬ ಮತ್ತೊಬ್ಬ ಒಕ್ಕಲಿಗನನ್ನು ತರುವ ಮೂಲಕ ತನ್ನ ಜಾತ್ಯತೀತತೆಯನ್ನು ಮೆರೆದ ಸರ್ಕಾರದ ಜಾತ್ಯತೀತೆಯನ್ನು ಸದರಿ ಚಾನಲ್ ಜೊತೆ ಕುಮಾರಸ್ವಾಮಿಯೂ ಸೇರಿಕೊಂಡೇ ಮುಚ್ಚಿಹಾಕಿದ್ದರು. ಇದು ಹೇಗೆ ಮೇಲ್ಜಾತಿ ಲಾಬಿ ತಳಸಮುದಾಯಗಳ ವಿರುದ್ಧ ಕತ್ತಿ ಮಸೆಯುತ್ತದೆ ಮತ್ತು ಅದೆಷ್ಟು ಪ್ರಬಲವಾಗಿದೆ ಎಂಬುದಕ್ಕೆ ಒಂದು ಉದಾಹರಣೆಯಷ್ಟೆ.


ಸಿಸಿಬಿ ಎಸಿಪಿ ಶಾಂತಕುಮಾರ್

ಹಾಗೆ ನೋಡಿದರೆ ಗೃಹ ಇಲಾಖೆಯ ಏನೇ ಆಗುಹೋಗುಗಳಿಗೆ ಉತ್ತರ ಕೊಡಬೇಕಾದದ್ದು ಗೃಹಮಂತ್ರಿ ಪರಮೇಶ್ವರ್ ತಾನೆ? ಆದರೆ ಈ ಚಾನಲ್ಲುಗಳೂ ಕುಮಾರಣ್ಣನ ಕೆಲವು ತಂತ್ರ ಬಳಸಿ ಕೆಂಪಯ್ಯನವರನ್ನು ಟಾರ್ಗೆಟ್ ಮಾಡುತ್ತಿದ್ದಾವೆ. ಕೆಂಪಯ್ಯನವರಿಂದಾಗಿಯೇ ಪೊಲೀಸ್ ವ್ಯವಸ್ಥೆ ಹದಗೆಟ್ಟಿದೆ, ಇಡೀ ಪೊಲೀಸ್ ಇಲಾಖೆಗೆ ಅವರೇ ಮುಖ್ಯಸ್ಥರು, ಪೊಲೀಸ್ ಇಲಾಖೆಯ ಎಲ್ಲಾ ಆಗುಹೋಗುಗಳಿಗೂ ಅವರೇ ಹೊಣೆ ಎಂಬುದು ಈ ಚಾನಲ್‌ಗಳು ಹೆಣೆಯುತ್ತಿರುವ ಚಂದಮಾಮಾ ಕತೆಯ ಕಲ್ಪನಾವಿಲಾಸ.

ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ಏನೇ ಆಗುಹೋಗುಗಳಿಗೂ ಗೃಹಮಂತ್ರಿ ತಾನೇ ಹೊಣೆ. ಆದರೆ ಕೆಂಪಯ್ಯ ವಿಷಯದಲ್ಲಿ ಹಾಗಿಲ್ಲ. ವಿಧಾನಮಂಡಲದಲ್ಲಿ ಬೊಬ್ಬೆಯಿಕ್ಕುವ ಶೆಟ್ಟರ್ ಆಗಲಿ ಕುಮಾರಸ್ವಾಮಿಯಾಗಲಿ ಅಪ್ಪಿತಪ್ಪಿಯೂ ಗೃಹಮಂತ್ರಿ ಪರಮೇಶ್ವರ್ ಬಗ್ಗೆ ಚಕಾರವೆತ್ತುತ್ತಿಲ್ಲ. ಇಲ್ಲಿ ಮಾತ್ರ ಗೃಹಮಂತ್ರಿಯನ್ನು ಮರೆಯುವ ಶೆಟ್ಟರ್- ಕುಮಾರ್ ಪುಂಗವರು ಗಣಪತಿ ಆತ್ಮಹತ್ಯೆಯ ವಿಷಯಕ್ಕೆ ಮಾತ್ರ ಹಿಂದ್ಯಾವತ್ತೋ ಗೃಹಮಂತ್ರಿಯಾಗಿದ್ದರೆಂದು ಜಾರ್ಜ್‌ರ ರಾಜೀನಾಮೆ ಕೇಳುತ್ತಾರೆ!


ಈಗ ಅಂದರೆ ಪರಮೇಶ್ವರ್ ಬಂದಮೇಲೆ ಕೆಂಪಯ್ಯ ಗೃಹ ಇಲಾಖೆಗೆ ಹೊಣೆಯಾಗುವುದಾದರೆ ಹಿಂದೆ ಜಾರ್ಜ್ ಇದ್ದಾಗಲೂ ಕೆಂಪಯ್ಯ ಸಲಹೆಗಾರರಾಗಿದ್ದರಲ್ಲವೇ?

ಬಿಜೆಪಿ ಜೆಡಿಎಸ್‌ಗಳ ವರಸೆಗಳೇ ಅವರ ಆತ್ಮವಂಚಕ ರಾಜಕಾರಣವನ್ನು ಬಯಲುಗೊಳಿಸುತ್ತವೆ. ಕೆಂಪಯ್ಯನವರನ್ನು ಪ್ರತಿಯೊಂದು ವಿಷಯಕ್ಕೂ ಎಳೆದು ತರುವುದು, ಸಿಸಿಬಿಯಲ್ಲಿ ಜಾತಿಯಿಂದ ಕುರುಬನೆಂಬ ಒಂದೇ ಕಾರಣಕ್ಕೆ ಎಸಿಪಿ ಶಾಂತಕುಮಾರ್ ತಲೆಗೆ ತೋಚಿದ್ದನ್ನೆಲ್ಲ ಕಟ್ಟುವುದು, ಅನುಪಮಾ ರಾಜೀನಾಮೆ ಕೊಟ್ಟರೆ ಅದಕ್ಕೂ ಕೆಂಪಯ್ಯ ಹೊಣೆ, ಗಣಪತಿ ಆತ್ಮಹತ್ಯೆಗೂ ಕೆಂಪಯ್ಯ ಕಾರಣ; ಹೀಗೆ ಏನೆಲ್ಲ ಯಡವಟ್ಟುಗಳಾಗುತ್ತೋ ಅವೆಲ್ಲವನ್ನೂ ಕೆಂಪಯ್ಯ ತಲೆಗೆ ಕಟ್ಟುವ ಮೂಲಕ ಪರೋಕ್ಷವಾಗಿ ಸಿದ್ದು ಜಾತಿವಾದಿಯೆಂದೂ ಇದು ಕುರುಬರ ಸರ್ಕಾರವೆಂದೂ ಆ ಕಾರಣಕ್ಕೇ ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ಸಮುದಾಯಗಳನ್ನು ಹತ್ತಿಕ್ಕುತ್ತಿದ್ದಾರೆಂದೂ ಜನ ನಂಬುವಂತೆ ಬಣ್ಣ ಬಳಿಯಲು ಬಿಜೆಪಿ, ಜೆಡಿಎಸ್ ಮತ್ತು ಅರ್ಧ ಡಜನ್ ಮೇಲ್ಜಾತಿ ಚಾನಲ್‌ಗಳು ಕಸರತ್ತು ನಡೆಸುತ್ತಲೇ ಇವೆ.


ಇನ್ನು ನ್ಯೂಸ್ ಚಾನಲ್ಲುಗಳ ಅತಿರೇಕ ಹೇಗಿದೆಯೆಂದರೆ, ಯಾರೊ ಪೊಲೀಸ್ ಇನ್ಸ್‌ಪೆಕ್ಟರ್ ಏನೋ ಯಡವಟ್ಟು ಮಾಡಿದನೆಂದರೂ ಈ ಇನ್ಸ್‌ಪೆಕ್ಟರ್‌ಗೆ ಕೆಂಪಯ್ಯ ಕೃಪಾಕಟಾಕ್ಷವಿತ್ತೆಂದೂ ಇನ್ನಾರೋ ಸಸ್ಪೆಂಡಾದರೂ ಆತ ಕೆಂಪಯ್ಯರ ಶಿಷ್ಯನೆಂದೂ ಕತೆ ಹೊಸೆಯುವುದನ್ನೇ ಕಾಯಕವಾಗಿಸಿಕೊಂಡಿದ್ದಾವೆ. ಮುಖ್ಯಮಂತ್ರಿ ಕಚೇರಿಯಲ್ಲಿ ಜಿಲೇಬಿ ಫೈಲುಗಳ ವರಸೆ ಇದೆಯೋ ಇಲ್ಲವೋ, ಆದರೆ ಅಹಿಂದ ವರ್ಗಗಳ ಪರವಾದ ಸಿದ್ದು ಸರ್ಕಾರದ ಹಿತಾಸಕ್ತಿಯ ವಿರುದ್ಧ 'ಜಿಲೇಬಿ' ಕೂಟವಂತೂ ಸಕ್ರಿಯವಾಗಿದೆ. ಲಿಂಗಾಯತರು, ಬ್ರಾಹ್ಮಣರ ಮುಖವಾಣಿಯಾದ ಬಿಜೆಪಿ, ಒಕ್ಕಲಿಗರ ದನಿಯಾದ ಜೆಡಿಎಸ್ ಮತ್ತು ಈ ಮೂರೂ ಬಲಾಢ್ಯ ಜಾತಿಗಳಿಂದಲೇ ತುಂಬಿರುವ ನ್ಯೂಸ್ ಚಾನಲ್ಲುಗಳ ಜಿಲೇಬಿ ಕೂಟವೆಂಬ ದುಷ್ಟಕೂಟವಂತೂ ತನ್ನ ಕುತಂತ್ರವನ್ನು ಯಶಸ್ವಿಯಾಗಿ ಚಾಲ್ತಿಯಲ್ಲಿಟ್ಟಿದೆ.

■ ರಾ. ಸೋಮನಾಥ್

ಬಳ್ಳಾರಿ: ಜಿಂದಾಲ್ ಕಂಪನಿಯ ಕಾರ್ಮಿಕ ದ್ರೋ







ಬಳ್ಳಾರಿ ಜಿಲ್ಲೆಯಲ್ಲಿ ಬಲಾಢ್ಯವಾಗಿ ಬೇರೂರಿರುವ ಜಿಂದಾಲ್ ಸ್ಟೀಲ್ ವರ್ಕ್ಸ್ ಕಂಪನಿಯ ಅಕ್ರಮ, ಅನೀತಿಗಳಿಗೆ ಕೊನೆಯಿಲ್ಲದಂತಾಗಿದೆ. ಅಧಿಕಾರ ದುರುಪಯೋಗ ಮತ್ತು ಕಾನೂನುಬಾಹಿರ ಚಟುವಟಿಕೆಗಳಿಂದಲೇ ಕೊಬ್ಬಿರುವ ಈ ಕಂಪನಿಗೆ ಹೇಳೋರು ಕೇಳೋರು ಇಲ್ಲ. ಕಂಪನಿಯ ಕರ್ಮಕಾಂಡಗಳು ಅವ್ಯಾಹತವಾಗಿ ಮುಂದುವರೆದಿವೆ. ಎಗ್ಗಿಲ್ಲದ ಪರಿಸರ ಹಾನಿ, ಕಾರ್ಮಿಕರಿಗೆ ಕಿರುಕುಳಂತಹ ಪ್ರಕರಣಗಳಿಂದ ಕುಖ್ಯಾತಿ ಗಳಿಸಿರುವ ಕಂಪನಿ ಇದೀಗ ಡಾಂಬರು ಫ್ಯಾಕ್ಟರಿ ಆರಂಭಿಸಲು ಮುಂದಾಗಿ ಸ್ಥಳೀಯ ಜನರ ಆಕ್ರೋಶಕ್ಕೆ ತುತ್ತಾಗಿದೆ.

ಬಳ್ಳಾರಿ-ಹೊಸಪೇಟೆ ದಾರಿ ಮಧ್ಯೆ ಸಿಗುವ ತೋರಣಗಲ್ಲಿನಲ್ಲಿ ಬರೋಬ್ಬರಿ ಐದು ಸಾವಿರ ಎಕರೆ ವಿಸ್ತೀರ್ಣದಲ್ಲಿ ಮೈಚಾಚಿಕೊಂಡಿರುವ ಜೆಎಸ್‌ಡಬ್ಲ್ಯು ಕಂಪನಿ ಭಾರತದ ಉಕ್ಕು ತಯಾರಿಸುವ 2ನೇ ಅತಿದೊಡ್ಡ ಖಾಸಗಿ ಕಂಪನಿ. 1994 ರಲ್ಲಿ ಜಿಂದಾಲ್ ವಿಜಯನಗರ್ ಸ್ಟೀಲ್ ಲಿಮಿಟೆಡ್ ಹೆಸರಿನಲ್ಲಿ ಆರಂಭಗೊಂಡಿತಾದರು 2005ರಲ್ಲಿ ಜಿಂದಾಲ್ ಐರನ್ ಅಂಡ್ ಸ್ಟೀಲ್ ಕಂಪನಿ ಜೊತೆ ವಿಲೀನವಾಗುವುದರೊಂದಿಗೆ ಹಾಲಿ ಜೆಎಸ್‌ಡಬ್ಲ್ಯು ರೂಪ ಪಡೆದುಕೊಂಡಿತು.

ಕಳ್ಳಮಾರ್ಗದಲ್ಲಿ ಆರಂಭ

ಇದರ ಆರಂಭವೇ ಕಳ್ಳಮಾರ್ಗದಿಂದ ಶುರುವಾಗಿದೆ. ಬಳ್ಳಾರಿ ಸ್ಟೀಲ್ಸ್ ಅಂಡ್ ಅಲಾಯ್ಸ್ ಲಿಮಿಟೆಡ್ (ಬಿಎಸ್‌ಎಎಲ್) ಎಂಬ ಖಾಸಗಿ ಕಂಪನಿಗೆ ಹಲವು ವರ್ಷಗಳ ಹಿಂದೆ ಉಕ್ಕು ಕಾರ್ಖಾನೆ ಸ್ಥಾಪನೆಗೆಂದು ಅಂದಿನ ರಾಜ್ಯ ಸರ್ಕಾರ 1000 ಎಕರೆಗೂ ಹೆಚ್ಚು ಭೂಮಿಯನ್ನು ರೈತರಿಂದ ಬಲವಂತವಾಗಿ ಅಗ್ಗದ ಬೆಲೆಯಲ್ಲಿ ಕಸಿದು, ಮಂಜೂರು ಮಾಡಿತ್ತು. ಆದರೆ ಆ ಕಂಪನಿ ಅಲ್ಲಿ ಕಾರ್ಖಾನೆಯನ್ನೇ ತೆರೆಯಲಿಲ್ಲ. ಬದಲಿಗೆ ಸರ್ಕಾರ ಮಂಜೂರು ಮಾಡಿದ್ದ ಭೂಮಿಯನ್ನೇ ಬ್ಯಾಂಕ್‌ಗೆ ಅಡವಿಟ್ಟು 200 ಕೋಟಿ ರೂ. ಸಾಲ ಎತ್ತಿಕೊಂಡಿತ್ತು. ಆಮೇಲೆ ಆ ಜಮೀನನ್ನು ಜಿಂದಾಲ್ ಕಂಪನಿಗೆ ಹಸ್ತಾಂತರಿಸಿತು. ಇದು ನೂರಕ್ಕೆ ನೂರು ಕಾನೂನುಬಾಹಿರ. ಆದರೆ ಖಾಸಗಿ ಬಂಡವಾಳಿಗರಿಗೆ ಈ ನೆಲದ ಕಾಯ್ದೆ, ಕಾನೂನುಗಳು ಏನು ತಾನೆ ಮಾಡಿಯಾವು?

ಈಗ ಜಿಂದಾಲ್ ಕಂಪನಿ ಇಲ್ಲಿ ಉಕ್ಕು ಘಟಕ ಸ್ಥಾಪಿಸುವ ಬದಲು ಜಮೀನನ್ನು ಬ್ಯಾಂಕ್ ಸಾಲ ಎತ್ತುವ ಸಟ್ಟಾಬಾಜಿಗೆ ಬಳಸಲು ಯತ್ನಿಸುತ್ತಿದೆ. ಕಾನೂನಿನ ಪ್ರಕಾರ ಸರ್ಕಾರ ಯಾವುದೇ ಜಮೀನನ್ನು ಒಂದು ಉದ್ದೇಶಕ್ಕೆಂದು ಸ್ವಾಧೀನ ಪಡಿಸಿಕೊಂಡರೆ ಆ ಜಾಗವನ್ನು ಅದೇ ಕಾಯಕಕ್ಕೆ ಬಳಸಿಕೊಳ್ಳಬೇಕು. ಇಲ್ಲವಾದಲ್ಲಿ ಮೂಲ ವಾರಸುದಾರರಿಗೆ ಅದನ್ನು ವಾಪಾಸ್ ಮಾಡಬೇಕು. ಹಾಗಾಗಿಯೇ ಒಪ್ಪಂದದಂತೆ ಇಲ್ಲಿ ಉಕ್ಕು ಘಟಕ ಸ್ಥಾಪಿಸದೇಹೋದರೆ ಜಮೀನನ್ನು ನಮಗೆ ಮರಳಿಸಿ ಅಂತ ಬಳ್ಳಾರಿಯ ಹಲವು ಸಂಘಟನೆಗಳು ಹೋರಾಟಕ್ಕಿಳಿದಿವೆ ಮತ್ತೂ ವಿಪರ್ಯಾಸವೆಂದರೆ ಉಕ್ಕು ಘಟಕವನ್ನು ಸ್ಥಾಪಿಸಲು ಏನಿಲ್ಲವೆಂದರು 500 ಎಕರೆ ಸಾಕು. ಆದರೆ ಸರ್ಕಾರ ಮಂಜೂರು ಮಾಡಿರೋದು ಬರೋಬ್ಬರಿ 4000 ಎಕರೆ! ಇಷ್ಟೆಲ್ಲಾ ಗೋಲ್‌ಮಾಲ್ ಮಾಡಿ ಆರಂಭವಾಗಿರುವ ಕಾರ್ಖಾನೆ ನಿಯತ್ತಾಗಿ ಕೆಲಸ ಮಾಡುತ್ತಿದೆಯಾ ಅಂದರೆ ಅದೂ ಇಲ್ಲ. ಸ್ಥಳೀಯರಿಗೆ ಕೆಲಸ ಕೊಡದೆ ವಂಚಿಸಿ ರೋದಲ್ಲದೆ ಕಾರ್ಮಿಕರನ್ನು ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದೆ.

ಕಾರ್ಮಿಕ ವಿರೋಧಿ ಕಂಪನಿ

ಈ ಕಂಪನಿ ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಗೆ ಒಳಪಡುವುದರಿಂದ ಉದ್ಯೋಗದಲ್ಲಿ ಇಲ್ಲಿನ ಸ್ಥಳೀಯರಿಗೆ ಶೇ.80 ರಷ್ಟು ಮೀಸಲಾತಿ ನೀಡಬೇಕು. ಆದರೆ ಈಗಿಲ್ಲಿ ಕೆಲಸ ಮಾಡುತ್ತಿರುವ ಸ್ಥಳೀಯ ಕಾರ್ಮಿಕರ ಸಂಖ್ಯೆ ಶೇ.10 ರಷ್ಟು ಮಾತ್ರ! ಸ್ಥಳೀಯರನ್ನು ಕೆಲಸಕ್ಕೆ ತೆಗೆದುಕೊಂಡರೆ ತಮ್ಮ ಹಕ್ಕುಗಳಿಗಾಗಿ ಸಂಘಟಿತರಾಗುತ್ತಾರೆ, ನ್ಯಾಯಬದ್ಧ ಸೌಲಭ್ಯ ಕೇಳುತ್ತಾರೆ, ಆಗ ಮನಸ್ಸೋಇಚ್ಛೆ ದುಡಿಸಿಕೊಳ್ಳಲು ಆಗುವುದಿಲ್ಲ ಎಂಬುದು ಕಂಪನಿಯ ಹಿಕಮತ್ತು. ಹಾಗಾಗಿ ಹೊರ ರಾಜ್ಯದವರನ್ನೆ ಹೆಚ್ಚಾಗಿ ನೇಮಿಸಿಕೊಳ್ಳಲಾಗುತ್ತಿದೆ. ಎಲ್ಲವೂ ಗುತ್ತಿಗೆ ನೇಮಕವಾದ್ದರಿಂದ ಕಾರ್ಮಿಕ ಶ್ರಮವನ್ನು ತಮಗೆ ಬೇಕಾದಷ್ಟು ಹೀರಿಕೊಂಡು 40-45 ವರ್ಷ ವಯಸ್ಸು ದಾಟಿದ ಕೂಡಲೇ ಕಿತ್ತು ಬಿಸಾಡುವುದು ಇಲ್ಲಿನ ಪದ್ಧತಿ.

ಇಲ್ಲಿ 400 ಕಾರ್ಮಿಕರಿದ್ದರೂ ರಜೆಯಾಗಲಿ, ಹೆಚ್ಚುವರಿ ಭತ್ಯೆಯಾಗಲಿ, ಸಮಯದ ನಿಗದಿಯಾಗಲಿ ಇರಲಿಲ್ಲ. ಅದನ್ನೆಲ್ಲ ಪ್ರಶ್ನಿಸಲು ಇಲ್ಲೊಂದು ಕಾರ್ಮಿಕ ಯೂನಿಯನ್ನೇ ಇರಲಿಲ್ಲ. ಅಷ್ಟರಮಟ್ಟಿಗೆ ಆಡಳಿತ ಮಂಡಳಿ ಕಾರ್ಮಿಕರನ್ನು ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡಿತ್ತು. ಆದರೆ 20 ಸೆಪ್ಟೆಂಬರ್ 9 ರಂದು ಕಂಪನಿ ಆವರಣದಲ್ಲಿ ಕ್ರಾಂತಿ ಕಾಮಗಾರ್ ಯೂನಿಯನ್ ಅವತರಿಸಿದ್ದು ಆ ಮಂಡಳಿಗೆ ನುಂಗಲಾರದ ತುತ್ತಾಗಿದೆ. ಸುಮಾರು ಕಾರ್ಮಿಕರ ಸಭೆ ನಡೆಸಿದ ಯೂನಿಯನ್ ಅವ ಸಮಸ್ಯೆಗಳನ್ನು ಆಲಿಸಿದ್ದು ಕಂಪನಿಯ ಮಾಲೀಕರ ಬಿದ್ದಿದ್ದೆ ತಡ, ಏನೋ ನಡೆಯಬಾರದ್ದು ನಡೆದುಹೋ ಎಂಬ ರೀತಿಯಲ್ಲಿ 2015ರ ಸೆಪ್ಟೆಂಬರ್ 25 ರ ಈ ಯೂನಿಯನ್‌ನ 15 ಪದಾಧಿಕಾರಿಗಳನ್ನು ದಿಂದಲೇ ವಜಾ ಮಾಡಿದ್ದರು. ಇನ್ನುಳಿದ ಕಾರ್ಮಿಕರಿ ಕಿರುಕುಳ ಶುರುವಾಗಿದ್ದವು. ಇದರ ವಿರುದ್ಧ 20 ಅಕ್ಟೋಬರ್ 26 ರಂದು ಯೂನಿಯನ್ ವತಿಯಿ ಬಳ್ಳಾರಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆಯ ನಡೆಸಲಾಗಿತ್ತು.

ಯಾವಾಗ ಡಿಸಿ ಕಚೇರಿ ಎದುರೇ ತಮ್ಮ ಪ ಹರಾಜಾಯ್ತೊ ಆಗ ಕಂಪನಿಯ ಮಾಲೀಕತ್ವದ ಮುಖಗಳು ಒಂದೊಂದಾಗಿ ಬಯಲಾಗಲು ಶುರುವಾ ಅದರ ಮೊದಲ ಭಾಗವಾಗಿ ಬಳ್ಳಾರಿಯ ಕುಮೆಂಪುನಗ ವಾಸವಿರುವ ನಾಲ್ವರು ಕಾರ್ಮಿಕರ ಮೇಲೆ ಕೌಳ್ ಬಜ ಠಾಣೆಯ ಪೊಲೀಸರು ಇಲ್ಲಸಲ್ಲದ ಆರೋಪ ಹೊ ಮನಬಂದಂತೆ ಥಳಿಸಿದ್ದಲ್ಲದೆ 'ಸಂಘಗಿಂಗ ಅಂತ ಹೋ ನಿಮಗೆ ಇದೇ ಗತಿ, ಮುಂಚೆ ಹೆಂಗಿದ್ರಿ ಹಂಗೆ ಮುಚ್ಕೊ ಕೆಲಸ ಮಾಡೋದನ್ನು ಕಲೀರಿ' ಅನ್ನೋ ಧಮಕಿಯ ಹಾಕಿದ್ದರು. ಪೊಲೀಸ್ ದೌರ್ಜನ್ಯದ ವಿಷಯ ಗೊ ಯೂನಿಯನ್‌ರವರು ಬಂದು ಗಲಾಟೆ ಮಾ ನಂತರವಷ್ಟೇ ಕಾರ್ಮಿಕರನ್ನು ಅಲ್ಲಿಂದ ಬಿಟ್ಟಿದ್ದು.

ಕಂಪನಿ ಮಾಲಿಕತ್ವದ ಕಾರ್ಮಿಕ ವಿಕೃತಿಯ ಎರ ಎಪಿಸೋಡು ಮತ್ತಷ್ಟೂ ಭೀಕರವಾಗಿತ್ತು. ಮೊದ ಪೊಲೀಸರನ್ನು ಬಳಸಿಕೊಂಡಿದ್ದ ಆಡಳಿತ ಮಂಡಳಿ ಬಾರಿ ಕಾರ್ಮಿಕರನ್ನು ಬಗ್ಗುಬಡಿಯಲು ಬಳಸಿಕೊಂಡ ಬಾಡಿಗೆ ಗೂಂಡಾಗಳನ್ನು. ಕೆಲಸ ಮುಗಿಸಿ ಮನೆಗೆ ಹೊರ ಪ್ರೇಮ್‌ಕುಮಾರ್ ಎಂಬ ಕಾರ್ಮಿಕನ ಮೇಲೆ ಮ ವೆಂಕಟೇಶ್ ಎನ್ನುವ ಗೂಂಡಾ ಮತ್ತು ಅವನ ಭಂಟ ಸೇರಿ ಮಾರಣಾಂತಿಕವಾಗಿ ಬಡಿದು ಪರಾರಿಯಾಗಿದ ದಾರಿಹೋಕರು ನೋಡಿ ಆಸ್ಪತ್ರೆಗೆ ದಾಖಲಿಸಿದ್ದರ ಅದೃಷ್ಟವಶಾತ್ ಪ್ರೇಮ್‌ಕುಮಾರ್ ಪ್ರಾಣಾಪಾಯದ ಪಾರಾಗಿದ್ದಾರೆ. ಮಾಸ್ ವೆಂಕಟೇಶ್ ಮತ್ತು ಅ ಸಂಗಡಿಗರು ತನ್ನನ್ನು ಕೊಲೆ ಮಾಡಲು ಯತ್ನಿಸಿ ಅಂತ ದೂರು ಕೊಡಲು ತೋರಣಗಲ್ಲು ಪೋಲಿ

ಡಾಂಬರು ಕಾರ್ಖಾನೆಯ ಪರಿಸರ ನಾಶ

Bringing alive a billion dreams

ಸೂಕ್ತ ಕೈಗಾರಿಕಾ ಕಾನೂನುಗಳನ್ನು ಪಾಲನೆ ಮಾಡದೆ ಈಗಾಗಲೇ ಜೆಎಸ್‌ಡಬ್ಲ್ಯು ಕಂಪನಿ ಪರಿಸರಕ್ಕೆ ವಿಪರೀತ ಹಾನಿಮಾಡುತ್ತಿದೆ. ಹಸಿರೀಕರಣ ಮಾಡುತ್ತೇವೆಂದು ಬೂಸಿ ಬಿಡುವ ಫ್ಯಾಕ್ಟರಿಯವರು ಗಿಡ-ಮರ ಬೆಳೆಸುವ ಬದಲು ಫ್ಯಾಕ್ಟರಿಯ ಧೂಳು ಹೊರಹಾಕುತ್ತಿದ್ದಾರೆ. ಫ್ಯಾಕ್ಟರಿ ಕಾರಣದಿಂದ ವಾಹನಸಂಚಾರ ಹೆಚ್ಚಾಗಿ ಸುಲ್ತಾನಪುರ, ಅಂತಾಪುರ ಗ್ರಾಮಗಳು ಧೂಳು ಕುಡಿಯುತ್ತಿವೆ. ಬೆಳೆಗಳಂತು ಸಂಪೂರ್ಣ ಹಾಳಾಗಿ ಸಮರ್ಪಕ ಇಳುವರಿಯೇ ರೈತರ ಕೈಗೆ ಹತ್ತುತ್ತಿಲ್ಲ. ಇದನ್ನೆಲ್ಲ ಪ್ರಶ್ನಿಸಲು ಹೋದರೆ ರೈತರ ಮೇಲೆಯೇ ಕಂಪನಿಯವರು ಸುಳ್ಳು ದೂರು ದಾಖಲಿಸುತ್ತಾರೆ. ಈಗ ಅದೇ ಜಿಂದಾಲ್ ಸಂಸ್ಥೆ ಡಾಂಬರು ಕಾರ್ಖಾನೆ ಸ್ಥಾಪಿಸಲು ಮುಂದಾಗುವ ಮೂಲಕ ಪರಿಸರದ ಮೇಲೆ ಮತ್ತೊಂದು ಹಲ್ಲೆಗೆ ಸಜ್ಜಾಗಿದೆ.

ಅಸಲಿಗೆ ಈ ಡಾಂಬರು ಕಾರ್ಖಾನೆ ಹೊಸದೇನೂ ಅಲ್ಲ. ಈಗಾಗಲೇ ಗೋಕಾಕ್ ಬಳಿಯ ಹಳ್ಳಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿದೆ. ಆದರೆ ಸಮರ್ಪಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಕಾರಣ ಡಾಂಬರು ಕಾರ್ಖಾನೆಯಿಂದ ಅಲ್ಲಿನ ಜನರ ಜೀವನ ಮತ್ತು ಪರಿಸರದ ಮೇಲೆ ಭಾರೀ ದುಷ್ಪರಿಣಾಮ ಬೀರಿದೆ. ಹಲವರಿಗೆ ಚರ್ಮರೋಗ, ಶ್ವಾಸಕೋಶದ ಸಮಸ್ಯೆ ಉಂಟಾಗಿರುವ ಕಾರಣ ಆ ಜನ ಡಾಂಬರು ಕಾರ್ಖಾನೆ ರದ್ದತಿಗೆ ನಿರಂತರವಾಗಿ ಹೋರಾಡುತ್ತಿದ್ದಾರೆ. ಜನರ ಈ ಪ್ರತಿರೋಧ ತಾಳಲಾರದೆ ಕಂಪನಿ ಈಗ ಅದನ್ನು ತೋರಣಗಲ್ಲು ಸಮೀಪದ ಸುಲ್ತಾನಪುರಕ್ಕೆ ಸ್ಥಳಾಂತರಿಸಲು ಸಂಚು ನಡೆಸುತ್ತಿದೆ.

ಯಾವುದೇ ಕಾರ್ಖಾನೆ ಸ್ಥಾಪನೆಗೂ ಮುನ್ನ ಸ್ಥಳೀಯ ಜನಾಭಿಪ್ರಾಯ ಪಡೆದು ಸ್ಥಾಪಿಸಬೇಕೆಂಬ ನಿಯಮವಿದ್ದರೂ ಅದನ್ನು ಉಲ್ಲಂಘಿಸಿ ಕಾರ್ಖಾನೆ ನಿರ್ಮಾಣಕ್ಕೆ ಮುಂದಾದ ಜಿಂದಾಲ್ ಕಂಪನಿಯ ವಿರುದ್ಧ ಈಗಾಗಲೇ ಜನಾಕ್ರೋಶ ಭುಗಿಲೆದ್ದಿದೆ. ತೋರಣಗಲ್ಲು, ಸುಲ್ತಾನಪುರದಲ್ಲಿ ಸಭೆ ನಡೆಸಿರುವ ಗ್ರಾಮಸ್ಥರು ಹಲವು ಸಂಘಟನೆಗಳ ಬೆಂಬಲದೊಂದಿಗೆ ಜಿಲ್ಲಾಧಿಕಾರಿ, ತಹಸೀಲ್ದಾರ್‌ರಿಗೆ ಜನವಸತಿಯಿಂದ ದೂರದ ಸ್ಥಳದಲ್ಲಿ ಮಾತ್ರ ಕಾರ್ಖಾನೆ ಸ್ಥಾಪಿಸಬೇಕೆಂದು ಮನವಿ ಮಾಡಿದ್ದಾರೆ. ಸ್ಥಳೀಯ ಗ್ರಾಮ ಪಂಚಾಯಿತಿಯೂ ಡಾಂಬರು ಕಾರ್ಖಾನೆಗೆ ವಿರೋಧ ವ್ಯಕ್ತಪಡಿಸಿದೆ. ಶೀಘ್ರವೇ ಸರ್ಕಾರ ಮಧ್ಯಪ್ರವೇಶ ಮಾಡಿ ಈ ಯೋಜನೆಯನ್ನು ನಿಲ್ಲಿಸಬೇಕು. ಇಲ್ಲವಾದಲ್ಲಿ ದೊಡ್ಡ ಹೋರಾಟಕ್ಕಿಳಿಯುವುದಾಗಿ ಜನ ಎಚ್ಚರಿಕೆ ನೀಡಿದ್ದಾರೆ. ಜನರ ಪ್ರತಿರೋಧಕ್ಕೆ ಹೆದರಿ ಡಾಂಬರು ಕಾರ್ಖಾನೆ ಸ್ಥಾಪನೆಯನ್ನು ಹಿಂತೆಗೆದುಕೊಳ್ಳುವ ಆಲೋಚನೆಯಲ್ಲಿ ಆಡಳಿತ ಮಂಡಳಿ ಇದೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ಹಾಗಂತ ಕಂಪನಿಯನ್ನು ನಂಬಲಾಗುವುದಿಲ್ಲ. ಯಾಕೆಂದರೆ ಜನರನ್ನು ಯಾಮಾರಿಸಲು ಈ ಬಂಡವಾಳಶಾಹಿಗಳು ಎಂತಹ ಹೀನ ನಾಟಕವನ್ನಾದರು ಆಡಲು ಸಿದ್ಧ.





ಕಾರ್ಮಿಕರು ರಸ್ತೆ ತಡೆ ಮಾಡಿ ಪ್ರತಿಭಟಿಸುತ್ತಿರುವುದು

ಠಾಣೆಗೆ ಹೋದರೆ ದೂರು ತೆಗೆದುಕೊಳ್ಳಲು ಪೊಲೀಸರು ಹಿಂದೇಟು ಹಾಕಿದ್ದರು. ಯಾಕೆಂದರೆ ಈ ಮಾಸ್ ವೆಂಕಟೇಶ್‌ನನ್ನು ಛೂಬಿಟ್ಟಿದ್ದೇ ಜಿಂದಾಲ್‌ನ ಆಡಳಿತ ಮಂಡಳಿ. ಆಗಲೂ ತಮ್ಮ ಹಕ್ಕಿಗಾಗಿ ಕಾರ್ಮಿಕರು ಠಾಣೆಯ ಮುಂದೆ ದೊಡ್ಡ ಪ್ರತಿಭಟನೆ ನಡೆಸಿದ ನಂತರವಷ್ಟೇ ಪೊಲೀಸರು ದೂರು ದಾಖಲಿಸಿಕೊಂಡು ಮಾಸ್ ವೆಂಕಟೇಶ್ ಸೇರಿದಂತೆ 6 ಗೂಂಡಾಗಳನ್ನು ಬಂಧಿಸಿದ್ದು.

ಯಾವಾಗ ಪೊಲೀಸ್, ಗೂಂಡಾ ಬತ್ತಳಿಕೆಯೂ ಖಾಲಿಯಾಯ್ತೊ ಆಗ ಆಡಳಿತ ಮಂಡಳಿ ಕೈಗೆತ್ತಿಕೊಂಡದ್ದು ಸಸ್ಪೆಂಡ್ ಅಸ್ತ್ರವನ್ನು. ಇಲ್ಲಸಲ್ಲದ ನೆಪವೊಡ್ಡಿ ಐವರು ಕಾರ್ಮಿಕ ಪದಾಧಿಕಾರಿಗಳನ್ನು ವಜಾ ಮಾಡಿ, 15 ಕಾರ್ಮಿಕರನ್ನು ಹೊರಗೆಲಸದ ಮೇಲೆ ಕಳುಹಿಸಿದೆ. ಜೊತೆಗೆ ಹಲವು ಕಾರ್ಮಿಕರ ಮೇಲೆ ಸುಳ್ಳು ದೂರುಗಳನ್ನು ದಾಖಲಿಸಿದೆ. ಕಾರ್ಮಿಕ ಯೂನಿಯನ್‌ನ ಕೆಲವರಿಗೆ ಬೆದರಿಕೆಯೊಡ್ಡಿ, ಹೆದರಿಸಿ ಯೂನಿಯನ್ ಬಿಡುವಂತೆ ಮಾಡಿದ್ದಾರೆ. ಮತ್ತಷ್ಟೂ ಮುಂದುವರೆದು ತಮ್ಮ ಮಾತು ಕೇಳದವರನ್ನು ಹೊರರಾಜ್ಯದ ಬೇರೆ ಘಟಕಕ್ಕೆ ವರ್ಗಾವಣೆ ಮಾಡುತ್ತಿದ್ದಾರೆ. ಕಂಪನಿಯ ಈ ದುರ್ವರ್ತನೆಗೆ ಬೆದರಿ ಹಲವಾರು ಕಾರ್ಮಿಕರು ತಮ್ಮ ಕೆಲಸಗಳನ್ನೆ ಬಿಟ್ಟಿದ್ದಾರೆ.

ಜೆಎಸ್‌ಡಬ್ಲ್ಯು ಮಾಲೀಕರ ಇಂತಹ ನಿರಂತರ ದೌರ್ಜನ್ಯ ಕಿರುಕುಳ ತಾಳಲಾರದೆ ಕಾರ್ಮಿಕರು ಕಾನೂನಿನ ಮೊರೆ ಹೋಗಿದ್ದಾರೆ. ಬಳ್ಳಾರಿಯು ದಾವಣಗೆರೆ ವಿಭಾಗೀಯ ಕಾರ್ಮಿಕ ಇಲಾಖೆ ವ್ಯಾಪ್ತಿಗೆ ಒಳಪಡುವುದರಿಂದ ದಾವಣಗೆರೆಯ ಅಸಿಸ್ಟೆಂಟ್ ಲೇಬರ್ ಕಮೀಷನರ್‌ಗೆ ಕಾರ್ಮಿಕ ಕಾಯ್ದೆಯ ಉಲ್ಲಂಘನೆಯ ದೂರು ನೀಡಿದ್ದಾರೆ. ಬಳ್ಳಾರಿ ಶಾಖೆಗೂ ದೂರು ನೀಡಿದ್ದಾರೆ. ದಾವಣಗೆರೆಯಲ್ಲಿ ಎರಡು ಅನುಸಂಧಾನ ಸಭೆ ನಡೆದರೂ ಸಹ ಕಂಪನಿ ವತಿಯಿಂದ ಯಾರೊಬ್ಬರೂ ಹಾಜರಾಗಿರಲಿಲ್ಲ. ಮೂರನೇ ಅನುಸಂಧಾನ ಸಭೆಯ ದಿನಾಂಕ ಸೂಚಿಸಿದ ಕೂಡ ಎಚ್ಚೆತ್ತುಕೊಂಡ ಕಂಪನಿಯ ಆಡಳಿತ ಮಂಡಳಿ ತನ್ನ ಕುತಂತ್ರವನ್ನು ಬಳಸಿ ಕಾನೂನನ್ನೇ ಬದಲಿಸಿದ್ದಾರೆ. ರಾಜ್ಯಪಾಲರಿಂದ ಹೊಸ ಸುತ್ತೋಲೆ ತಂದು 100ಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿರುವ ಕಾರ್ಖಾನೆಗಳ ವ್ಯಾಜ್ಯಗಳನ್ನು ಬೆಂಗಳೂರಿನಲ್ಲೇ ನಡೆಸಬೇಕೆಂಬ ನಿಯಮ ಮುಂದಿಟ್ಟಿದ್ದಾರೆ. ಅದಾದನಂತರವೂ ಬೆಂಗಳೂರಿನಲ್ಲಿ ನಡೆದ ಅನುಸಂಧಾನ ಸಭೆಗೂ ಕಂಪನಿಯಿಂದ ಯಾರೂ ಹಾಜರಾಗಿಲ್ಲ. ಕಲಬುರಗಿ ಅಸಿಸ್ಟೆಂಟ್ ಲೇಬರ್ ಕಮೀಷನ್‌ನ ಎರಡು ಅನುಸಂಧಾನ ಸಭೆಗೆ ಬಾರದ ಕಂಪನಿಯ ಆಡಳಿತ ಮಂಡಳಿ ಮೂರನೇ ಸಭೆಗೆ ರಣಜಿತ್ ಪಿಳ್ಳೈ ಎಂಬುವವರನ್ನು ಕಳುಹಿಸಿ ಮತ್ತಷ್ಟು ಸಮಯ ಕೇಳುವ ನಾಟಕವಾಡುತ್ತಿದೆ. ಕಾರ್ಮಿಕರ ಬೆನ್ನಿಗೆ ನಿಲ್ಲಬೇಕಾದ ಕಾರ್ಮಿಕ ಇಲಾಖೆಯ ಅಧಿಕಾರಿಗಳೂ ಕಂಪನಿ ಜೊತೆ ಶಾಮೀಲಾಗಿ ಆಡಳಿತ ಮಂಡಳಿಯ ತಾಳಕ್ಕೆ ತಕ್ಕಂತೆ ಕುಣಿಯುತ್ತಿರೋದು ಇಂತಹ ಸತಾಯಿಸುವಿಕೆಯಿಂದಲೇ ಸಾಬೀತಾಗುತ್ತಿದೆ.

ಎಲ್ಲಿದ್ದಾರೆ ಸಂತೋಷ್ ಲಾಡ್


ಇದರಿಂದ ಬೇಸತ್ತಿರುವ ಕಾರ್ಮಿಕರು ಬಳ್ಳಾರಿಯ ಕಾರ್ಮಿಕ ಇಲಾಖೆಯ ಎದುರು ನಿರಂತರವಾಗಿ 120 ದಿನಗಳಿಂದ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ. ಈ ಕೂಡಲೇ ವಜಾಗೊಂಡಿರುವ ಐವರು ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದರ ಜೊತೆಗೆ ಹೊರಗೆಲಸಕ್ಕೆ ಕಳೆಹಿಸುವವರನ್ನು ಕೂಡಲೇ ವಾಪಸ್ ಕರೆಸಿಕೊಳ್ಳಬೇಕು ಮತ್ತು ಸುಳ್ಳು ಕೇಸ್ ವಾಪಸ್ ಪಡೆದು ಅಂತರ್‌ರಾಜ್ಯ ವರ್ಗಾವಣೆಯನ್ನು ನಿಲ್ಲಿಸಬೇಕೆಂಬ ಬೇಡಿಕೆ ಅವರದು. ದುರದೃಷ್ಟವೆಂದರೆ 120 ದಿನಗಳಿಂದ ಕಾರ್ಮಿಕರು ಧರಣಿ ನಡೆಸುತ್ತಿದ್ದರೂ ಕಾರ್ಮಿಕ ಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿ ಸಂತೋಷ್ ಲಾಡ್ ಇತ್ತ ಸುಳಿದೇ ಇಲ್ಲ.

ಇದರಿಂದ ರೋಸಿಹೋದ ಕಾರ್ಮಿಕರು ಕಳೆದ ವಾರ ನಗರದ ಗಡಗಿ ಚೆನ್ನಪ್ಪ ವೃತ್ತದಲ್ಲಿ ಎರಡು ಗಂಟೆಗೂ ಹೆಚ್ಚು ಕಾಲ ರಸ್ತೆ ರೋಕೋ ಚಳವಳಿ ನಡೆಸಿದ್ದರು. ವಾಹನ ಸಂಚಾರ ಸ್ಥಗಿತವಾಗಿ ಪರಿಸ್ಥಿತಿ ವಿಕೋಪ ತಿರುಗಿತ್ತು. ಪೊಲೀಸರು ಕೆಲ ಕಾರ್ಮಿಕ ಮುಖಂಡರನ್ನು ಬಂಧಿಸಲು ಮುಂದಾದಾಗ ಪರಿಸ್ಥಿತಿ ಮತ್ತಷ್ಟು ಭಗಡಾಯಿಸುವ ಲಕ್ಷಣಗಳು ಗೋಚರಿಸಿದ್ದವು. ಆಗ ಸ್ಥಳಕ್ಕಾಗಮಿಸಿದ ಅಡಿಷನಲ್ ಕಮೀಷನರ್ ಲೋಕೇಶ್‌ರು ಇನ್ನು 15 ದಿನದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಸೇರಿದಂತೆ ಕಾರ್ಮಿಕ ಇಲಾಖೆ ಮತ್ತು ಆಡಳಿತ ಮಂಡಳಿಯವರೊಂದಿಗೆ ಸಭೆ ನಡೆಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿಹೋಗಿದ್ದಾರೆ.

ಸಚಿವ ಸಂತೋಷ್ ಲಾಡ್ ತುರ್ತಾಗಿ ಇತ್ತ ಗಮನಹರಿಸಬೇಕಿದೆ.

■ ಮುತ್ತುರಾಜು

ಹೊಳಲ್ಕೆರೆ: ಆಂಜನೇಯ ಲೆಕ್ಕಾಚಾರಕ್ಕೆ ಹನುಮಲಿ ಷಣ್ಮುಖಪ್ಪನ 'ಜಾತಿಬಲ'


ಆಂಜನೇಯ

ಚಿತ್ರದುರ್ಗ ಕೈ ಪಾಳಯದಲ್ಲಿ ಮತ್ತೆ ಕದಲಿಕೆಗಳು ಶುರುವಾಗಿವೆ. ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಗಾದಿಯಿಂದ ಕೆಂಗೋ ಹನುಮಂತಪ್ಪ ಮಾಜಿಯಾಗುತ್ತಿರುವುದೇ ಇದಕ್ಕೆ ಕಾರಣ. ಖಾಲಿಯಾಗುತ್ತಿರುವ ಈ ಜಾಗಕ್ಕೆ ತಮ್ಮ ಆಸನ ಊರಲು ಹಲವು ಹೆಸರುಗಳು ಹರಿದಾಡುತ್ತಿವೆ. ಅದರಲ್ಲಿ ಪ್ರಮುಖವಾಗಿ ಕೇಳಿಬರುತ್ತಿರೋದು ಹನುಮಲಿ ಷಣ್ಮುಖಪ್ಪ ಮತ್ತು ಸಂಸ ಜಯ್ಯಣ್ಣನ ಹೆಸರು. ಇವರಿಬ್ಬರಲ್ಲಿ ಷಣ್ಮುಖಪ್ಪನ ಹೆಸರೇ ರೇಸ್‌ನಲ್ಲಿ ಕೊಂಚ ಮುಂದಿದೆ. ಅದಕ್ಕೆ ಜಾತಿರಾಜಕಾರಣವೇ ಪ್ರಧಾನ ಮಾನದಂಡ.


ಚಿತ್ರದುರ್ಗದಲ್ಲಿ ಹೇಳಿಕೇಳಿ ಲಿಂಗಾಯತ ಮತಗಳದ್ದೇ ಪಾರುಪತ್ಯ. ಯಡಿಯೂರಪ್ಪ ಬಿಜೆಪಿಗೆ ವಾಪಾಸಾದ ನಂತರ ಲಿಂಗಾಯತ ಓಟುಗಳು ಸಾಲಿಡ್ಡಾಗಿ ಬಿಜೆಪಿಯತ್ತ ಮುಖ ಮಾಡಿ ಕೂತಿವೆ. ಅದರಲ್ಲೂ ಹೊಳಲ್ಕೆರೆ ಮತ್ತು ಹೊಸದುರ್ಗದಲ್ಲಂತೂ 2018ರ ವಿಧಾನಸಭಾ ಚುನಾವಣೆಗೆ ಈಗಲೇ ಬಿಜೆಪಿಯ ತಯಾರಿ ಜೋರಾಗಿ ಕಂಡುಬರುತ್ತಿದೆ. ಯಡಿಯೂರಪ್ಪನ ಕಾರಣಕ್ಕೆ ಸಾರಾಸಗಟಾಗಿ ಬಿಜೆಪಿಯತ್ತ ವಾಲುತ್ತಿರುವ ಲಿಂಗಾಯತ ಮತಗಳನ್ನು ತನ್ನತ್ತ ಪಳಗಿಸಿಕೊಳ್ಳಬೇಕೆಂದರೆ ಈಗ ಕಾಂಗ್ರೆಸ್ ಕೂಡಾ ಅದೇ ಸಮುದಾಯಕ್ಕೆ ಮನ್ನಣೆ ನೀಡುವ ಅನಿವಾರ್ಯತೆ ಇದೆ. ಆ ನಿಟ್ಟಿನಿಂದ ಲಿಂಗಾಯತರ ಷಣ್ಮುಖಪ್ಪನನ್ನು ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷಗಾದಿಗೆ ಕೂರಿಸುವುದೇ ಸೂಕ್ತವೆನ್ನುವ ಮಾತುಗಳು ಕೈಪಾಳಯದಲ್ಲಿ ಕೇಳಿಬರುತ್ತಿವೆ. ಸಂಸ ಜಯ್ಯಣ್ಣನ ಹೆಸರೂ ಪ್ರಸ್ತಾಪವಾಗುತ್ತಿದೆಯಾದರೂ ಜಾತಿಯದ್ದೇ ಇಲ್ಲಿ ಜಯ್ಯಣ್ಣನಿಗೆ ಅಡ್ಡಗಾಲು. ಯಾಕೆಂದರೆ ಈಗಾಗಲೇ ಜಿಲ್ಲಾ ಉಸ್ತುವಾರಿ ಮಂತ್ರಿ, ಜಿಲ್ಲೆಯ ಸಂಸದ ಹೀಗೆ ಎರಡೂ ಪ್ರಭಾವಿ ಸ್ಥಾನಗಳು ಮಾದಿಗ ಸಮುದಾಯದ ಬಳಿಯೇ ಇರುವುದರಿಂದ ಅದೇ ಜನಾಂಗದ ಜಯ್ಯಣ್ಣನಿಗೆ ಜಾಗ ಮಾಡಿಕೊಟ್ಟರೆ ಉಳಿದ ಜಾತಿಗಳ ವಿಶ್ವಾಸ ಕಳೆದುಕೊಳ್ಳಬೇಕಾದೀತು ಎಂಬ ಅಳುಕು ಕಾಂಗ್ರೆಸಿಗರನ್ನು ಕಾಡುತ್ತಿದೆ. ಹಾಗಾಗಿ ಹನುಮಲಿ ಷಣ್ಮುಖಪ್ಪನೇ ಪ್ರಾಧಿಕಾರದ ಕುರ್ಚಿಗೇರುವುದು ಬಹುತೇಕ ಖಚಿತ.


ಜಾತಿಯನ್ನು ಪಕ್ಕಕ್ಕಿಟ್ಟು ನೋಡಿದರೂ ಹನುಮಲಿ ಷಣ್ಮುಖಪ್ಪ ದುರ್ಗದ ಮಟ್ಟಿಗೆ ಪ್ರಭಾವಿ ರಾಜಕಾರಣಿಯೇ ಸರಿ. ಅವರ ಸ್ವಂತ ತಾಲೂಕು ಹೊಳಲ್ಕೆರೆ ಮೀಸಲು ಕ್ಷೇತ್ರವಾಗದೇ ಹೋಗಿದ್ದರೆ ಇಷ್ಟೊತ್ತಿಗಾಗಲೇ ಆತ ಎಂಎಲ್‌ಎ ಆಗಿ ರಾರಾಜಿಸುತ್ತಿದ್ದ. ಪಕ್ಕದ ಹೊಸದುರ್ಗದ ಮೇಲೂ ಷಣ್ಮುಖಪ್ಪನ ಹಿಡಿತ ಸಣ್ಣದೇನೂ ಅಲ್ಲ. ಪ್ರಭಾವಿ ಲಿಂಗಾಯತ ಜನಾಂಗಕ್ಕೆ ಸೇರಿರುವುದರಿಂದ ಸಾಧು ಸದ್ಧರ್ಮ ಮಠಗಳ ಕೃಪಾಶೀರ್ವಾದವೂ ಈತನ ಮೇಲಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೊಳಲ್ಕೆರೆಯಿಂದ ಕೈ ಪಾರ್ಟಿಯ ಎಚ್.ಆಂಜನೇಯ ಮತ್ತು ಹೊಸದುರ್ಗದಿಂದ ಗೋವಿಂದಪ್ಪ ಗೆದ್ದುಬರುವಲ್ಲಿ ಷಣ್ಮುಖಪ್ಪನ ಪಾತ್ರ ದೊಡ್ಡದು. ಯಡಿಯೂರಪ್ಪ ಬಿಜೆಪಿಯನ್ನು ಧ್ವಂಸ ಮಾಡಿ, ಕೆಜೆಪಿ ಕಟ್ಟಿಕೊಂಡು ಅಲೆದಾಡುತ್ತಿದ್ದಾಗ ಹೊಳಲ್ಕೆರೆಯ ಚಂದ್ರಪ್ಪ ಕೂಡಾ ತೆಂಗಿನ ಕಾಯಿ ಹೊತ್ತು ಹೊಳಲ್ಕೆರೆ ಸುತ್ತಾಡುತ್ತಿದ್ದ. ಲಿಂಗಾಯತ ಓಟುಗಳು ಬಿಜೆಪಿ, ಕೆಜೆಪಿ ನಡುವೆ ಹರಿದುಹಂಚಿ ಹೋಗುತ್ತವೆ ಅನ್ನೋ ಲೆಕ್ಕಾಚಾರದ ನಡುವೆಯೂ ಯಡಿಯೂರಪ್ಪನ ಫ್ಯಾಕ್ಟರ್ ಕೆಜೆಪಿ ಪರ ಬಲವಾಗಿ ಕೆಲಸ ಮಾಡುತ್ತಿತ್ತು, ಅಂಥಾ ಸಮಯದಲ್ಲಿ ಅತಂತ್ರಕ್ಕೀಡಾಗಿದ್ದ ಲಿಂಗಾಯತ ಮತಗಳನ್ನು ಕಾಂಗ್ರೆಸ್‌ನತ್ತ ಸೆಳೆದಿದ್ದೇ ಈ ಷಣ್ಮುಖಪ್ಪ.

ಅಂದಹಾಗೆ, ಈ ಷಣ್ಮುಖಪ್ಪ ಹಿಂದೊಮ್ಮೆ ಇದೇ ಯಡಿಯೂರಪ್ಪನ ಜೊತೆ ಬಿಜೆಪಿಯಲ್ಲಿ ಬಿದ್ದಾಡಿ ಬಂದವನು. ಅದಕ್ಕೂ ಮೊದಲು ಜನತಾ ಪರಿವಾರದಲ್ಲಿ 80ರ ದಶಕದಿಂದಲೇ ರಾಜಕಾರಣವನ್ನು ಹೊಕ್ಕಾಡಿದ ಮನುಷ್ಯ ತನ್ನ ಹೆಂಡತಿ ಪುಷ್ಪಾರನ್ನು ರಾಮಗಿರಿ ಜಿಲ್ಲಾ ಪಂಚಾಯ್ತಿ ಸದಸ್ಯೆಯನ್ನಾಗಿಯೂ ಮಾಡಿದ್ದ. ತದನಂತರ ಜಾತಿಯ ಕಾರಣಕ್ಕೆ ಯಡಿಯೂರಪ್ಪನನ್ನು ಅನುಸರಿಸಿದ ಷಣ್ಮುಖಪ್ಪ ಬಿಜೆಪಿಯಲ್ಲಿ ತಳವೂರಿದ್ದ. 2008ರಲ್ಲಿ 'ಯಡಿಯೂರಪ್ಪ ಮಹಾತ್ಮೆ' ರಿಲೀಸಾಗಿ ಬಿಜೆಪಿ ಅಧಿಕಾರಕ್ಕೇರಿದಾಗ ಚಿತ್ರದುರ್ಗ ಜಿಲ್ಲೆಗೆ ಪ್ರಾತಿನಿಧ್ಯ ಕೊಡುವ ಸಲುವಾಗಿ ಯಡಿಯೂರಪ್ಪ ಷಣ್ಮುಖಪ್ಪನನ್ನು ಕರೆದು ವಿಮಾನ ನಿಲ್ದಾಣ ಪ್ರಾಧಿಕಾರದ ಅಧ್ಯಕ್ಷನನ್ನಾಗಿ ಮಾಡಿದ್ದ. ಗೇಜ್ ಉಳ್ಳಂತ ಅಧಿಕಾರಗಳು ದಕ್ಕದೇಹೋದರೂ ಷಣ್ಮುಖಪ್ಪ ದುರ್ಗದ ಮಟ್ಟಿಗೆ ಲಿಂಗಾಯತರ ಜಾತಿಲೀಡರ್ ಆಗಿ ತನ್ನ ಪ್ರಭಾವ ಕಾಯ್ದುಕೊಂಡೇ ಬಂದಿದ್ದ.

ಹುಟ್ಟಾ ಆರೆಸ್ಸೆಸಿಗನಲ್ಲದ, ಜನತಾ ಪರಿವಾರದಲ್ಲಿ ಅಲೆದಾಡಿ ಬಂದಿದ್ದ ಷಣ್ಮುಖಪ್ಪನಿಗೆ ಬಿಜೆಪಿ ಸಂಸ್ಕೃತಿ ಕಿಂಚಿತ್ತೂ ಒಗ್ಗಿ ಬಂದಿರಲಿಲ್ಲ. ಯಾವಾಗ ಯಡಿಯೂರಪ್ಪನಂತ ಯಡಿಯೂರಪ್ಪನೇ ಬಿಜೆಪಿ ಮೇಲೆ ಮುನಿಸಿಕೊಂಡು


ಹನುಮಲಿ ಷಣ್ಮುಖಪ್ಪ


ಚಂದ್ರಪ್ಪ

ಸರಿದಾಡಲು ಶುರು ಮಾಡಿದರೋ ಅದೇ ಸಮಯಕ್ಕೆ ಷಣ್ಮುಖಪ್ಪನೂ ಬಿಜೆಪಿಯಿಂದ ಒಂದು ಕಾಲು ಹೊರಗಿಟ್ಟು ಪಕ್ಷಾಂತರಕ್ಕೆ ಸಜ್ಜಾಗಿದ್ದ.

ಇನ್ನೇನು ಎದುರಾಗಲಿದ್ದ 2013ರ ಚುನಾವಣೆಯಲ್ಲಿ ಗೆಲ್ಲಲೇಬೇಕೆಂಬ ಲೆಕ್ಕಾಚಾರಕ್ಕಿಳಿದಿದ್ದ ಎಚ್.ಆಂಜನೇಯರಿಗೆ ಹೊಳಲ್ಕೆರೆಯಲ್ಲಿರುವ ಒಂದು ಲಕ್ಷದಷ್ಟು ಲಿಂಗಾಯತ ಮತಗಳೇ ತನ್ನನ್ನು ದಡ ಮುಟ್ಟಿಸಬಲ್ಲವು ಎನ್ನುವುದು ಮನದಟ್ಟಾಗಿತ್ತು. ಅದಕ್ಕೊಬ್ಬ ಸಾರಥಿಯ ತಲಾಷ್‌ನಲ್ಲಿ ಇದ್ದಾಗಲೇ ಹನುಮಲಿ ಷಣ್ಮುಖಪ್ಪ ಬಿಜೆಪಿಯ ಪೊರೆ ಕಳಚಿಕೊಳ್ಳುತ್ತಿರೋದು ಆಂಜನೇಯರ ಗಮನಕ್ಕೆ ಬಂದಿತ್ತು. ಕೂಡಲೇ ಷಣ್ಮುಖಪ್ಪನನ್ನು ಕಾಂಗ್ರೆಸ್‌ಗೆ ಕರೆತಂದ ಆಂಜನೇಯ, ಅದೇ ಷಣ್ಮುಖಪ್ಪನನ್ನು ಮುಂದೆಬಿಟ್ಟು ಸಿರಿಗೆರೆ ಮಠದ ಜಾತಿ ಫರ್ಮಾನನ್ನೂ ಗಿಟ್ಟಿಸಿಕೊಂಡು ಬಿಟ್ಟರು. ಅದು ಕಾಂಗ್ರೆಸ್‌ಗೆ ನಿಜಕ್ಕೂ ವರ್ಕ್‌ಔಟ್ ಆಯ್ತು. ಕೇವಲ ಎಂಎಲ್‌ಎ ಎಲೆಕ್ಷನ್‌ನಲ್ಲಿ ಮಾತ್ರವಲ್ಲ, ಎಂಪಿ ಎಲೆಕ್ಷನ್‌ನಲ್ಲೂ ದುರ್ಗದಿಂದ ಕೈ ಪಾರ್ಟಿಯ ಚಂದ್ರಪ್ಪ ಗೆದ್ದು ಬರುವಲ್ಲಿ ಷಣ್ಮುಖಪ್ಪನ ಜಾತಿ ಪ್ರಭಾವ ಸಖತ್ತಾಗೇ ಕೆಲಸ ಮಾಡಿತ್ತು.


ಹಾಗೆ ನೋಡಿದರೆ, ಕಳೆದ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಷಣ್ಮುಖಪ್ಪನೇ ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾನೆನ್ನುವ ಸುದ್ದಿ ಜೋರಾಗಿ ಹರಿದಾಡುತ್ತಿತ್ತು. ಆದರೆ ರಿಯಲ್ ಎಸ್ಟೇಟ್ ರೊಕ್ಕಸ್ಥ ರಘು ಆಚಾರಿ ಕೊನೇಕ್ಷಣದಲ್ಲಿ ರಾಜ್ಯ ನಾಯಕರ ಜೊತೆ ಡೀಲ್ ಕುದುರಿಸಿಕೊಂಡಿದ್ದರಿಂದ ಆತನಿಗೇ ಕೈ ಟಿಕೆಟ್ ಒಲಿಯಿತು. ಆಗಲೇ ಮುಂದೆ ನಿಗಮ ಮಂಡಳಿ ಅಧ್ಯಕ್ಷ ಆಯ್ಕೆಯಲ್ಲಿ ನಿಮಗೊಂದು ಸ್ಥಾನ ಗ್ಯಾರಂಟಿ ಅನ್ನೋ ಭರವಸೆಯನ್ನು ಕಾಂಗ್ರೆಸ್ ಷಣ್ಮುಖಪ್ಪನಿಗೆ ನೀಡಿತ್ತು.

ಷಣ್ಮುಖಪ್ಪನಿಗೆ ಅಧ್ಯಕ್ಷಗಾದಿ ಕೊಡುವುದು ಒಟ್ಟಾರೆ ಕಾಂಗ್ರೆಸ್‌ಗೆ ಎಷ್ಟು ಲಾಭನಷ್ಟವೋ ಗೊತ್ತಿಲ್ಲ, ಆದರೆ ಮಂತ್ರಿ ಆಂಜನೇಯರ ಪಾಲಿಗಂತೂ ಮುಂಬರುವ ಎಲೆಕ್ಷನ್‌ನಲ್ಲಿ ಕೈಹಿಡಿಯಲಿದೆ. ಒಂದಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರೂ ಈಗ ಹೊಳಲ್ಕೆರೆಯಲ್ಲಿ ಭುಗಿಲೆಬ್ಬಿಸಲಾಗಿರುವ ಲಿಂಗಾಯತ ಮತಗಳ ಬಿಜೆಪಿ ಧ್ರುವೀಕರಣದ ಮುಂದೆ ಆಂಜನೇಯರ ವರ್ಚಸ್ಸು ಕೊಂಚ ಡಲ್ಲಾದಂತೆಯೇ ಕಂಡುಬರುತ್ತಿದೆ. ಈಗಾಗಲೇ ಬಿಜೆಪಿಯ ಲೋಕಲ್ ಲೀಡರ್‌ಗಳನ್ನು ಜೊತೆಗಾಕಿಕೊಂಡು ಮಾಜಿ ಶಾಸಕ ಚಂದ್ರಪ್ಪ ಎರಡೆರಡು ಬಾರಿ ಕ್ಷೇತ್ರವನ್ನು ಸುತ್ತಿ ಬಂದಿದ್ದಾನೆ. ಅದು ಮತದಾರರ ಮೇಲೆ ಹೇಳಿಕೊಳ್ಳುವಂತಹ ಪರಿಣಾಮ ಬೀರಿಲ್ಲವಾದರೂ ಲಿಂಗಾಯತರನ್ನು ಬಿಜೆಪಿಗೆ ಭರ್ತಿ ಮಾಡಿಕೊಳ್ಳುವ ಕಾಯಕಕ್ಕೆ ನಾಂದಿ ಹಾಡಿರುವುದು ಸುಳ್ಳಲ್ಲ. ಇಂಥಾ ಹೊತ್ತಲ್ಲಿ ಆಂಜನೇಯ ಮುಂದಾಲೋಚನೆಯಿಂದ ಹೆಜ್ಜೆ ಇರಿಸಬೇಕಿದ್ದು ಲಿಂಗಾಯತರು ಸಾರಾಸಗಟಾಗಿ ಕಾಂಗ್ರೆಸ್‌ನತ್ತ ತಿರುಗುವಂತೆ ಮಾಡದಿದ್ದರೂ ಹೋಲ್‌ಸೇಲಾಗಿ ಬಿಜೆಪಿಗೆ ಬಿಕರಿಗೊಳ್ಳುವುದನ್ನು ತಪ್ಪಿಸುವುದು ಅವರ ಮುಂದಿರುವ ದೊಡ್ಡ ಹೊಣೆ. ಅದಕ್ಕೆ ಈ ಷಣ್ಮುಖಪ್ಪ ಬಯಲುಸೀಮೆ ಅಧ್ಯಕ್ಷಗಾದಿಗಳೇ ಸದ್ಯದ ಅಸ್ತ್ರಗಳು.

ಆಂಜನೇಯ ಮಂತ್ರಿಯಾಗಿ ಜಿಲ್ಲಾ ಉಸ್ತುವಾರಿಯನ್ನು ವಹಿಸಿಕೊಂಡ ನಂತರ ಜಿಲ್ಲೆಯ ಹಿಂದುಳಿದ ಮತ್ತು ತಳಸಮುದಾಯಗಳಿಗೆ ಹೆಚ್ಚಿನ ಒತ್ತು ನೀಡುತ್ತಾ ಬಂದಿದ್ದಾರೆ. ಜಿಲ್ಲೆಯ ಇತಿಹಾಸದಲ್ಲೇ ಕಂಡುಕೇಳರಿಯದಷ್ಟು ಸಂಖ್ಯೆಯಲ್ಲಿ ಎಸ್ಸಿ, ಎಸ್ಟಿ ಸಮುದಾಯದ ಸಣ್ಣ ಕೃಷಿಕರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಭಾಗ್ಯ ಲಭಿಸಿದೆ. ಇತರ ಜಾತಿಗಳ ನಡುವೆಯೂ ಅದೇ ಸಮತೋಲನವನ್ನು ಅವರು ಕಾಯ್ದುಕೊಂಡು ಬಂದಿದ್ದಾರೆ. ಆಯಾ ಸಮುದಾಯಗಳ ಸಮುದಾಯ ಭವನಗಳು ತಲೆಎತ್ತಿ ನಿಲ್ಲುವಂತೆ ಮಾಡಿದ್ದರಲ್ಲೂ ಆಂಜನೇಯರ ಶ್ರಮವಿದೆ. ಈಗ ಸಾಧು ಲಿಂಗಾಯತರ ಷಣ್ಮುಖಪ್ಪನಿಗೆ ಪ್ರಾಧಿಕಾರದ ಅಧ್ಯಕ್ಷಗಾದಿ ನೀಡುವ ಮೂಲಕ ಪ್ರಭಾವಿ ಮತಸಮುದಾಯವನ್ನೂ ತಮ್ಮತ್ತ ಸೆಳೆದುಕೊಂಡರೆ ಯಡಿಯೂರಪ್ಪನ ಕಾರಣಕ್ಕೆ ಹೊಂಗನಸಿನಲ್ಲಿರೋ ಬಿಜೆಪಿಗಳಿಗೆ ಸರಿಯಾದ ಏಟು ಕೊಡಬಹುದು. ಹಾಗಾಗಿ ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷಗಾದಿ ಷಣ್ಮುಖಪ್ಪನಿಗೇ ಸಿಗುವುದು ಭಾಗಶಃ ಗ್ಯಾರಂಟಿ.

■ ಟಿ.ಎನ್. ಷಣ್ಮುಖ

ಕೊಡಗು: ಕಲ್ಲಡ್ಕ ಭಟ್ಟನಿಗೆ ಮುಖಭಂಗ



ಕಲ್ಲಡ್ಕ ಭಟ್ಟ


ದಕ್ಷಿಣ ಕನ್ನಡ ಜಿಲ್ಲೆಯ ಕೋಮು ಸೌಹಾರ್ದತೆಯನ್ನು ಸಂಪೂರ್ಣವಾಗಿ ನಾಶ ಮಾಡಿದ ನಂತರ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಯಲ್ಲಿಯೂ ಇಂತಹ ಪ್ರಯೋಗಗಳನ್ನು ನಿರಂತರವಾಗಿ ಮಾಡುತ್ತಿರುವ ಸಂಘ ಪರಿವಾರ ಮತ್ತು ಈ ಭಾಗದ ಇದರ ರಿಂಗ್ ಲೀಡರ್ ಪ್ರಭಾಕರ ಭಟ್ಟನಿಗೆ ಈಗ ಮುಖಭಂಗವಾಗಿದೆ. ಅದೂ ಅಂತಿಂತಹ ಈ ಮುಖಭಂಗವಲ್ಲ, ಅವರ ಮರ್ಮಕ್ಕೆ ಏಟು ಕೊಟ್ಟಿರುವಂತಹ ಮುಖಭಂಗ.


2015ರ ಡಿಸೆಂಬರ್ 10ರಂದು ಕರ್ನಾಟಕ ರಾಜ್ಯ ಸರಕಾರ ಟಿಪ್ಪು ಜನ್ಮ ದಿನಾಚರಣೆಯನ್ನು ಆಚರಿಸಲು ನಿರ್ಧರಿಸಿದಾಗ ಕೊಡಗು ಜಿಲ್ಲೆಯಲ್ಲಿ ಬಿಜೆಪಿ ಮತ್ತು ಸಂಘ ಪರಿವಾರ ಇದನ್ನು ತೀವ್ರವಾಗಿ ವಿರೋಧಿಸಿದ್ದವು. ಈ ವಿರೋಧವು ಇಬ್ಬರ ಸಾವಿನಲ್ಲಿ ಅಂತ್ಯಗೊಂಡಿತ್ತು. ಸಾವಿನ ಮನೆಯಲ್ಲಿಯೂ ಮತಗಳ ಲೆಕ್ಕಾಚಾರವನ್ನು ಹಾಕುವ ಸಂಘ ಪರಿವಾರ, ತಮ್ಮ ಈ ವಿರೋಧ ಮುಂದಿನ ಚುನಾವಣೆಗೆ ಸಹಾಯಕವಾಗಲಿದೆ ಎಂದು ಲೆಕ್ಕ ಹಾಕಿತ್ತು.

ಆ ಲೆಕ್ಕಾಚಾರದ ಭಾಗವೇ ಕೊಡಗಿನ ಸ್ವಾಸ್ಥವನ್ನು ನಿರಂತರವಾಗಿ ಕೆಡಿಸುತ್ತಿರುವ ಸಿಎನ್‌ಸಿ ಸಂಘಟನೆಯ 'ದೇವಟ್‌ಪರಂಬು' ಸ್ಮಾರಕ ನಿರ್ಮಾಣ ಕಾರ್ಯಕ್ರಮ. ಈ ಪ್ರದೇಶದಲ್ಲಿ ಟಿಪ್ಪು ಕೊಡವರನ್ನು ಕೊಂದಿದ್ದ ಅದಕ್ಕಾಗಿ ತಾವು ಸ್ಮಾರಕವನ್ನು ನಿರ್ಮಿಸುತ್ತಿದ್ದೇವೆ ಎಂದು ನಾಚಪ್ಪನ ಮೂಲಕ ಸಂಘಪರಿವಾರ ನುಲಿಯಿತು. ಅಲ್ಲಿ ಒಂದು ಕಲ್ಲು ನೆಟ್ಟು ಅದನ್ನು ಸ್ಮಾರಕ ಎಂದು ಘೋಷಣೆಯನ್ನೂ ಮಾಡಲಾಯಿತು.

ಆದರೆ ಕೆಲವೇ ದಿನಗಳಲ್ಲಿ ಆ ಕಲ್ಲು ಧರೆಗೆ ಉರುಳಿತ್ತು, ಇದನ್ನು ಕೋಮು ಘರ್ಷಣೆಯಾಗಿ ಪರಿವರ್ತಿಸಲು ಚೆಡ್ಡಿಗಳು ಪ್ರಯತ್ನಿಸಿದರಾದರೂ ಅದು ಕೈಗೂಡಲಿಲ್ಲ, ಅಷ್ಟರಲ್ಲಾಗಲೇ ಈ ಭಾಗದ ಅರೆಭಾಷೆ ಗೌಡ ಜನಾಂಗದವರು ಅಲ್ಲಿ ಸ್ಮಾರಕ ನಿರ್ಮಿಸುವುದನ್ನು ವಿರೋಧಿಸಿದರು. ಮಾತ್ರವಲ್ಲ ಆ ಪ್ರದೇಶ ದೇವಟ್‌ಪರಂಬು ಅಲ್ಲ, ಅದು ಕಣಿಯಂಗೋಟು ಎಂಬುದಕ್ಕೆ ದಾಖಲೆಯನ್ನು ಸಹ ತೋರಿದರು.


ಪ್ರತಾಪ್ ಸಿಂಹ


ಜಗದೀಶ್ ಕಾರಂತ್



ಆದರೆ ಕಲ್ಲು ಬಿದ್ದನಂತರ ನಾಚಪ್ಪನ ವರಸೆ ಬದಲಾಗಿತ್ತು, ತಾನು ಅಕ್ರಮವಾಗಿ ಮೀಸಲು ಅರಣ್ಯದಲ್ಲಿ ಕಲ್ಲು ನೆಟ್ಟಿದ್ದನ್ನು ಸಮರ್ಥಿಸಿಕೊಂಡ ನಾಚಪ್ಪ ಕಲ್ಲನ್ನು ಕೆಡವಿದವರನ್ನು ಪತ್ತೆಹಚ್ಚಿ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಜೊತೆಗೆ ಅಲ್ಲಿ ಮತ್ತೆ ಸ್ಮಾರಕ ನಿರ್ಮಾಣವಾಗಬೇಕು, ಒಂದು ವೇಳೆ ಅಕ್ಟೋಬರ್ 17ರ ಒಳಗೆ ಅಂದರೆ ಕಾವೇರಿ ಸಂಕ್ರಮಣದ ಒಳಗೆ ಸ್ಮಾರಕವನ್ನು ನಿರ್ಮಿಸದಿದ್ದಲ್ಲಿ 'ಕರಸೇವೆ'ಯ ಮೂಲಕ ಸ್ಮಾರಕವನ್ನು ನಿರ್ಮಿಸಲು ತಾವು ಬದ್ಧ ಎಂದು ಘೋಷಿಸಿದರು. 'ಕರಸೇವೆ' ಎಂಬುದು ಸಂಘ ಪರಿವಾರದ ಪದಭಂಡಾರದಲ್ಲಿರುವ ಶಬ್ದ. ಹಾಗಾಗಿ ಇದು ಸಂಘಪರಿವಾರದ ಹುನ್ನಾರ ಎಂಬುದು ಆಗಲೇ ಖಚಿತವಾಗಿತ್ತು.

ಕೊಡಗು ಜಿಲ್ಲೆಯಲ್ಲಿ ಅಶಾಂತಿಯನ್ನು ಉಂಟುಮಾಡುವ ಹಲವಾರು ಕಾರ್ಯಕ್ರಮಗಳನ್ನು ನಿರಂತರವಾಗಿ ರೂಪಿಸುತ್ತಾ ಬಂದಿರುವ ನಾಚಪ್ಪನ ಕಾರ್ಯವೈಖರಿಯನ್ನು ಗಮನಿಸಿದ ಜಿಲ್ಲೆಯ ಇತರೇ ಜನಾಂಗದವರು ಮತ್ತು ಮೂಲನಿವಾಸಿಗಳು ಸ್ಮಾರಕವನ್ನು ಪುನರ್ ಪ್ರತಿಷ್ಠಾಪಿಸುವುದನ್ನು ವಿರೋಧಿಸಿದರು. ಅಷ್ಟೇ ಅಲ್ಲ, ಉಳಿದ ಎಲ್ಲಾ ಜನಾಂಗಗಳು ಒಟ್ಟಾಗಿ 'ಕೊಡಗು ಸೌಹಾರ್ದ ವೇದಿಕೆ'ಯನ್ನು ರಚಿಸಿಕೊಂಡರು. ಸಂಘ ಪರಿವಾರದ ನಂಟು ಇರುವಂತಹ ಅರೆಭಾಷೆ ಗೌಡರು ಕೂಡ ಈ ವೇದಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ತಾವು ಬಿಜೆಪಿ ಮತ್ತು ಸಂಘ ಪರಿವಾರದ ಸಖ್ಯವನ್ನು ಬಿಡಲು ಸಿದ್ಧರಿದ್ದೇವೆಯೇ ವಿನಹ, ಯಾವುದೇ ಕಾರಣಕ್ಕೂ ಅಲ್ಲಿ ಸ್ಮಾರಕ ನಿರ್ಮಿಸಲು ಅವಕಾಶ ಕೊಡುವುದಿಲ್ಲ ಎಂದು ಬಹಿರಂಗವಾಗಿ ಅವರು ಸವಾಲು ಹಾಕಿದರು.

ಇದು ವಿವಿಧ ಸಮುದಾಯಗಳ ನಡುವೆ ಸಂಘರ್ಷದ ವಾತಾವರಣವನ್ನು ಸೃಷ್ಟಿಸಿತ್ತು, ವಾಟ್ಸಪ್‌ಗಳಲ್ಲಿ ಅತ್ಯಂತ ಕೆಟ್ಟದಾದ ರೀತಿಯ ಚರ್ಚೆಗಳು, ಹೇಳಿಕೆಗಳು ಹರಿದಾಡಿದವು. ಹಲವರ ಮಾನ ಹರಾಜು ಹಾಕುವ ಕಾರ್ಯವೂ ನಡೆಯಿತು. ಅರೆಭಾಷೆ ಜನಾಂಗದ ವ್ಯಕ್ತಿಯಾದ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಗಲ್ಲಿಗೇರಿಸಲ್ಪಟ್ಟ 'ಗುಡ್ಡೆಮನೆ ಅಪ್ಪಯ್ಯಗೌಡ' ಅವರು ಸ್ವಾತಂತ್ರ್ಯ ಹೋರಾಟಗಾರರಲ್ಲ; ಅವರೊಬ್ಬರು ದರೋಡೆಕೋರರು ಎಂದು ತೇಜೋವಧೆ ಮಾಡಲಾಯಿತು.

ಸಿಎನ್‌ಸಿ ಮತ್ತು ಕೊಡಗು ಸೌಹಾರ್ದ ವೇದಿಕೆಯ ನಡುವೆ ನಡೆಯಬೇಕಾಗಿದ್ದ ಸಂಘರ್ಷ, ಕೊಡವ ಮತ್ತು ಅರೆಭಾಷೆ ಗೌಡ ಜನಾಂಗದ ನಡುವೆ ಆರಂಭವಾಯಿತು. ಕೊಡಗು ಜಿಲ್ಲೆಯಲ್ಲಿ ಉಳಿದ ಜನಾಂಗದವರು ಇಲ್ಲವೇ ಇಲ್ಲ ಎನ್ನುವಂತೆ ಚರ್ಚೆಗಳು ನಡೆದವು. ಕೊಡಗಿನ ಸುಮಾರು 18 ಮೂಲ ನಿವಾಸಿಗಳು ಮತ್ತು 24 ಕೊಡವ ಭಾಷೆಯನ್ನು ಮಾತನಾಡುವ ಕೊಡವ ಭಾಷಿಕರು ಈ ಯಾವುದೇ ಬೆಳವಣಿಗೆಗೆ ಸಂಬಂಧಪಟ್ಟವರಲ್ಲ ಎನ್ನುವ ರೀತಿಯಲ್ಲಿ ಸಂಘರ್ಷ ಆರಂಭವಾಗಿತ್ತು.

ಕೊಡಗು ಸೌಹಾರ್ದ ವೇದಿಕೆ ಎ.ಕೆ. ಸುಬ್ಬಯ್ಯನವರನ್ನು ಸಂಘಟನೆಯ ಗೌರವ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ವಕೀಲರಾದ ಕೆ.ಆರ್.ವಿದ್ಯಾಧರ ಇದರ ಸಂಚಾಲಕರಾದರು. ಇದು ಸಂಘ ಪರಿವಾರದ ಪಾಲಿಗೆ ನುಂಗಲಾರದ ತುತ್ತಾಯಿತು. ಈ ವೇದಿಕೆ ರಚನೆಯಾದ ಮಾರನೆಯ ದಿನದಿಂದಲೇ 'ವನವಾಸಿ ಸಂಘ', 'ಹಿಂದೂ ಜಾಗರಣಾ ವೇದಿಕೆ', ಆರ್‌ಎಸ್‌ಎಸ್ ಎಲ್ಲವೂ ಸಕ್ರಿಯವಾದವು. ಸ್ಮಾರಕದ ಕಲ್ಲು ನೆಟ್ಟ ಪ್ರದೇಶದ ಭಾಗಮಂಡಲ-ತಲಕಾವೇರಿ ಸುತ್ತಮುತ್ತಲು ಸಂಘ ಪರಿವಾರ ಯುದ್ಧ ಸನ್ನದ್ಧೆಯಲ್ಲಿ ಅಲ್ಲಿಯವರ ಮನವೊಲಿಸುವ ಕಾರ್ಯವನ್ನು ಆರಂಭಿಸಿತು.

ತಮ್ಮ ಯೋಜನೆ ಕಾರ್ಯಗತಗೊಳ್ಳಬೇಕಾದರೆ ಸುಬ್ಬಯ್ಯ ಮತ್ತು ವಿದ್ಯಾಧರರಂತಹವರು ಮುಂಚೂಣಿಯಲ್ಲಿದ್ದರೆ ಆಗದು ಎಂಬ ಅರಿವು ಸಂಘ ಪರಿವಾರಕ್ಕೆ ಇದೆ. ಹಾಗಾಗಿ "ಈ ಇಬ್ಬರ ಜೊತೆಯಲ್ಲಿ ನೀವು ಏತಕ್ಕಾಗಿ ಕೈಜೋಡಿಸಿದ್ದೀರಿ?" ಎಂದು ಪ್ರಶ್ನಿಸತೊಡಗಿದರು. ಮಾಮೂಲಿಯಂತೆ ಸುಬ್ಬಯ್ಯ ಪಾಕಿಸ್ತಾನ ಧ್ವಜ ಪ್ರಕರಣದಲ್ಲಿ ಆರೋಪಿಗಳ ಪರ ವಕಾಲತ್ತು ವಹಿಸಿದವರು, ಅವರು ಹಿಂದೂ ವಿರೋಧಿ, ದೇಶದ್ರೋಹಿ ಎಂದೆಲ್ಲಾ ಹೇಳತೊಡಗಿದರು. ವಿದ್ಯಾಧರ ನಕ್ಸಲೈಟ್ ಆಗಿದ್ದಾರೆ, ಅವರು ನಕ್ಸಲೈಟ್ ರೂಪೇಶ್ ಪರವಾಗಿ ವಕಾಲತ್ತು ವಹಿಸಿದ್ದಾರೆ, ಅವರ ಸಖ್ಯದಲ್ಲಿ ನೀವೇಕೆ ಇದ್ದಿರಿ, ಹಿಂದೂಗಳನ್ನು ಇವರು ಒಂದಾಗಲು ಬಿಡುವುದಿಲ್ಲ ಎಂದು ಜನರ ಕಿವಿ ಊದಿದರು.

ಇದರಲ್ಲಿ ವಿಶ್ವ ಹಿಂದೂ ಪರಿಷತ್ತಿನ ಜಗದೀಶ್ ಕಾರಂತ ಪ್ರಮುಖ ಪಾತ್ರವನ್ನು ವಹಿಸಿದರಲ್ಲದೆ, ಕೊಡಗು ಜಿಲ್ಲೆಯ ಸಂಘ ಪರಿವಾರದ ಪ್ರಮುಖರೆಲ್ಲರೂ ಭಾಗವಹಿಸಿದರು. ಆದರೆ ಆಶ್ಚರ್ಯವೆಂಬಂತೆ ಬಿಜೆಪಿ ಈ ಕಾರ್ಯಕ್ರಮದಿಂದ ಬಹಳ ದೂರ ಇತ್ತು. ಬಿಜೆಪಿಯ ಕೊಡವ ಮುಖಂಡರು ಮಾತ್ರ ಸಕ್ರಿಯರಾಗಿದ್ದರೇ ವಿನಹ, ಬೇರೆ ಜನಾಂಗದವರು ಈ ಚಟುವಟಿಕೆಯಲ್ಲಿ ಭಾಗವಹಿಸಲಿಲ್ಲ. ಸಂಘ ಪರಿವಾರ ಶಾಸಕರಾದ ಕೆ.ಜಿ.ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್‌ರವರನ್ನು ಈಗ ವಿಶ್ವಾಸಾರ್ಹ ವ್ಯಕ್ತಿಗಳು ಎಂದು ಭಾವಿಸಿಲ್ಲ, ಅಪ್ಪಚ್ಚು ರಂಜನ್‌ಗಿಂತ ಬೋಪಯ್ಯನವರನ್ನು ಸಂಘ ಪರಿವಾರ ವಿರೋಧಿಸುತ್ತಿದೆ. ಇದಕ್ಕೆ ಹಲವು ಕಾರಣಗಳು ಇವೆ.

ಸಂಸದರಾಗಿರುವ ಪ್ರತಾಪ ಸಿಂಹ ತಾನು ಈ ಭಾಗದ ಗೌಡ ಜನಾಂಗದ (ಒಕ್ಕಲಿಗ) ನಾಯಕನಾಗಬೇಕು ಎಂಬ ಕುತಂತ್ರವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಬೋಪಯ್ಯ ಅರೆಭಾಷೆ ಗೌಡ ಜನಾಂಗದವರಾದರೂ ಅವರನ್ನು ಗೌಡ ಜನಾಂಗದವರು ಎಂದು ರಾಜ್ಯದಲ್ಲಿ ಮಾನ್ಯ ಮಾಡುತ್ತಾರೆ ಎಂಬ ಕಾರಣಕ್ಕಾಗಿ ಈ ಭಾಗದಲ್ಲಿ ತನ್ನ ನಾಯಕತ್ವಕ್ಕೆ ಬೋಪಯ್ಯ ಸವಾಲಾಗುತ್ತಾರೆ ಎಂಬುದು ಪ್ರತಾಪ ಸಿಂಹನ ತರ್ಕ. ಆದ್ದರಿಂದಲೇ ಬೋಪಯ್ಯನವರನ್ನು ಮುಂದಿನ ವಿಧಾನಸಭಾ ಚುನಾವಣೆಯ ವೇಳೆಗೆ ಈ ಭಾಗದ ಜನರು ತಿರಸ್ಕರಿಸುವ ರೀತಿಯಲ್ಲಿ ಕುತಂತ್ರಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ಬೋಪಯ್ಯನವರ ಹಿಂದಿನ ಮತ್ತು ಇಂದಿನ ಹಲವಾರು ನಡೆಗಳು ಕೂಡ ಕಾರಣವಾಗಿದೆ. ಈ ಹಿಂದೆ ನಾಚಪ್ಪನನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಬೋಪಯ್ಯ, ಈಗ ವಿವಾದಿತ ಕಲ್ಲನ್ನು ನೆಡಲು ಮತ್ತು ಅರಣ್ಯ ಹಾಗೂ ಪೊಲೀಸ್ ಇಲಾಖೆ ಕ್ರಮ ತೆಗೆದುಕೊಳ್ಳದಂತೆ ತಡೆದದ್ದು ಇದೇ ಬೋಪಯ್ಯ, ಹಾಗಾಗಿ ಬೋಪಯ್ಯನವರನ್ನು ಗೌಡ ಜನಾಂಗದವರು ಈಗ ತಿರಸ್ಕರಿಸುತ್ತಿದ್ದಾರೆ.

ಕೆಲವು ಸಮಯದಿಂದ ಬೋಪಯ್ಯನನ್ನು ಕೊಡವ ಜನಾಂಗದವರು 'ಕೊಡವ ವಿರೋಧಿ' ಎಂದು ಬಿಂಬಿಸಿದ್ದಾರೆ. ಹಾಗಾಗಿ ಈ ಎರಡೂ ಪ್ರಮುಖ ಜನಾಂಗಗಳು ಬೋಪಯ್ಯನವರನ್ನು ನಂಬುತ್ತಿಲ್ಲ, ಇದು ಪ್ರತಾಪ ಸಿಂಹನಿಗೆ ಮೈದಾನವನ್ನು ಸಿದ್ಧಪಡಿಸಿಕೊಟ್ಟಂತೆ ಆಗಿದೆ. ಮುಂದಿನ ವಿಧಾನಸಭಾ ಚುನಾವಣೆಗೆ ವಿರಾಜಪೇಟೆ ಕ್ಷೇತ್ರದಿಂದ ಮಾಚಿಮಂಡ ರವೀಂದ್ರರವರನ್ನು ಅಭ್ಯರ್ಥಿಯಾಗಿಸಬೇಕು ಎಂಬ ಯೋಜನೆ ಹಾಗೂ ತಂತ್ರಗಾರಿಕೆ ನಡೆಯುತ್ತಿದೆ. ರವೀಂದ್ರ ಸಿಎನ್‌ಸಿಯ ಒಬ್ಬ ಕಾರ್ಯಕರ್ತ. ಜಿಲ್ಲಾ ಬಿಜೆಪಿಯ ಅಧ್ಯಕ್ಷ ಮನುಮುತ್ತಪ್ಪ ಕೂಡ ಸಿಎನ್‌ಸಿಯ ಕಾರ್ಯಕರ್ತ.

ದುರಂತವೆಂದರೆ ಕಾಂಗ್ರೆಸಿನಲ್ಲಿಯೂ ಇದೇ ಸ್ಥಿತಿ ಇದೆ. ಕಾಂಗ್ರೆಸಿನಲ್ಲಿ ಮತ ಕೊಡುವ ಮತ್ತು ಮತ ಸೆಳೆಯುವ ವರ್ಗದ ಕೈಯಲ್ಲಿ ಅಧಿಕಾರವಿಲ್ಲ, ಸಿಎನ್‌ಸಿಯ ಬಗ್ಗೆ ಒಲವಿರುವ ಮತ್ತು ಇದರ ವಿರುದ್ಧ ಯಾವುದೇ ಕಾರಣಕ್ಕೂ ಮಾತನಾಡದಂತಹ ವ್ಯಕ್ತಿಗಳು ಎರಡೂ ಪಕ್ಷದಲ್ಲಿ ಅಧಿಕಾರದ ಹುದ್ದೆಯಲ್ಲಿ ಇದ್ದಾಳೆ.

ಕೊಡವ ಮತ್ತು ಅರೆಭಾಷೆ ಗೌಡ ಜನಾಂಗದವರು ಪ್ರತ್ಯೇಕವಾಗಿದ್ದು ಅರೆಭಾಷೆ ಗೌಡ ಜನಾಂಗದವರು ತಮ್ಮಿಂದ ದೂರ ಹೋಗಿ ಸುಬ್ಬಯ್ಯನವರನ್ನು ಒಪ್ಪಿಕೊಂಡದ್ದು ಸಂಘ ಪರಿವಾರದ ಚಡಪಡಿಕೆಗೆ ಕಾರಣವಾಗಿದೆ. ಚೆಡ್ಡಿಗಳು ಎಷ್ಟೇ ಪ್ರಯತ್ನಪಟ್ಟರೂ, ಅರೆಭಾಷೆ ಗೌಡ ಜನಾಂಗದವರು ಮಣಿಯುತ್ತಿಲ್ಲ, 'ಕೊಡವ ಸ್ಮಾರಕ' ಬೇಡ; ಬದಲಿಗೆ ಅಲ್ಲಿ 'ಹಿಂದೂ ಸ್ಮಾರಕ'ವನ್ನು ಮಾಡುವ ಎಂಬ ಹೊಸ ಯೋಜನೆಯನ್ನು ಸಂಘ ಪರಿವಾರ ಹರಿಬಿಟ್ಟರು ಅವರುಗಳು ಒಪ್ಪಿಕೊಳ್ಳುತ್ತಿಲ್ಲ.

ಆಗ "ಆಗಸ್ಟ್ 5ರಂದು ದಕ್ಷಿಣ ಕನ್ನಡದಿಂದ ಮಾಸ್ಟರ್ ಬರುತ್ತಾರೆ" ಎಂಬ ಹೊಸ ಯೋಜನೆಯನ್ನು ಸಂಘ ಪರಿವಾರ ಹಾಕಿಕೊಂಡಿತು. ಮಾಸ್ಟರ್ ಅಂದರೆ ಕಲ್ಲಡ್ಕ ಪ್ರಭಾಕರ ಭಟ್ಟ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂದೂ ಸರಿಪಡಿಸಲಾಗದ ಕೋಮುವಾದವನ್ನು ಸ್ಥಾಪಿಸಿರುವ ಈ ವ್ಯಕ್ತಿಯನ್ನು ಕೊಡಗು ಜಿಲ್ಲೆಯಲ್ಲಿ ಬಿರುಕು ಬಿಟ್ಟಿರುವ ಹಿಂದೂ ಮನಸ್ಸುಗಳ ನಡುವೆ 'ಫೆವಿಕಾಲ್' ಹಾಕಿ ಅಂಟಿಸಲು ಕರೆತರಲಾಗಿತ್ತು, ಆತ ಬಂದ ದಿನ ಮೂರು ಸಭೆಗಳನ್ನು ನಡೆಸಲಾಗುತ್ತದೆ; ಮೊದಲು ಗೌಡ ಜನಾಂಗದವರು, ಆನಂತರ ಕೊಡವ ಜನಾಂಗದವರು, ಕೊನೆಗೆ ಸಾಮರಸ್ಯ ಮೂಡಿಸುವ ಮತ್ತು ಸ್ಮಾರಕವನ್ನು ನಿರ್ಮಿಸುವ ವಿಚಾರದಲ್ಲಿ ಒಮ್ಮತಕ್ಕೆ ಬರುವ ಸಭೆಯನ್ನು ಒಂದೇ ದಿನದಂದು ನಡೆಸಲಾಗುವುದು ಎಂದು ಚೆಡ್ಡಿಗಳು ಪ್ರತಿಯೊಂದು ಮನೆಗೂ ತಿಳಿಸಿದ್ದರು.

ವಿರಾಜಪೇಟೆ ಮತ್ತು ಮಡಿಕೇರಿಯ ಮಧ್ಯದಲ್ಲಿ ಇರುವ ಮೂರ್ನಾಡು ಎಂಬ ಪ್ರದೇಶದಲ್ಲಿ ಈ ಸಭೆಯನ್ನು ಆಯೋಜಿಸಲಾಗಿತ್ತು, ಕಲ್ಲಡ್ಕ ಪ್ರಭಾಕರ ಭಟ್ಟ ಬ… ಎಂದರೆ ಎಲ್ಲರೂ ಓಡೋಡಿ ಬರುತ್ತಾರೆ ಎಂದು … ಭಾವಿಸಿದ್ದರು. ಆದರೆ ಅವರಿಗೆ ನಿರಾಶೆ ಆ… ಯಾಕೆಂದರೆ ಮೊದಲ ಸಭೆಗೆ ಆಗಮಿಸಬೇಕಾಗಿದ್ದ ಅ… ಗೌಡ ಜನಾಂಗದವರು ಅತ್ತ ಇಣುಕಿಯೂ ನೋ… ಕೇವಲ ಏಳು ಮಂದಿ ಸಂಘ ಪರಿವಾರದೆ… ನಿಕಟಸಂಪರ್ಕ ಇಟ್ಟುಕೊಂಡವರು ಮಾತ್ರ ಹಾಜ… ಅವರೊಂದಿಗೆ ಯಾವುದೇ ಚರ್ಚೆ ಸಾಧ್ಯವಿರಲಿ…

ಇದರಿಂದ ಕಾರ್ಯಕ್ರಮ ಆಯೋಜಿಸಿದ್ದವರಿ… ಮುಖಭಂಗವಾಯಿತು. ಕಲ್ಲಡ್ಕ ಪ್ರಭಾಕರ ಭಟ್ಟರ … ಪೆಟ್ಟಾಯಿತು. ಕೊಡಗು ಜಿಲ್ಲೆ ತಮ್ಮ ಪ್ರಯೋಗಾ… ಒಂದು ಭಾಗ ಎಂದು ಭಾವಿಸಿದ್ದ ಚೆಡ್ಡಿಗಳಿಗೆ ಕೊ… ತಮ್ಮ ಬೆಂಬಲಿಗರಲ್ಲೂ ಸ್ವಂತ ಬುದ್ಧಿ ಇರುವವರು … ಅವರು ಸಂಘಕ್ಕೆ ತಮ್ಮ ಬೌದ್ಧಿಕ ಶಕ್ತಿಯನ್ನು ಅಡ… ಎಂಬ ಅರಿವು ಆಯಿತು.

ಎರಡನೆ ಸಭೆಗೆ ನಾಚಪ್ಪ ಮತ್ತು ಆತನನ್ನು ಬೆಂಬ… ಸುಮಾರು 60 ಮಂದಿ ಬಂದಿದ್ದರು. ಅವರು… ಕೊಡವ ಸ್ಮಾರಕ ಆಗಬೇಕು ಎಂದು ಪಟ್ಟು ಹಿ… ಟಿಪ್ಪು ಆ ಪ್ರದೇಶದಲ್ಲಿ ಕೊಡವರನ್ನು ಕೊಂ… ಎಂಬುದು ನಾಚಪ್ಪನ ವಾದವಾಗಿದೆ. ಚೆಡ್ಡಿಗಳ 'ಹಿ… ಸ್ಮಾರಕ' ನಿರ್ಮಾಣದ ಬಗ್ಗೆ ನಾಚಪ್ಪನ ಮನವೊಲಿ… ಕಲ್ಲಡ್ಕ ಪ್ರಭಾಕರ ಭಟ್ಟ, ಜಗದೀಶ್ ಕಾರಂತ, ಕೆ… ಜಿಲ್ಲೆಯ ವನವಾಸಿ ಸಂಸ್ಥೆಯ ಚಕ್ಕೇರ ಮನು ಮುಂತಾ… ಪೂರ್ಣವಾಗಿ ವಿಫಲರಾದರು.

ಹೀಗೆ ಚೆಡ್ಡಿಗಳ ಮನಸ್ಸುಗಳನ್ನು ಬೆಸೆಯುವ ಯ… ವಿಫಲಗೊಂಡಿತು. ತನ್ನನ್ನು ಕೊಡಗಿನ ಜನ ನಿರ್ಲ… ಪ್ರಭಾಕರ ಭಟ್ಟರಿಗೆ ಸಿಟ್ಟು ಬಂದಿತ್ತು. ಆದರೆ … ಮಾಡುವ ಸ್ಥಿತಿಯಲ್ಲಿ ಅವರು ಇರಲಿಲ್ಲ.

ಆದರೂ "ಸುಮಾರು ಒಂದು ವರ್ಷಕ್ಕೂ ಹಿಂ… ಕಲ್ಲು ನೆಟ್ಟಿರುವ ಜಾಗದಲ್ಲಿ ಒಂದು ಎಕರೆ ಪ್ರದೇ… 'ಹಿಂದೂ ಸ್ಮಾರಕ'ವನ್ನು ನಿರ್ಮಿಸಬೇಕು ಎಂಬ … ನನ್ನಲ್ಲಿ ಇತ್ತು. ಅಲ್ಲಿ ಸುಂದರವಾದ ಹೂದೋ… ಮಾಡಿ ಅದನ್ನು ಅಭಿವೃದ್ಧಿ ಪಡಿಸಬೇಕು ಎಂಬು… ಕಲ್ಪನೆಯಾಗಿತ್ತು" ಎಂದೆಲ್ಲ ಭಟ್ಟ ಬಡಬಡ… ತೆಪ್ಪಗಾಗಬೇಕಾಯಿತು.


ಮೀಸಲು ಅರಣ್ಯ ಪ್ರದೇಶದಲ್ಲಿ … ಪಾರ್ಕು ಇತ್ಯಾದಿಗಳನ್ನು ನಿರ್ಮಿಸಬೇಕು … ಭಟ್ಟ ಅರಣ್ಯ ಪ್ರದೇಶ ತನ್ನ ಪಿತ್ರಾರ್ಜಿ… ಎಂದು ಭಾವಿಸಿದಂತಿದೆ. ಸಂವಿಧಾನ … ಕಾನೂನು ತಮಗೆ ಅನ್ವಯಿಸುವುದಿಲ್ಲ … ಧಿಮಾಕೂ ಇದ್ದಂತಿದೆ.

ಒಂದು ಕಡೆ ಸಂಘ ಪರಿವಾರದ ಪ್ರ… ಭಟ್ಟ ಹಿಂದೂ ಸ್ಮಾರಕವನ್ನು ನಿರ್ಮಿಸ… ಎಂದು ಹೇಳಿದರೆ, ಮತ್ತೊಂದು ಕಡೆ ಕಾ… ಎಐಸಿಸಿ ವಕ್ತಾರ ಬ್ರಿಜೇಶ್ ಕಾಳಪ್ಪ … ಕೊಡವ ಸ್ಮಾರಕವನ್ನು ನಿರ್ಮಿಸುವುದು … ಏಕೆಂದರೆ ಪುಣ್ಯಕ್ಷೇತ್ರವಾದ ಭಾಗಮಂಡಲಕ್ಕೆ … ನೀಡುವುದು ಪೂರ್ಣಗೊಳ್ಳುವುದು ದೇವಟ್‌ಪರಂಬ… ನಮ್ಮ ಹಿರಿಯರಿಗೆ ಒಂದು ಹೂ ಅಥವ ಎಲೆ… ಇಟ್ಟಾಗ ಮಾತ್ರ" ಎಂದು ಹೇಳಿದ್ದಾರೆ. ಹೀಗೆ … ಪರಿವಾರ ಹಿಂದೂ ಸ್ಮಾರಕದ ಪರವಾಗಿ ಇದ್ದರೆ, ಕಾಂ… ಬ್ರಿಜೇಶ್ ಕಾಳಪ್ಪ ಕೊಡವ ಸ್ಮಾರಕದ ಪರವಾಗಿ …

ಸಂಘ ಪರಿವಾರದ ಈ ಯೋಜನೆಯಲ್ಲಿ … ಯಾಕೆ ಸಕ್ರಿಯವಾಗಿ ಭಾಗವಹಿಸಲಿಲ್ಲವೆನ್ನುವುದಕ್ಕೆ … ಇವತ್ತು ಕೊಡಗು ಜಿಲ್ಲೆಯಲ್ಲಿ ಬಿಜೆಪಿ ಮುಖಂಡರೆ… ತಮ್ಮ ತಮ್ಮ ಗುಂಪುಗಳನ್ನು ರಚಿಸಿಕೊಂಡಿರುವುದು. … ಜಿಲ್ಲಾ ಬಿಜೆಪಿಯಲ್ಲಿ ಎಷ್ಟು ಗುಂಪುಗಳು ಇವೆ … ಹೇಳುವುದೇ ಅಸಾಧ್ಯವಾಗಿದೆ.


ಕಾಂಗ್ರೆಸ್ ಪಕ್ಷದ ಸ್ಥಿತಿಯೂ ಇದಕ್ಕಿಂತ ಭಿನ್ನವಾ… ಈ ಯಾವ ಬೆಳವಣಿಗೆಯ ಲಾಭವನ್ನು ಪಡೆ… ಸ್ಥಿತಿಯಲ್ಲಿ ಇಲ್ಲಿನ ಕಾಂಗ್ರೆಸ್ ಇಲ್ಲ. ಟಿಪ್ಪು ಕಾರ್ಯಕ್ರಮ… ವಿರೋಧಿಸಿ ಕಾಂಗ್ರೆಸ್‌ನ ಜಿಲ್ಲಾ ಅಧ್ಯಕ್ಷ ಸ್ಥಾನ… ಕಳೆದುಕೊಂಡ ಬಿ.ಟಿ. ಪ್ರದೀಪ್ ಹಾಗೂ ದೇ… ಪರಂಬುನಲ್ಲಿ ಸ್ಮಾರಕವನ್ನು ನಿರ್ಮಿಸಬೇಕು ಎಂದು ಹೇ… ಬ್ರಿಜೇಶ್ ಕಾಳಪ್ಪನಂತಹವರು ಇರುವುದರಿಂದ, ಕಾಂ… ಕೂಡ ಮುರಿದ ಮನೆಯಾಗಿದೆ. ಪರಿಸ್ಥಿತಿ ಹೀಗಿರು… ಈ ಜಿಲ್ಲೆಗೆ ಅಂಟಿರುವ ಹಲವಾರು ಸಮಸ್ಯೆಗಳಿಗೆ … ಅರಿಯುವವರು ಯಾರು?

■ ಬಿ.ಎನ್. ಮನುಶ…



ಅವೈಜ್ಞಾನಿಕವಾಗಿ ಕಸವನ್ನು ಭೂಮಿಗೆ ಹೂಳುತ್ತಿರುವುದು





ತುಮಕೂರು: ಅಜ್ಜಗೊಂಡನಹಳ್ಳಿಗೆ ತ್ಯಾಜ್ಯ ಎಂಬ ತಲೆನೋವು

ಸಿಲಿಕಾನ್ ಸಿಟಿಯ ಸಕಲಷ್ಟು ತ್ಯಾಜ್ಯವನ್ನು ತನ್ನೊಳಗೆ ತುಂಬಿಕೊಂಡ ಮಂಡೂರಿನ ದುಸ್ಥಿತಿ ಬಹಳ ಜನಕ್ಕೆ ತಿಳಿದಿದೆ. ಈಗ ಅದೇ ದುಸ್ಥಿತಿ ತುಮಕೂರಿನ ಅಜ್ಜಗೊಂಡನಹಳ್ಳಿಯ ಮೇಲೂ ಎರಗಲು ಸಜ್ಜಾಗಿ ಕೂತಿದೆ.

ತುಮಕೂರು ನಗರದ ಹೋಟೆಲ್, ಮನೆ, ಶಾಲಾ-ಕಾಲೇಜು, ಅಂಗಡಿ-ಮುಗ್ಗಟ್ಟುಗಳು, ಆಸ್ಪತ್ರೆ ಇತ್ಯಾದಿಗಳಿಂದ ಪ್ರತಿನಿತ್ಯ **100** ರಿಂದ **110** ಟನ್ ಕಸ ಉತ್ಪತ್ತಿಯಾಗುತ್ತಿದೆ. ವರ್ಷಕ್ಕೆ ಏನಿಲ್ಲವೆಂದರೂ **40** ಸಾವಿರ ಟನ್ ಕಸ ಹೊರಬೀಳುತ್ತಿದೆ. ಆದರೆ ವೈಜ್ಞಾನಿಕವಾಗಿ ಸಂಸ್ಕರಣೆಯಾಗುತ್ತಿರೋದು ಮಾತ್ರ ಶೂನ್ಯ. ಮುಖ್ಯವಾಗಿ ಮನೆಗಳಲ್ಲಿಯೇ ಕಸವನ್ನು ಬೇರ್ಪಡಿಸಿ ನಂತರ ನಗರದಲ್ಲಿ ಬಿದ್ದಿರುವ ಕಸವನ್ನು ತೆಗೆದುಕೊಂಡು ಹೋಗಿ ಘಟಕದಲ್ಲಿ ಸಂಸ್ಕರಿಸಬೇಕು. ಆದರೆ ಅಂತಹ ಯಾವ ಕ್ರಮಕ್ಕೂ ಪಾಲಿಕೆ ಮುಂದಾಗಿಲ್ಲ, ಅಲ್ಲದೇ ತ್ಯಾಜ್ಯವನ್ನು ಭೂಮಿಯ ಒಳಗಡೆ ಮುಚ್ಚುವಂತಿಲ್ಲ, ಆದರೆ ಈ ಘಟಕದಲ್ಲಿ **40** ಅಡಿ ಆಳ, **40** ಅಡಿ ಅಗಲದ ಗುಂಡಿ ತೆಗೆದು ವಿಷಕಾರಿ ಕಸವನ್ನು ಮುಚ್ಚಲಾಗುತ್ತಿದೆ. ಹತ್ತಿರದಲ್ಲೇ ತುಮಕೂರಿನ ಜನರ ಕುಡಿಯುವ ನೀರಿನ ದಾಹ ಇಂಗಿಸುವ ಹೆಬ್ಬಾಳ ಕೆರೆ ಇದೆ. ಮಳೆ ಬಂದಾಗ ಈ ತ್ಯಾಜ್ಯದ ವಿಷ ಕೆರೆಯ ನೀರಿಗೆ ಸೇರುತ್ತಿದ್ದು ಅಪಾಯಕಾರಿ ಅನಾಹುತವೊಂದು ಕಾದು ಕುಳಿತಿದೆ. ಈಗಾಗಲೇ ಇಂತಹ ನೀರನ್ನು ಕುಡಿದು ಕೆಲವು ಸ್ಥಳೀಯ ಜಾನುವಾರುಗಳು ಸತ್ತಿವೆ.


ಇಲ್ಲಿಗೆ ಸರಿಯಾಗಿ ವರ್ಷದ ಹಿಂದೆ ತುಮಕೂರಿನ ವಾತಾವರಣವೇ ಪ್ರಕ್ಷುಬ್ಧಗೊಂಡಿತ್ತು, ಅದಕ್ಕೆ ಕಾರಣವಾದದ್ದು ತುಮಕೂರು ಮಹಾನಗರ ಪಾಲಿಕೆಯ ಯಡವಟ್ಟು ನಿರ್ಧಾರ. ನಗರದ ತ್ಯಾಜ್ಯ ನಿರ್ವಹಣೆ ಕುರಿತು ಕಿಂಚಿತ್ತೂ ಜ್ಞಾನವಿಲ್ಲದ ಜಿಲ್ಲಾಡಳಿತ ತುಮಕೂರು ಪ್ರತಿದಿನ ಹೊರಗೆಡವುತ್ತಿದ್ದ ತ್ಯಾಜ್ಯವನ್ನು ಅಜ್ಜಗೊಂಡನಹಳ್ಳಿ ಬಳಿ ಸುರಿದು ಕೈತೊಳೆದುಕೊಳ್ಳಲು ತಯಾರಾಗಿತ್ತು, ಆದರೆ ಮಂಡೂರಿನ ಜನರ ಪರಿಪಾಟಲು, ಆಡಳಿತವರ್ಗದವರ ಅವೈಜ್ಞಾನಿಕ ಬೇಜವಾಬ್ದಾರಿ ಕಸ ವಿಲೇವಾರಿ ವೈಖರಿ ಕಂಡಿದ್ದ ಸ್ಥಳೀಯರು ತಮಗೂ ಮುಂದೊಂದು ದಿನ ಅಂತದ್ದೇ ಪರಿಸ್ಥಿತಿ ಬರಲಿದೆ ಅನ್ನೋದನ್ನು ಗ್ರಹಿಸಿ ಜಿಲ್ಲಾಡಳಿತದ ವಿರುದ್ಧ ತಿರುಗಿಬಿದ್ದರು. ಅದು ತುಮಕೂರು ಮಟ್ಟಕ್ಕೆ ಬಹುದೊಡ್ಡ ಹೋರಾಟದ ರೂಪವನ್ನೇ ಪಡೆದುಕೊಂಡಿತ್ತು.


ಹಳ್ಳಿ ಜನರ ದಿಟ್ಟ ಹೋರಾಟ


ಬೆಂಗಳೂರಿನ ಅವಳಿ ಸೋದರ ಸಿಟಿಯಂತಿರುವ ತುಮಕೂರು ಕೂಡಾ ಕಸ ಉತ್ಪಾದನೆಯಲ್ಲಿ ಎತ್ತಿದ ಕೈ. ಮಹಾನಗರ ಪಾಲಿಕೆಗೆ ತ್ಯಾಜ್ಯ ವಿಲೇವಾರಿಯೇ ದೊಡ್ಡ ತಲೆನೋವಿನ ಸಂಗತಿ. ಇದಕ್ಕೊಂದು ಪರಿಹಾರ ಕಂಡುಹಿಡಿಯುವ ಸಲುವಾಗಿ ಆಗ ಡಿಸಿಯಾಗಿದ್ದ ಸೋಮಶೇಖರರು ಕಸ ಸುರಿಯಲು ಒಂದು ಪ್ರದೇಶಕ್ಕೆ ಹಲಾಪ್ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದ್ದರು. ಆಗ ಅಧಿಕಾರಿಗಳಿಗೆ ಗೋಚರಿಸಿದ್ದೇ ಈ ಅಜ್ಜಗೊಂಡನಹಳ್ಳಿ ಜಾಗ. ಹಳ್ಳಿಯ ಸುತ್ತಮುತ್ತಲಿನ ಸ್ಥಳ ಒತ್ತುವರಿ ಜಾಗವಾಗಿದ್ದು ಇದಕ್ಕೆ ನಿಮ್ಮ ಹೆಸರುಗಳಲ್ಲೇ ಹಕ್ಕುಪತ್ರ ನೀಡುತ್ತೇವೆ ಅಂತ ಮುಗ್ಧ ಜನರನ್ನು ಯಾಮಾರಿಸಿದ್ದ ಅಧಿಕಾರಿಗಳು ಪತ್ರಗಳಿಗೆ ಹಳ್ಳಿ ಜನರಿಂದ ಸಹಿ ಹಾಕಿಸಿಕೊಂಡಿದ್ದರು. ಜೊತೆಗೆ ಇದು ಸರ್ಕಾರದ ಜಾಗ, ನೀವಿದನ್ನು ಅಕ್ರಮವಾಗಿ ವಶಪಡಿಸಿಕೊಂಡಿದ್ದೀರಿ ಅಂತ ಹೆದರಿಸಿ ಸುಮಾರು 42 ಎಕರೆ ಭೂಮಿಯನ್ನು ರೈತರಿಂದ ವಶಪಡಿಸಿಕೊಂಡಿದ್ದರು. ಜಾಗ ವಶಪಡಿಸಿಕೊಳ್ಳುವಾಗಲೂ ಈ ಜಾಗದಲ್ಲಿ ವಿವಿ ವಿಸ್ತರಣಾ ಕೇಂದ್ರವನ್ನು ತೆರೆಯಲು ಸರ್ಕಾರ ಬಯಸಿದೆ ಅಂತಲೇ ಮತ್ತೊಂದು ಸುಳ್ಳು ಹೋಣೆಸಿದ್ದರು. ಹಾಗಾಗಿ ಜನರು ಸಹ ತಕರಾರು ತೆಗೆದಿರಲಿಲ್ಲ.

ಆದರೆ ಯಾವಾಗ ಆ ಜಾಗವನ್ನು ಘನ ತ್ಯಾಜ್ಯ ವಿಲೇವಾರಿ ಘಟಕವನ್ನಾಗಿ ಮಾಡಲು ತಡೆಗೋಡೆ ಕಟ್ಟಲು ಬಂದರೋ ಆಗಲೇ ಜಿಲ್ಲಾಡಳಿತ ನಡೆಸಿದ್ದ ಮಸಲತ್ತು ಜನರಿಗೆ ಗೊತ್ತಾದದ್ದು. "ಕಸ ತಂದು ಬೇಕಾಬಿಟ್ಟಿ ಸುರಿಯುವುದಾದರೆ ನಾವದಕ್ಕೆ ಒಪ್ಪುವುದೇ ಇಲ್ಲ" ಅಂತ ಅಜ್ಜಗೊಂಡನಹಳ್ಳಿ ಸುತ್ತಮುತ್ತಲಿನ ಕಟ್ಟಿಗೇನಹಳ್ಳಿ, ಅರಳಕಟ್ಟೆ, ಕೋರಾ, ಸಿಂಗ್ರಿಹಳ್ಳಿ, ಚನ್ನೇನಹಳ್ಳಿ, ಹೆಬ್ಬಾಳ ಗ್ರಾಮದ ಜನರು ತೀವ್ರ ವಿರೋಧ ವ್ಯಕ್ತಪಡಿಸಿ ಹೋರಾಟಕ್ಕಿಳಿದರು. ಆಗಲೂ ಜಿಲ್ಲಾಡಳಿತ ಹೋರಾಟಗಾರರನ್ನು ಬಂಧಿಸಿ ತಡೆಗೋಡೆ ನಿರ್ಮಿಸಿತ್ತೆ ವಿನಃ ಅವರ ಸಮಸ್ಯೆಗಳಿಗೆ ಕಿವಿಯಾನಿಸುವ ಸೌಜನ್ಯವನ್ನೇ ತೋರಲಿಲ್ಲ.

ಜನ ಕಾನೂನು ಹೋರಾಟದ ಜೊತೆಗೆ ಬೀದಿ ಹೋರಾಟಕ್ಕೂ ಇಳಿದರು. ಆ ಸಮಯಕ್ಕೆ ಕೊಂಚ ಮೆತ್ತಗಾದಂತಾದ ಜಿಲ್ಲಾಡಳಿತ ತ್ಯಾಜ್ಯ ಘಟಕ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಿತ್ತು. ಅದೇ ಸಮಯಕ್ಕೆ ಇತ್ತ ತುಮಕೂರು ನಗರದಲ್ಲಿ ಕಸ ದಟ್ಟೈಸಿಕೊಂಡು ಜನ ಆಕ್ರೋಶ







ಹೊರಹಾಕಲು ಶುರು ಮಾಡಿದರು. ಇನ್ನೇನು ಕಸ ತೆಗೆಯದ ತನ್ನ ವಿರುದ್ಧ ಲೋಕ ಅದಾಲತ್ ತರಾಟೆಗೆ ತೆಗೆದುಕೊಳ್ಳುತ್ತೆ ಅನ್ನೋ ಸಂದರ್ಭ ಎದುರಾಗುತ್ತಿದ್ದಂತೆಯೇ ಜಿಲ್ಲಾಡಳಿತ ತರಾತುರಿಯಲ್ಲಿ ಅಜ್ಜಗೊಂಡನಹಳ್ಳಿ ಘಟಕ ನಿರ್ಮಾಣದ ಕಾರ್ಯವನ್ನು ಮತ್ತೆ ಶುರು ಮಾಡಿತು.

ಹೋರಾಟಗಾರರಾದ ರವಿಶಂಕರ್, ಮಲ್ಲಿಕಾರ್ಜುನ್ ಮೇಳೆಹಳ್ಳಿ, ಡಮರುಗ ಉಮೇಶ್, ಶೋಭಾಮಣಿ, ನಜೀರ್ ಅಹಮ್ಮದ್, ಚಿದಾನಂದ ಸ್ವಾಮಿ, ಶರತ್ ಕುಮಾರ್ ಮೊದಲಾದವರು ಜನರಲ್ಲಿ ಜಾಗೃತಿ ಮೂಡಿಸಿ ಮತ್ತೊಂದು ಸುತ್ತಿನ ಹೋರಾಟಕ್ಕೆ ಅಣಿಗೊಳಿಸಿದರು. ಸ್ಥಳೀಯ ಗ್ರಾಮ ಪಂಚಾಯ್ತಿ ಕೂಡ ಈ ಹೋರಾಟಕ್ಕೆ ಪೂರಕವಾಗಿ ಸ್ಪಂದಿಸಿ ತ್ಯಾಜ್ಯ ಘಟಕ ಸ್ಥಾಪಿಸಲು ನಿರಾಕ್ಷೇಪಣ (ಎನ್.ಓ.ಸಿ) ಪತ್ರ ನೀಡಲು ನಿರಾಕರಿಸಿತು.

ಆಗಲಾದರೂ ಜಿಲ್ಲಾಡಳಿತ ಎಚ್ಚೆತ್ತುಕೊಂಡು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರೆ ಸಮಸ್ಯೆಗೆ ಒಂದು ಪರಿಹಾರ ಕಂಡುಕೊಳ್ಳಬಹುದಿತ್ತು. ಅದರ ಬದಲು ಜನರ ಮೇಲೆ ಬಲವಂತವಾಗಿ ಕಸ ಹೇರಲು ಹವಣಿಸುತ್ತಲೇ ಇತ್ತು. ಒಮ್ಮೆ ಘಟಕ ನಿರ್ಮಾಣ ವೀಕ್ಷಣೆಗೆ ಬಂದಿದ್ದ ಸ್ಥಳೀಯ ಶಾಸಕ ರಫೀಕ್ ಅಹಮ್ಮದ್ ಮತ್ತು ಜಿಲ್ಲಾಧಿಕಾರಿ ಸತ್ಯಮೂರ್ತಿ ಯವರ ವಾಹನಗಳನ್ನು ಹಳ್ಳಿ ಜನ ಅರ್ಧದಾರಿ ಯಲ್ಲೇ ತಡೆದು ಮೂರು ಕಿಲೋಮೀಟರ್ ಅವರೆಲ್ಲ ಕಾಲ್ನಡಿಗೆಯಲ್ಲಿ ನಡೆಯುವಂತೆ ಮಾಡಿದರೂ ಜಿಲ್ಲಾಡಳಿತ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಲೇ ಇಲ್ಲ.

ಕಸದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಅಷ್ಟು ಕಷ್ಟದ ಕೆಲಸವೇನೂ ಆಗಿರಲಿಲ್ಲ. ಯಾಕೆಂದರೆ ಪೂನಾದ ಖಾಸಗಿ ಕಂಪನಿಯೊಂದು ತಾನೇ ಮುಂದೆಬಂದು ತುಮಕೂರಿನ ಕಸವನ್ನೆಲ್ಲಾ ತನಗೆ ನೀಡಿದರೆ ಅದರಿಂದ ಇಟ್ಟಿಗೆ ವೊದಲಾದ ವಸ್ತುಗಳ ರೀಸೈಕಲ್ ಮಾಡಿಕೊಳ್ಳುವುದಾಗಿ ಹೇಳಿತ್ತು. ಅದೂ ಪುಕ್ಕಟೆಯಲ್ಲ ಟನ್‌ಗೆ ಇಂತಿಷ್ಟು ಹಣ ನೀಡುವುದಾಗಿಯೂ ಅದು ಹೇಳಿತ್ತು. ಆದರೆ ರಾಜಕಾರಣಿಗಳು ಮತ್ತು 'ಕಸ ಮಾಫಿಯಾ' ಅದಕ್ಕೂ ಅವಕಾಶ ಕೊಡಲಿಲ್ಲ. ಅದಕ್ಕೊಂದು ಕಾರಣವಿದೆ. ಸದ್ಯ ದಿನನಿತ್ಯ ಉತ್ಪತ್ತಿಯಾಗುವ ಸಿಟಿಯ ತ್ಯಾಜ್ಯವನ್ನು ಹೊರಗೆ ಹೊತ್ತೊಯ್ಯಲೆಂದು ಕಸದ ವಾಹನಗಳಿಗೆ ಗುತ್ತಿಗೆ ನೀಡಲಾಗುತ್ತಿದೆ. ಈ ಸಾಗಾಣಿಕ ವೆಚ್ಚವೇ ತಿಂಗಳಿಗೆ ಹಲವು ಲಕ್ಷಗಳನ್ನು ಮೀರುತ್ತೆ. ಇದರಲ್ಲಿ ಅಧಿಕಾರಿಗಳಿಗೆ, ಕಾರ್ಪೊರೇಟ್ ಮಟ್ಟದ ರಾಜಕಾರಣಿಗಳಿಗೆ ಭರ್ಜರಿ ಕಮೀಷನ್ ಸಂದಾಯವಾಗುತ್ತೆ. ಒಂದೊಮ್ಮೆ ಪೂನಾ ಕಂಪನಿಗೆ ಕಸ ಮಾರಿಕೊಂಡರೆ ಈ ಲೇವಾದೇವಿಯೇ ಬಂದ್ ಆಗಿಬಿಡುತ್ತೆ. ಆಗ ಕಮೀಷನ್‌ಗೆ ಕತ್ತರಿ ಗ್ಯಾರಂಟಿ ಅನ್ನೋ ಕಾರಣಕ್ಕೆ ಅದಕ್ಕೂ ನಖ್ರೋ ಅಂದುಬಿಟ್ಟರು.



ಗೋಬ್ಯಾಕ್ ಚಳವಳಿಯ ವೇಳೆ ಪರಿಸರ ವಿಜ್ಞಾನಿ ಡಾ.ಡಿ.ಜೆ.ಮೋಹನ್ ಮಾತನಾಡುತ್ತಿರುವುದು

ಕಂಪನಿಯೂ ಸುಮ್ಮನಾಯಿತು. ಆದರೆ ಅಜ್ಜಗೊಂಡನಹಳ್ಳಿ ಜನರ ಬವಣೆ ಮಾತ್ರ ಕರಗಲಿಲ್ಲ.

ಆಗ ಹಾಗೆ, ಈಗ ಹೀಗೆ

ಅಜ್ಜಗೊಂಡನಹಳ್ಳಿ ಜನರ ಪಾಲಿಗೆ ಜನಪ್ರತಿನಿಧಿಗಳೇ ವಿಲನ್ನುಗಳು. ಜಿಲ್ಲಾ ಉಸ್ತುವಾರಿ ಮಂತ್ರಿ ಟಿ.ಬಿ.ಜಯಚಂದ್ರರಿಗಂತೂ ಈ ಜನರ ಮೇಲೆ ಅದೇನು ಜಿದ್ದೋ ಏನೊ. ಜನರ ಹೋರಾಟಕ್ಕೆಲ್ಲ ಜಯಚಂದ್ರ ತಣ್ಣೀರು ಸುರಿಯುತ್ತಲೇ ಬಂದಿದ್ದಾರೆ. ಆರಂಭದಲ್ಲಿ ತ್ಯಾಜ್ಯ ಘಟಕ ಸ್ಥಾಪನೆಯ ವಿರುದ್ಧ ಜನ ಅಜ್ಜಗೊಂಡನಹಳ್ಳಿ ಉದ್ದೇಶಿತ ಘಟಕದ ಎದುರು ಧರಣಿ ಕೂತಿದ್ದಾಗ ಜಿಲ್ಲೆಯ ಮತ್ತೊಬ್ಬ ರಾಜಕಾರಣಿ ಡಾ. ಜಿ. ಪರಮೇಶ್ವರ್ ಕೂಡಾ ಪ್ರತಿಭಟನಾಕಾರರ ಸಾಲಿನಲ್ಲಿ ಕೂತು ಜನರ ಪರ ನಿಂತಿದ್ದರು. ಆಗಿನ್ನೂ ಪರಮೇಶ್ವರ್ ಗೃಹಮಂತ್ರಿಯಾಗಿರಲಿಲ್ಲ, ಅವತ್ತು ಜನರೊಟ್ಟಿಗೆ ಪ್ರತಿಭಟನೆ ನಡೆಸಿದ್ದ ಪರಮೇಶ್ವರ್ ಗೃಹಮಂತ್ರಿಯಾದದ್ದೇ ತಡ ಉಲ್ಟಾ ಹೊಡೆದರು. ಘಟಕದ ವಿರುದ್ಧ ಮನವಿ ಸಲ್ಲಿಸಿದರೆ ಜಯಚಂದ್ರರತ್ತಲೇ ಬೊಟ್ಟು ಮಾಡಿ ಸುಮ್ಮನಾಗುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಂತೂ ಬಲಪ್ರಯೋಗದಿಂದಲಾದರೂ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಿಯೇ ತಿರುತ್ತೇವೆ ಅನ್ನೋ ಧಾಟಿಯಲ್ಲಿ ವರ್ತಿಸುತ್ತಿರುವುದರಿಂದ ಬೀದಿಗಿಳಿದು ಪ್ರತಿಭಟಿಸದೆ ಬೇರೆ ದಾರಿಯೇ ಇಲ್ಲದಂತಾಗಿದೆ.

ಗೋ ಬ್ಯಾಕ್ ಚಳವಳಿ

ಈ ನಡುವೆ ಹಿರಿಯ ನಾಗರಿಕರ ಒಕ್ಕೂಟ ನಗರದಲ್ಲಿ ಕಸದ ಸಮಸ್ಯೆ ಜಾಸ್ತಿಯಾಗಿದೆ. ಇದರ ಬಗ್ಗೆ ಸರಿಯಾದ ಕ್ರಮ ಜರುಗಿಸಬೇಕೆಂದು ಕಾನೂನು ಸೇವಾ ಪ್ರಾಧಿಕಾರದ ಮೊರೆಹೋದರು. ಆಗ ಪ್ರಾಧಿಕಾರದ ನ್ಯಾಯಾಧೀಶರಾದ ಸುಧೀಂದ್ರ ರಾವ್ ಕಸದ ಸಮಸ್ಯೆಯನ್ನು ನಿವಾರಿಸಲು ಬಿಗಿಪಟ್ಟು ಹಿಡಿದು ಅಜ್ಜಗೊಂಡನಹಳ್ಳಿಯಲ್ಲಿ ತಡೆಗೋಡೆ ನಿರ್ಮಿಸಲಾದ ಸ್ಥಳದಲ್ಲಿ ಕಸವಿಲೇವಾರಿ ಕ್ರಮಕೈಗೊಳ್ಳುವಂತೆ ತೀರ್ಪಿತ್ತಿದ್ದರು. ಆ ತೀರ್ಪಿನ ಬಲದಲ್ಲಿ ಜಿಲ್ಲಾಡಳಿತ ಪೊಲೀಸರ ಸರ್ಪಗಾವಲಿನಲ್ಲಿ ಘನತ್ಯಾಜ್ಯ ವಿಲೇವಾರಿಗೆ ಮುಂದಾಯಿತು. ಆಗಲೂ ಹೋರಾಟಗಾರರು ಕಸ ತೆಗೆದುಕೊಂಡು ಹೋಗುತ್ತಿದ್ದ ವಾಹನಗಳನ್ನು ತಡೆದು ಛೀಮಾರಿ ಹಾಕಿದ್ದಲ್ಲದೇ "ಗೋ ಬ್ಯಾಕ್ ಚಳವಳಿ" ಪ್ರಾರಂಭಿಸಿ ಘಟಕ ನಿರ್ಮಿಸುವ ತೀರ್ಮಾನದಿಂದ ಹಿಂದೆ ಸರಿಯುವವರೆಗೆ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾದರು. ಆಗ **80** ಜನ ಹೋರಾಟಗಾರರನ್ನು ಪೊಲೀಸರು ಬಂಧಿಸಿದರು. ಆದರೂ ಧೃತಿಗೆಡದ ಜನ ಸುಮಾರು ದಿನಗಳ ಕಾಲ ಉಪವಾಸ ಸತ್ಯಗ್ರಹ ಮಾಡಿ ಸಾಕಷ್ಟು ಮಂದಿ ಅಸ್ವಸ್ಥಗೊಂಡರು.

ಅಷ್ಟೊತ್ತಿಗಾಗಲೇ ಅಜ್ಜಗೊಂಡನಹಳ್ಳಿ ಹೋರಾಟ ರಾಜ್ಯದ ಗಮನ ಸೆಳೆಯುವ ಹಂತಕ್ಕೆ ಬಂದಿತ್ತು. ಮಂಡೂರು ಹೋರಾಟದ ಮುಂಚೂಣಿ ವಹಿಸಿಕೊಂಡು ಅಲ್ಲಿನ ಜನರಿಗೆ ನ್ಯಾಯ ದೊರಕಿಸಿಕೊಟ್ಟಿದ್ದ ಹಿರಿಯ ಗಾಂಧಿವಾದಿ ಎಚ್.ಎಸ್.ದೊರೆಸ್ವಾಮಿ ಪ್ರತಿಭಟನಾ ಸ್ಥಳಕ್ಕೆ ಬಂದು ಹೋರಾಟಗಾರರಿಗೆ ಬೆಂಬಲವಾಗಿ ನಿಂತರು. ಅವರನ್ನು ಕೂಡಿಕೊಂಡ ಪರಿಸರ ವಿಜ್ಞಾನಿ ಡಾ.ಡಿ.ಜೆ.ಮೋಹನ್ ಅವರು "ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೂ ಮುನ್ನ ಪರಿಸರ ಆಘಾತ ಅಧ್ಯಯನ ವರದಿಯನ್ನು ತಯಾರಿಸಬೇಕಾಗುತ್ತದೆ. ಆ ರೀತಿಯ ವರದಿಯನ್ನು ಮಹಾನಗರ ಪಾಲಿಕೆಯಾಗಲಿ, ಜಿಲ್ಲಾಡಳಿವಾಗಲಿ ಸಿದ್ಧತೆ ಮಾಡಿಕೊಂಡಿದೆಯಾ?" ಅಂತ ಜಿಲ್ಲಾಡಳಿತಕ್ಕೆ ಸವಾಲನ್ನೂ ಎಸೆದಿದ್ದರು. ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿ ಘಟಕ ನಿರ್ಮಿಸುವ ಮುನ್ನ ಸುತ್ತಮುತ್ತಲ ಹಳ್ಳಿ ಜನರ ಆರೋಗ್ಯ ಕಾಪಾಡಲು ಸುಸಜ್ಜಿತ ಆಸ್ಪತ್ರೆ ನಿರ್ಮಿಸಬೇಕು. ಮೂರು ತಿಂಗಳಿಗೊಮ್ಮೆ


▶▶ 12


ಮಂತ್ರವಾದಿ ನಿರಂಜನ ಭಟ್ಟ

ಹಲ್ಕಟ್ ಮಂತ್ರವಾದಿಯ ಹೋಮಕ್ಕೆ ಹವಿಸ್ಸಾದ ಉದ್ಯಮಿ ಭಾಸ್ಕರ್ ಶೆಟ್ಟಿ!

ಹಾದಿ ತಪ್ಪಿದ ಹೆಂಡತಿ ಮಗನಿಂದಲೇ ಮರ್ಡರ್


ಭಾಸ್ಕರ್ ಶೆಟ್ಟಿ ಹೆಂಡತಿ ರಾಜೇಶ್ವರಿ


ಮಗ ನವನೀತ್


ಭಾಸ್ಕರ್ ಶೆಟ್ಟಿ

ಮುನ್ನೂರು ಕೋಟಿಗಿಂತಲೂ ಹೆಚ್ಚು ಮೌಲ್ಯದ ಸಿರಿ-ಸಂಪತ್ತಿನ ಸರದಾರ. ಸೌದಿ-ದುಬೈಗಳಲ್ಲಿ ಬರೋಬ್ಬರಿ ಆರು ಸೂಪರ್ ಮಾರ್ಕೆಟ್; ಹುಟ್ಟೂರು ಉಡುಪಿಯಲ್ಲಿ ಎರಡೆರಡು ಬಹುಮಹಡಿಯ ವಾಣಿಜ್ಯ ಕಟ್ಟಡ. ಇಂದ್ರಾಳಿಯಲ್ಲಿ ಸ್ವಂತಕ್ಕೊಂದು ವೈಭವೋಪೇತ ಬಂಗಲೆ. ಓಡಾಡಲು ಸಾಲು-ಸಾಲು ಐಷಾರಾಮಿ ವಾಹನಗಳು. ಮುಂಬೈನಲ್ಲೂ ಅಪಾರ ಚರ-ಸ್ಥಿರ ಆಸ್ತಿ. ಅಲ್ಲೊಬ್ಬಳು ಉಪ ಪತ್ನಿ. ಉಡುಪಿಯಲ್ಲಿ ಅಗ್ನಿಸಾಕ್ಷಿಯಾಗಿ ಕೈಹಿಡಿದ ಮಡದಿ; ತನ್ನದೇ ರಕ್ತ-ಮಾಂಸ ಹಂಚಿ ಹುಟ್ಟಿಸಿ ಎದೆಯೆತ್ತರಕ್ಕೆ ಬೆಳೆಸಿದ್ದ ಮುದ್ದಿನ ಮಗ.

ಇದು ಉಡುಪಿಯಲ್ಲಿ ಜುಲೈ 28ರಂದು ಹೆಂಡತಿ ಮತ್ತು ಮಗನಿಂದ ಬರ್ಬರವಾಗಿ ಕಗ್ಗೊಲೆಯಾಗಿ ನಂದಳಿಕೆ (ಕಾರ್ಕಳ)ಯ ಢೋಂಗಿ ಮಂತ್ರವಾದಿಯ ಯಜ್ಞಕುಂಡದಲ್ಲಿ ಬೂದಿಯಾದ ಭಾಸ್ಕರ್ ಶೆಟ್ಟಿ ಎಂಬ ಎನ್‌ಆರ್‌ಐ ಉದ್ಯಮಿಯ ಹೈ-ಪ್ರೊಫೈಲ್!! ಸಿರಿಯ ಗರ ಬಡಿದಂಥ ಭಾಸ್ಕರ್ ಶೆಟ್ಟಿಯ ಸಂಸಾರವನ್ನು ಅದೇ ಸುಖ-ಸಂಪತ್ತು ಆಪೋಷನ ಪಡೆದ ರಕ್ತಸಿಕ್ತ ಪುರಾಣ ಭೀಭತ್ಸವಾಗಿದೆ. ಕೋಟಿ-ಕೋಟಿಗಳ ಮೇಲೆ ಮಲಗೇಳುತ್ತಿದ್ದ ಶೆಟ್ಟಿ ಸಂಸಾರ ದಾರುಣ ಅಂತ್ಯ ಕಂಡಿರುವುದು ಇಡೀ ಕರಾವಳಿಯನ್ನು ಬೆಚ್ಚಿಬೀಳಿಸಿದೆ. ಶೆಟ್ಟಿ ಸತ್ತೇ ಹೋಗಿದ್ದಾನೆ; ಆತನ ಬಲಿ ಪಡೆದ ಹರಾಮಿ ಹೆಂಡತಿ-ಮಗ ಜೈಲು ಪಾಲಾಗಿ ಇದ್ದೂ ಸತ್ತಂತಾಗಿದ್ದಾರೆ....

ಭಾಸ್ಕರ್ ಬದುಕಿನ ಗ್ರಾಫು!

ಭಾಸ್ಕರ್ ಶೆಟ್ಟಿಯ ಮೂಲ ಉಡುಪಿ ಬಳಿಯ ಉದ್ಯಾವರ ಎಂಬ ಪುಟ್ಟ ಹಳ್ಳಿ. ಮೂರು ದಶಕದ ಹಿಂದೆ ಹೊಟ್ಟೆಪಾಡಿಗೆ ಉದ್ಯೋಗ ಅರಸುತ್ತ ಸೌದಿ ಅರೇಬಿಯಾಕ್ಕೆ ಹೋಗಿದ್ದ ಈ ಬಂಟರ ಪೋರ ಕಣ್ಣುಕುಕ್ಕುವ ಉದ್ಯಮಿಯಾಗಿ ರೂಪುಗೊಂಡ ಬಗೆಯೇ ಒಂದು ರೋಚಕ ಕತೆ. ಸತತ ಪರಿಶ್ರಮ-ಛಲ-ವ್ಯಾವಹಾರಿಕ ಜಾಣ್ಮೆಯಿಂದ ಎತ್ತರೆತ್ತರಕ್ಕೆ ಬೆಳೆದ ಭಾಸ್ಕರ್ ಶೆಟ್ಟಿ ಸಾಯುವಾಗ ಸಾವಿರಾರು ಕೋಟಿಯ ಬಿಸ್ನೆಸ್ ಸಾಮ್ರಾಜ್ಯ ಸ್ಥಾಪಿಸಿದ್ದ; ಸೌದಿ ಮತ್ತು ದುಬೈಗಳಲ್ಲಿ ಜನರಿಂದ ಗಿಜಿಗುಡುವ ಆರು ಸೂಪರ್ ಮಾರ್ಕೆಟ್‌ಗಳನ್ನು ಕಟ್ಟಿದ್ದಾನೆಂದರೆ ಶೆಟ್ಟಿಯ ವ್ಯಾವಹಾರಿಕ ಗ್ರಾಫು ಹೇಗಿರಬಹುದೆಂಬ ಸಣ್ಣದೊಂದು ಊಹೆ ಯಾರಿಗಾದರೂ ಸಾಧ್ಯವಾಗುವಂಥದ್ದೇ!

ತವರೂರು ಉಡುಪಿಗೂ ಆತನ ಉದ್ಯಮ ಸಾಮ್ರಾಜ್ಯದ ವಿಸ್ತರಣೆ ಆಗಿತ್ತು. ಐದು ಅಂತಸ್ತಿನ ಪ್ರತಿಷ್ಠಿತ ದುರ್ಗಾ ಇಂಟರ್‌ನ್ಯಾಷನಲ್ ಹೊಟೇಲ್ ಅಂಡ್ ಲಾಡ್ಜ್‌ನ ಸಾಹುಕಾರ ಈ ಭಾಸ್ಕರ್ ಶೆಟ್ಟಿ. ಮಸೀದಿ ರಸ್ತೆಯಲ್ಲಿ ಮೂರಂತಸ್ತಿನ ಶಂಕರ್ ಬಿಲ್ಡಿಂಗ್ ಶೆಟ್ಟಿ ಕಟ್ಟಿ ನಿಲ್ಲಿಸಿದ್ದ. ಇಂದ್ರಾಳಿಯಲ್ಲಿರುವ ಸ್ವಂತದ ಬಂಗಲೆಯೊಂದೇ ಸಾಕು, ಶೆಟ್ಟಿಯು ಉದ್ಯಮಲೋಕದ ಪರಿಚಯಕ್ಕೆ. ಅಂಥ ಅಪರೂಪದ ಅರಮನೆಯದು. ಆತನ ಹೆಂಡತಿ-ಮಗ ತರಹೇವಾರಿ ಆಧುನಿಕ ವಾಹನ ದಿನಕ್ಕೊಂದರಂತೆ ಬಳಸುತ್ತಿದ್ದುದೇ ಉಡುಪಿಯಲ್ಲಿ ಆಗಾಗ ಟಾಕ್ ಆಫ್ ದಿ ಟೌನ್ ಆಗುತ್ತಿತ್ತು!

ಭಾಸ್ಕರ್ ಶೆಟ್ಟಿ ತನ್ನ ದೊಡ್ಡಸ್ತಿಕೆ ತೋರಿಸುವ ಸದ್ದು-ಗದ್ದಲಕ್ಕೆ ಹೋಗುವ ಪೈಕಿಯೇನಾಗಿರಲಿಲ್ಲ. ವರ್ಷಕ್ಕೆ ನಾಲ್ಕೈದು ಬಾರಿ ಊರಿಗೆ ಬರುತ್ತಿದ್ದ ಆತ ಸಂಬಂಧಿಕರು-ಗುರುತು-ಪರಿಚಯದವರೊಂದಿಗೆ ಹಮ್ಮು-ಬಿಮ್ಮಿಲ್ಲದೆ ಬೆರೆಯುತ್ತಿದ್ದ. ಉಡುಪಿಗಿಂತ ದೊಡ್ಡ ಉದ್ಯಮ ಸೌದಿಯಲ್ಲಿತ್ತಾದ್ದರಿಂದ ಅಲ್ಲಾತ ಹೆಚ್ಚುತೊಡಗಿಸಿಕೊಳ್ಳುತ್ತಿದ್ದ. ಉಡುಪಿಯ ವ್ಯವಹಾರ ನಂಬಿಗಸ್ಥ ಸಂಬಂಧಿಯೊಬ್ಬನಿಗೆ ವಹಿಸಿದ್ದ ಶೆಟ್ಟಿ ಹಣಕಾಸು ಮತ್ತು ಚೆಕ್ ಹಕ್ಕುಗಳನ್ನು ಹೆಂಡತಿ ರಾಜೇಶ್ವರಿಗೇ ಕೊಟ್ಟಿದ್ದ. ಹಾಗಂತ ಆತನಿಗೆ ಹೆಂಡತಿ ಮತ್ತು ಮಗನ ಮೇಲೆ ನಿಯಂತ್ರಣವೇನೂ ಇರಲಿಲ್ಲ. ಇದೇ ಆತನಿಗೆ ಮುಳುವಾಯ್ತೆಂದು ಶೆಟ್ಟಿಯ ಹಳಿ ತಪ್ಪಿದ ಬದುಕಿನ ಬಂಡಿ ಕಂಡವರು ಈಗ ಉದ್ಗರಿಸುತ್ತಾರೆ!

ಒಡೆದ ಸಂಸಾರ

ಎರಡೂವರೆ ದಶಕದ ಹಿಂದೆ ಸೌದಿಯಲ್ಲಿದ್ದ ಭಾಸ್ಕರ್ ಶೆಟ್ಟಿ ಆಗಿನ್ನೂ ದೊಡ್ಡ ಉದ್ಯಮಪತಿಯೇನಾಗಿರಲಿಲ್ಲ. ಆದರೆ ಸಾಕಷ್ಟು ಸಂಪಾದನೆ ಮಾಡಿದ್ದರು. ಆಗ ಆತನಿಗೆ ಕಂಕಣ ಭಾಗ್ಯ ಒದಗಿಬಂತು. ಉದ್ಯಾವರದ ಹತ್ತಿರದ ಕಟಪಾಡಿಯ ಸರಕಾರಿಗುಡ್ಡೆ ಪಡುಬಿದ್ರೆ ಮನೆ ಖಾನ್‌ದಾನ್‌ನ ರಾಜೇಶ್ವರಿ ಎಂಬ ಚೆಂದುಳ್ಳಿ ಚೆಲುವೆಯನ್ನು ಮದುವೆಯಾಗಲು ಭಾಸ್ಕರ್ ಶೆಟ್ಟಿ ನಿರ್ಧರಿಸಿದರು. ಈ ರಾಜೇಶ್ವರಿ ಒಂಥರಾ 'ಪುಂಡಿ'ಯಂತೆ ಬೆಳೆದ ಹುಡುಗಿ. ಕಾಲೇಜಿನ ದಿನಗಳಲ್ಲೇ ಖುಲ್ಲಮ್ ಖುಲ್ಲಾ ಬದುಕು ಆಕೆಯದಾಗಿತ್ತು. ಈ ದಾಂಪತ್ಯಕ್ಕೆ 'ನವನೀತ'ನೆಂಬ ಮಗನೂ ಹುಟ್ಟಿದ.

ಸಂಸಾರ ಚೆಂದವಾಗೇ ನಡೆಯುತ್ತಿತ್ತು. ಭಾಸ್ಕರ್ ಶೆಟ್ಟಿಯ ಉದ್ಯಮ ಬಲವೂ ಒಂದೇಸಮನೆ ಹೆಚ್ಚಾಗುತ್ತಲೇ ಹೋಗುತ್ತಿತ್ತು. ಅವಿಭಜಿತ ದಕ್ಷಿಣ ಕನ್ನಡದ ಬಲಾಢ್ಯ ಎನ್‌ಆರ್‌ಐಗಳಲ್ಲೇ ಭಾಸ್ಕರ್ ಹೆಚ್ಚೆಚ್ಚು ತೊಡಗಿದ. ಉಡುಪಿಯಲ್ಲೂ ಆತನ ಉದ್ಯಮ ಶುರು ಹಚ್ಚಿಕೊಂಡ. ಕೋಟಿ-ಕೋಟಿ ರೂ. ತೊಡಗಿಸಿದ. ಬಹುಮಹಡಿ ಕಟ್ಟಡ, ಹೊಟೇಲು ವ್ಯವಹಾರ ಮಾಡಿದ. ಇದಕ್ಕೆಲ್ಲ ತನ್ನ ಹೆಂಡತಿ ರಾಜೇಶ್ವರಿಯನ್ನು 'ರಾಣಿ'ಯಾಗಿಸಿ ತಾನು ಸೌದಿ ದುಬೈ ವ್ಯವಹಾರದಲ್ಲಿ ತಲ್ಲೀನನಾದ.

ಸವತಿಯ ನೆರಳು

ರಾಜೇಶ್ವರಿ ಮತ್ತು ಮಗ ನವನೀತ್‌ಗೆ ಹಣ-ಸುಖ-ಸಂಪತ್ತಿನ ನಶೆ ಏರಿಬಿಟ್ಟಿತು. ಭಾಸ್ಕರ್ ಶೆಟ್ಟಿ ಕೊಲ್ಲಿಯಿಂದ ಕಳಿಸುತ್ತಿದ್ದ ಹಣದ ಮದದಲ್ಲಿ ತಾಯಿ-ಮಗ ದಾರಿ ತಪ್ಪಿದರು. ನವನೀತ್ ಪೋಲಿ ಪಟಾಲಮ್ ಕಟ್ಟಿಕೊಂಡು ಅಡ್ಡೆ ಹಾಕಿದರೆ ರಾಜೇಶ್ವರಿ ಪರಸಂಗಕ್ಕೆ ಬಿದ್ದಳು. ದೂರದ ಕೊಲ್ಲಿಯಲ್ಲಿರುತ್ತಿದ್ದ ಭಾಸ್ಕರ್ ಶೆಟ್ಟಿಗೆ ಹತ್ತಿರದವರು ಹೆಂಡತಿ-ಮಗನ 'ನಡತೆ' ಬಗ್ಗೆ ಹೇಳುತ್ತಿದ್ದರಾದರೂ ಆತ ನಿಯಂತ್ರಿಸುವ ಸ್ಥಿತಿಯಲ್ಲಿರಲಿಲ್ಲ. ಬರಬರುತ್ತ ತಾಯಿ-ಮಗ ಭಾಸ್ಕರ್‌ನನ್ನು ಕೇರೇ ಮಾಡದಷ್ಟು ಉದ್ಧಟರಾಗಿ ಹೋದರು. ಅನೈತಿಕತೆ ಬಿಟ್ಟು ಸರಿದಾರಿಗೆ ಬರುವಂತೆ ಹೇಳಿದರೆ "ನೀನೇನು ಸಂಭಾವಿತನಾ...? ಮುಂಬೈನಲ್ಲಿ ನಿಂಗೊಂದು ಕೂಡಿಕೆ ಇಲ್ವಾ...?" ಎಂಬ ಎದುರುತ್ತರ ಭಾಸ್ಕರ್‌ನ ಮಾತಿಗೆ ರಾಚುತಿತ್ತು!!

ಭಾಸ್ಕರ್ ಶೆಟ್ಟಿಯ ಬದುಕಿನ ರೀತಿ-ನೀತಿ ಹತ್ತಿರದಿಂದ ಬಲ್ಲವರ ಪ್ರಕಾರ ಆತನಿಗೆ ಮುಂಬೈನಲ್ಲೊಂದು ಸಂಸಾರವಿದೆ. ಆ ಹೆಂಗಸಿಗೆ ಭಾಸ್ಕರ್ ಒಂದು ಸಂತಾನವನ್ನೂ ಕರುಣಿಸಿದ್ದಾನೆ. ಇದು ರಾಜೇಶ್ವರಿಗೆ ಗೊತ್ತಾಗಿದೆ. ಮೊದಲೇ ಚಪಲ-ಚಂಚಲತೆಯ ಸ್ವಭಾವದ ರಾಜೇಶ್ವರಿ ಹೊಸಿಲಾಚೆ ಸುಖ ಅರಸುವುದಕ್ಕೆ ಬಿದ್ದಿದ್ದಾಳೆ. ಮೋಜು-ಮಸ್ತಿ ಜೋರಾಗಿದೆ. ಇದಕ್ಕೆ ಸಮಾನಾಂತರವಾಗಿ ಮಗ ನವನೀತನೂ ಹುಡುಗಿಯ ಖಯಾಲಿಗೆ ಬಿದ್ದಿದ್ದಾನೆ. ಅಮ್ಮನ ದಾರಿಯಲ್ಲೇ ಮಗನೂ ನಡೆದಿದ್ದಾನೆ.

ಹಣ ಮದದಲ್ಲಿ ಹುಡುಗಿಯ ಹಿಂದೆ ಬೀಳ ಹತ್ತಿದ ನವನೀತನಿಗೆ ವಿದ್ಯೆ ತಲೆಗೆ ಹತ್ತಲಿಲ್ಲ. ಹಣ ಹರಿಸಿಯೇ ಮಂಚಿಕಲ್‌ನ ಸೋದೆ ಮಠದವರ ಮಧ್ವ ಇಂಜಿನಿಯರಿಂಗ್ ಸ್ಕೂಲ್‌ನಲ್ಲಿ ಸೀಟು ಖರೀದಿಸಿದ್ದ ನವನೀತ್ ಪುಂಡಾಟಗಳಲ್ಲೇ ಕಾಲ ಕಳೆದ. ದುಬಾರಿ ಕಾರಲ್ಲಿ ಗೆಳೆಯ-ಗೆಳತಿಯ ತುಂಬಿಕೊಂಡು 'ಸ್ವರ್ಗ' ಕಂಡ. ಕ್ಲಾಸಿಗೆ ಚಕ್ಕರ್ ಹೊಡೆದು ಅಸಭ್ಯವಾಗಿ ಕಾಲೇಜಲ್ಲಿ ಕಾಲ ಹಾಕುತ್ತಿದ್ದ ನವನೀತ್‌ನಿಗೆ ಮಾಸ್ತರ್‌ಗಳು ಬುದ್ಧಿ ಹೇಳೋದೂ ಅಪಾಯಕಾರಿಯೇ ಆಗಿತ್ತು.

ಭಂಡಾಟ ಬಿಟ್ಟು ಸರಿದಾರಿಗೆ ಬಾ ಎಂದು ಹೇಳಿದ್ದ ಲೆಕ್ಚರ್‌ಗೆ ನವನೀತ್ ಹಿಂದೆ-ಮುಂದೆ ನೋಡದೆ ಬಾರಿಸಿಯೇ ಬಿಟ್ಟಿದ್ದ. ಇದಕ್ಕೆ ಪ್ರತಿಫಲವಾಗಿ ಕಾಲೇಜಿಂದ 'ಡಿಬಾರ್' ಆಗಿದ್ದ. ಅಪ್ಪನ ಹಣದಲ್ಲಿ ಈಚೆಗಷ್ಟೇ ಒಂದು 'ಜಿಮ್' ಶುರು ಹಚ್ಚಿಕೊಂಡಿದ್ದ ನವನೀತ್‌ಗೆ ಅಪ್ಪನಿಗಿಂತಲೂ ಹೆಚ್ಚಿನ ಗೌರವ-ಆದರ ನಂದಳಿಕೆಯ ಕಳ್ಳ ಜ್ಯೋತಿಷಿ ನಿರಂಜನ್ ಭಟ್ ಮೇಲಿತ್ತು! ನವನೀತನ ಅಮ್ಮನ 'ಅತ್ಯಾಪ್ತ ಸಖ' ನಿರಂಜನ ಭಟ್ಟನೇ ಆತನ ಜಿಮ್‌ನ ಪ್ರಾರಂಭೋತ್ಸವದಲ್ಲಿ ತಂದೆ ಸ್ಥಾನದಲ್ಲಿ ನಿಂತು ಕೆಲಸ-ಕಾರ್ಯ ಮಾಡಿದ್ದ! ಇದು ಭಾಸ್ಕರ್ ಶೆಟ್ಟಿ ಬಂಧು-ಮಿತ್ರರಲ್ಲಿ ಅನೇಕಾನೇಕ ಜಿಜ್ಞಾಸೆಗೆ ಕುಹಕಕ್ಕೆ ಕಾರಣವಾಗಿತ್ತು.

ಮಂತ್ರವಾದಿ ಪ್ರವೇಶ

ರಾಜೇಶ್ವರಿ ಮತ್ತು ನವನೀತ್ ಊರಿಗೆ ಬಂದಾಗೆಲ್ಲ ಭಾಸ್ಕರ್ ಶೆಟ್ಟಿ ಜತೆ ಜಗಳ ಕಾಯುತ್ತಿದ್ದರು. ಹಣಕಾಸಿನ ವ್ಯವಹಾರ-ಅಕ್ರಮ ಸಂಬಂಧದ ಬಗ್ಗೆ ಘನ ಘೋರ ಕಚ್ಚಾಟಗಳೇ ಇಂದ್ರಾಳಿಯ ಬಂಗಲೆಯಲ್ಲಿ ನಡೆಯುತ್ತಿತ್ತು. ಮೂವರಿಗೂ 'ಪರಸಂಗ' ಇದ್ದದ್ದೇ ಕಾದಾಟಕ್ಕೆ ನೆಪವಾಗುತ್ತಿತ್ತು! ಕಳೆದ ಒಂದು ವರ್ಷದಿಂದ ಹೆಂಡತಿ ರಾಜೇಶ್ವರಿ ನಂದಳಿಕೆಯ ಮಂತ್ರವಾದಿ ನಿರಂಜನ ಭಟ್ಟನ ಜತೆ ಬಹಿರಂಗವಾಗೇ ಲವ್ವಿ-ಡವ್ವಿ ನಡೆಸುವುದು, ತನ್ನ ಕಣ್ಣೆದುರೇ ಲಲ್ಲೆಗರೆಯುವುದು ಭಾಸ್ಕರ್ ಶೆಟ್ಟಿಯ 'ಗಂಡಸ್ತನ' ಕೆರಳಿಸಿಬಿಟ್ಟಿತ್ತು.

ಪ್ರಾಯಕ್ಕೆ ಬಂದ ಮಗನ ತಾಯಿ ರಾಜೇಶ್ವರಿಗೆ ಕಳ್ಳ ಜ್ಯೋತಿಷಿ ನಿರಂಜನ ಭಟ್ಟ ಅದ್ಯಾವ ಮಂಕುಬೂದಿ ಎರಚಿದನೋ ಏನೋ? ಈ ಉಂಡಾಡಿ ಗುಂಡ ನಿರಂಜನ ರಾಜೇಶ್ವರಿ ಮಗ ನವನೀತನಿಗಿಂತ ಒಂದೆರಡು ವರ್ಷವಷ್ಟೆ ದೊಡ್ಡವನು. ಇಂಥ ಮಗನ ಸಮಾನನಾದ ನಿರಂಜನನ ಜತೆ ಅಕ್ರಮ ಸಂಬಂಧಕ್ಕೆ ರಾಜೇಶ್ವರಿ ಬಿದ್ದಿದ್ದಳು. ತನ್ನ ಅನಾರೋಗ್ಯ ಕಡಿಮೆ ಮಾಡಿಕೊಟ್ಟ ದೈವಾಂಶ ಸಂಭೂತನಾದ ನಿರಂಜನನಿಗೆ ತನ್ನನ್ನೇ ಅರ್ಪಿಸಿಕೊಂಡು ಬಿಟ್ಟಿದ್ದಳು. ಕಪಟ ಬ್ರಾಹ್ಮಣ ನಿರಂಜನ ಆಕೆಯ ದೌರ್ಬಲ್ಯ ಬಳಸಿಕೊಂಡು ಭಾಸ್ಕರ್ ಶೆಟ್ಟಿಯ ಹಣ-ಸಂಪತ್ತು ಒಂದೊಂದಾಗಿ ಕೊಳ್ಳೆ ಹೊಡೆಯ ಹತ್ತಿದ್ದ.

ಈಗೊಂದು ವರ್ಷದ ಹಿಂದಷ್ಟೇ ಜ್ಯೋತಿಷಿಯಾಗಿ ಅವತರಿಸಿದ್ದ ನಿರಂಜನನಿಗೆ ಮೊದಲ ಬೇಟೆಯೇ ಭರ್ಜರಿಯಾಗಿ ಬಿದ್ದಿತ್ತು! ವಿಪರೀತ ಕಾಲುನೋವಿಂದ ಓಡಾಡಲಿಕ್ಕೂ ಆಗದ ಪರಿಸ್ಥಿತಿ ರಾಜೇಶ್ವರಿಯದಾಗಿತ್ತು. ಪೂಜೆ-ಹರಕೆ ಮಾಡಿದರೂ ರಾಜೇಶ್ವರಿಯ ಆರೋಗ್ಯ ಸರಿಯಾಗಲಿಲ್ಲ. ಕಂಡ-ಕಂಡ ಮಂತ್ರವಾದಿ-ಜ್ಯೋತಿಷಿಗಳನ್ನು ಸಂಧಿಸಿದರೂ ಆಕೆಯ ಸಮಸ್ಯೆ ನಿವಾರಣೆ ಆಗಿರಲಿಲ್ಲ. ದೊಡ್ಡ-ದೊಡ್ಡ ವೈದ್ಯರ ಬಳಿಗೂ ಆಕೆ ಹೋಗಿದ್ದರೂ ಪ್ರಯೋಜನವಾಗಿರಲಿಲ್ಲವಂತೆ. ನಂದಳಿಕೆಯಲ್ಲೊಂದು ಯಜ್ಞ ಶಾಲೆ ಮಾಡಿಕೊಂಡು ಢೋಂಗಿ ಹೋಮ-ಹವನ ಮಾಡುತ್ತ ಜ್ಯೋತಿಷಿಯೆಂದು ಬೋಂಗು ಬಿಡುತ್ತಿದ್ದ ನಿರಂಜನನ 'ಮಹಿಮೆ' ರಾಜೇಶ್ವರಿವರೆಗೂ ತಲುಪಿತ್ತು. ಆಕೆ ತನ್ನ ಕಾಲುನೋವಿನ ಕಷ್ಟ ಸ್ವಯಂಘೋಷಿತ ಸ್ಮಶಾನ ಕಾಳಿ ಉಪಾಸಕ ನಿರಂಜನ ಭಟ್ಟನಲ್ಲಿ ನಿವೇದಿಸಿಕೊಂಡಿದ್ದಳು.

ಆಗಾಕೆ ಓಡಾಡುವ ಸ್ಥಿತಿಯಲ್ಲೂ ಇರಲಿಲ್ಲವಂತೆ. ಅದನ್ನು ಕಂಡ ನಿರಂಜನ ಒಂದು ಬಂಡಲ್ ಬಿಟ್ಟೇಬಿಟ್ಟ. ಆಕೆ ಹಣವಂತ ಎನ್‌ಆರ್‌ಐ ಉದ್ಯಮಿಯ ಪತ್ನಿಯೆಂಬ 'ತೂಕ' ಗೊತ್ತುಮಾಡಿಕೊಂಡಿದ್ದ ನಿರಂಜನ ಭಟ್ಟ ಏನೇನೋ ಮಂತ್ರಿಸಿಕೊಟ್ಟಂತೆ ಮಾಡಿದ್ದಾನೆ. "ಒಂದು ತಾಸಿನಲ್ಲಿ ನೀನು ಎದ್ದು ಓಡಾಡುವಂತೆ ಆಗುತ್ತದೆ...." ಎಂದು ಅಭಯ ನೀಡಿದ್ದಾನೆ. ಯಾವ್ಯಾವುದೋ ಮದ್ದು-ಮಾತ್ರೆ ಮಾಡುತ್ತಿದ್ದ ರಾಜೇಶ್ವರಿಯಲ್ಲಿ ನಿಧಾನವಾಗಿ ಅದರ ಪರಿಣಾಮ ಆಗುತ್ತಿತ್ತು. ಆಕೆ ಓಡಾಡುವ ಪ್ರಯತ್ನ ಮಾಡಿದಳು. ಕಾಕತಾಳೀಯವಾಗಿ ನಿರಂಜನ ಭಟ್ಟನ ಬಂಡಲ್ ಭವಿಷ್ಯ ನಿಜವಾಗಿತ್ತು. ತಾನು ಓಡಾಡುವಂತಾಗಲು ನಿರಂಜನನ ಮಂತ್ರಶಕ್ತಿ-ದೈವೀಶಕ್ತಿಯೇ ಕಾರಣವೆಂಬ ಮೂಢನಂಬಿಕೆಗೆ ಬಿದ್ದುಬಿಟ್ಟಳು ಪೆದ್ದಿ ರಾಜೇಶ್ವರಿ!

ಅಲ್ಲಿಂದ ಶುರುವಾಯ್ತು ರಾಜೇಶ್ವರಿ-ನಿರಂಜನರ ಅನೈತಿಕ ನಂಟಿನ ಅಂಟು! ಆತ ರಾಜೇಶ್ವರಿಯ ಕುಟುಂಬದ ವ್ಯವಹಾರದಲ್ಲಿ ತಲೆ ತೂರಿಸಲು ಅವಕಾಶವಾಯ್ತು. ತನಗೆ ಬೇಕುಬೇಕೆಂದಾಗೆಲ್ಲ ರಾಜೇಶ್ವರಿಯನ್ನು ಬಳಸಿಕೊಳ್ಳತೊಡಗಿದ. ಹೀನಸುಳಿಯ ನಿರಂಜನ ಆಕೆಯ ಗಂಟಿನ ಮೇಲೆ ಕಣ್ಣಿಟ್ಟೇ ಕಾರ್ಯಾಚರಣೆ ನಡೆಸಹತ್ತಿದ. ನಿರಂಜನನ ವ್ಯಾಮೋಹಕ್ಕೆ ಬಿದ್ದಿದ್ದ ರಾಜೇಶ್ವರಿ ಆತನಿಗೊಂದು ಫ್ಲಾಟು, ಐಷಾರಾಮಿ ಕಾರು ಕೊಡಿಸಿದ್ದಳು. ತಾಸುಗಟ್ಟಲೆ ಮೊಬೈಲ್ ಫೋನಲ್ಲಿ ಇಬ್ಬರೂ ಚಿಟ್‌ಚಾಟ್ ನಡೆಸುತ್ತಿದ್ದರು. ನವನೀತನೂ ಅಮ್ಮನ ಅನೈತಿಕ ಆಟ ಕಂಡೂಕಾಣದಂತಿದ್ದ. ತನ್ನ ಹುಡುಗಿಯ ತೆವಲಿಗೆ ಅಮ್ಮ ತಡೆಯೊಡ್ಡಬಾರದೆಂದು ನವನೀತ ಜ್ಯೋತಿಷಿ


ನಿರಂಜನ ಯಜ್ಞ ಶಾಲೆ


ಹೋಮ ಕುಂಡ

ಭೋಂಗಿ ಮಂತ್ರವಾದಿ ನಿರಂಜನನ ಜಾತಕ!

ಗೆ ಒಂದೇ ಒಂದು ವರ್ಷದ ಹಿಂದೆ ಕಾರ್ಕಳದ ಕೆ-ಬೆಳ್ಮಣ್ ಏರಿಯಾದಲ್ಲಿ ತಿರುಬೋಕಿಯಂತೆ ಯುತ್ತಿದ್ದ ನಿರಂಜನ ಭಟ್ಟ ಪಕ್ಕಾ ಪಲಾಲುಟೋಪಿ . ಮೋಸದ ಮಾತುಗಾರಿಕೆಯೇ ಆತನ ಬಂಡವಾಳ. ದಗಲುಬಾಜಿಯಲ್ಲಿ ಆತ ಪಳಗಿದ್ದಾನೆ. ನಂದಳಿಕೆಯ ಬ್ರಾಹ್ಮಣ ಶ್ರೀನಿವಾಸ ಭಟ್ಟರ ಮೂರು ಮಕ್ಕಳಲ್ಲಿ ಬ್ಬನೇ ಗಂಡು ಸಂತಾನ. ಶ್ರೀನಿವಾಸ ಭಟ್ಟ ದೇವಸ್ಥಾನ ರ ಅರ್ಚಕ. ಸಾತ್ವಿಕ ಸ್ವಭಾವದ ಶ್ರೀನಿವಾಸ್ ಭಟ್ಟ ರ ಮಡದಿ ವಿಜಯಾರ ಹೊಟ್ಟೆಯಲ್ಲಿ ಈ ನರರಕ್ಕಸ ವ್ವಾನೆಂಬುದೇ ನಂದಳಿಕೆ ಭಾಗದ ಜನರಿಗೆ ಕೊಳ್ಳಲಾಗದ ಕಟು ವಾಸ್ತವ!!

ಪ್ಪ ಶ್ರೀನಿವಾಸ ಭಟ್ಟನಿಗೆ ನಾಲ್ಕು ಮಂತ್ರ-ವಾದರೂ ಬರುತ್ತದೆ. ಈ ಪೆದ್ದು ಪಾಪಿಗೆ ಸರಿಯಾಗಿ ಚ್ಚಾರಣೆಯೂ ತಿಳಿಯದು. ಇಂಥ ಪಡಪೋಸಿ ಜ್ಯೋತಿಷಿಯಾಗಿ ಈಗೊಂದು ವರ್ಷದಿಂದ ಇಡೀ ಪಿ ಜಿಲ್ಲೆಯಲ್ಲಿ ಸದ್ದುಗದ್ದಲ ಮಾಡುತ್ತಿದ್ದನೆಂಬುದೇ ತ. ತುಳು ಸಿನಿಮಾ, ಯಕ್ಷಗಾನ, ಭೂತ-ಕೋಲಾದಲ್ಲಿ ವ ನಿರಂಜನ್ ಮುಗ್ಧರಿಗೆ ಮಂಕು ಬೂದಿ ಎರಚುವ ಪ್ರವೀಣ. ಈ ಭೋಂಗು ಬುದ್ಧಿವಂತಿಕೆಯಿಂದಲೇ ನ ಬೆದೆಗಾತಿ ರಾಜೇಶ್ವರಿಯನ್ನು ವಶಮಾಡಿಕೊಂಡಿದ್ದ. ಹೆಣ ಸುಟ್ಟ ಬಳಿಕ ಹೋಮ ಕುಂಡದ ಸುತ್ತಲಿನ ರಾತ್ರೋರಾತ್ರಿ ಬದಲಿಸಿರುವ ನಿರಂಜನ ಸಾಕ್ಷಿ ಹವಣಿಸಿದ್ದಾನೆ. ಹೆಣ ಸಾಗಿಸುವಾಗ ಕಾರಿನ ರ್ ಪ್ಲೇಟ್ ಬದಲಿಸಿದ್ದಾರೆ ಕೊಲೆಗಡುಕಿ ರಾಜೇಶ್ವರಿ ಕೆಯ ಮಗ ನವನೀತ. ಇದು ಮನೆಮುರುಕ ಮಾಂತ್ರಿಕ ನಿರಂಜನನ ಕ್ರಿಮಿನಲ್ ಕರಾಮತ್ತಿನಂತೆಯೇ ನಡೆದಿದೆ.

ನಿರಂಜನ್‌ಗೆ ಬರೀ 26 ವರ್ಷ ಪ್ರಾಯ. ಬಿ.ಕಾಂ. ಮುಗಿಸಿರುವ ಈತ ಉದ್ಯೋಗಕ್ಕಾಗಿ ಅಂಡಲೆದು ಸುಸ್ತಾಗಿದ್ದ. ಈತನ ಚಾಣ್ಮೆಗೆ ಎಲ್ಲೂ ನೌಕರಿ ಸಿಕ್ಕಿರಲಿಲ್ಲ. ಆಗಾತ ಬೆಳ್ಮಣ್‌ನಲ್ಲಿ ಕಾಲ್‌ಸೆಂಟರ್ ತೆರೆದಿದ್ದ. ಅಲ್ಲೇನು ಪ್ರಾಪ್ತಿಯಾಗಲಿಲ್ಲ. ಅಪ್ಪ ಕೊಟ್ಟ ಬಂಡವಾಳವೂ ಉಳಿಸಲಿಲ್ಲ. ಅದ್ಹೇಗೋ ಬೆಂಗಳೂರು ಸೇರಿಕೊಂಡ. ಅಲ್ಲಿ ಹೋಟೇಲೊಂದರಲ್ಲಿ ಚಾಕರಿ ಮಾಡಿದ. ಹೋಟೇಲಿಯರ್ ಆಗ್ತೇನೆಂದು ಬಂಡಲ್ ಬಿಟ್ಟ. ಅಲ್ಲೂ ಭರ್ಕತ್ತಾಗಲಿಲ್ಲ. ಸರ್ಕಾರಿ ನೌಕರಿಗೆ ಅರ್ಜಿ ಹಾಕಿಹಾಕಿ ಸುಸ್ತಾದ. ಕಡೆಗೆ ಕೆಎಎಸ್ ಬರೆದ. ಪ್ರಿಲಿಮನರಿಯಲ್ಲೇ ಬಚಾವಾಗಲಿಲ್ಲ.

ವರ್ಷದ ಹಿಂದೆ ಗತಿಯಿಲ್ಲದೆ ತವರಿಗೆ ವಕ್ಕರಿಸಿದ್ದ ನಿರಂಜನ್ ತಾನೊಬ್ಬ ಜ್ಯೋತಿಷ್ಯ ಮಾರ್ತಾಂಡನೆಂಬಂತೆ ಪೋಸು ಕೊಡತೊಡಗಿದ್ದ. ಭವಿಷ್ಯ ಕೇಳಲು ಮೂರ್ಖ ಜನರು ಈ ವಂಚಕನ ಬಳಿ ತಂಡೋಪತಂಡವಾಗಿ ಬರತೊಡಗಿದರು. ಗ್ರಹಚಾರ ಬಿಡಿಸೋದು, ಭವಿಷ್ಯ ಬೆಳಗಿಸುವುದಕ್ಕೆಲ್ಲ ದುಬಾರಿ ಹೋಮ-ಹವನ ಹೇಳತೊಡಗಿದೆ. ತಾನೇ ಯಜ್ಞ-ಹವನ ಮಾಡಲು ಕುಂತ. ಇಂಥ ಯಜ್ಞದ ಬಿಸ್ನೆಸ್ ಜೋರಾಗಿ ಹೋಯ್ತು. ಮನೆಯಲ್ಲೇ ಒಂದು ಹೋಮ-ಹವನದ ಶಾಲೆ ಮಾಡಿ ಅಲ್ಲಿ ಯಜ್ಞ ಕುಂಡ ಮಾಡಿಕೊಂಡ. ಸದಾ ಹೊಗೆಯುಗುಳುವ ಹೋಮ-ಹವನದಲ್ಲಿ ಬಿಜಿಯಾಗಿ ಹೋದ. ದಂಡಿ-ದಂಡಿಯಾಗಿ ದುಡ್ಡಿನ ಪಿಂಡಿಯೂ ಮುಗ್ಧ ಜನರಿಂದ ಸುಲಿಯತೊಡಗಿದ.

ಅವಿಭಜಿತ ದಕ್ಷಿಣ ಕನ್ನಡದ ಮೂಲೆ-ಮೂಲೆಯಿಂದ ಜನರು ಬರತೊಡಗಿದರು. ನೋಡುನೋಡುತ್ತಿದ್ದಂತೆ ಅಬ್ಬೇಪಾರಿ ನಿರಂಜನ ಭಟ್ಟನ ಬದುಕಿನ ದೆಸೆಯೇ ಬದಲಾಗಿ ಹೋಯಿತು. ವರ್ಷದ ಹಿಂದೆ ಒಂದ್ಹೊತ್ತು ಗಂಜಿಗೂ ತತ್ವಾರ ಪಡುತ್ತಿದ್ದ ನಿರಂಜನ್ ಮಾರುತಿ ಅಲ್ಟೋ ಕಾರಿನಲ್ಲಿ ಓಡಾಡಹತ್ತಿದ. ಈಗಾತ ಬರೋಬ್ಬರಿ 16 ಲಕ್ಷದ ಹೊಂಡೈ ಕಂಪನಿಯ ಕ್ರೆಟ್ಟಾದಲ್ಲಿ ಸವಾರಿ ಹೊರಡುತ್ತಿದ್ದ. ಈ ಕಾರು ಮತ್ತು ಉಡುಪಿಯಲ್ಲಿ ಬೆಲೆಬಾಳುವ ಫ್ಲಾಟುಗಳನ್ನು ಗೆಣೆಗಾತಿ ರಾಜೇಶ್ವರಿಯೇ ಪ್ರೇಮದ ಕಾಣಿಕೆಯಾಗಿ ಕೊಟ್ಟಿದ್ದಾಳೆಂಬ ಗುಲ್ಲೂ ಇದೆ.

ಮಸಣದಲ್ಲಿ ಕಠಿಣ ಅನುಷ್ಠಾನ ಮಾಡಿ ಸ್ಮಶಾನ ಕಾಳಿ ಆವಾಹನೆ ಮಾಡಿಕೊಂಡಿದ್ದೇನೆಂದು ನಿರಂಜನ ಭಟ್ಟ ಕಂಡಕಂಡವರ ಎದುರು ಬಡಬಡಿಸಿ ಮರುಳು ಮಾಡುತ್ತ ಬಂದಿದ್ದ. ಈ ಜಪ-ತಪಗಳಿಂದಾಗಿ ತಾನು ಪ್ರಕಾಂಡ ಜ್ಯೋತಿಷಿಯಾಗಿದ್ದೇನೆ. ತಾನು ಹೇಳಿದಂತೆಯೇ ಆಗುತ್ತದೆಂದು ಪೋಸ್ ಮಾಡುತ್ತಿದ್ದ. ಆದರೆ ನಿರಂಜನನ ತಂದೆ ಶ್ರೀನಿವಾಸ್ ಭಟ್ಟರೇ ಹೇಳುವ ಪ್ರಕಾರ ಆತನ ಮಗನ ಲೊಳಲೊಟ್ಟೆ. ಆತ ಲಾಟ್‌ಪುಟ್ ಜ್ಯೋತಿಷಿ. ಆತನಿಗೆ ಯಾವ ಶಕ್ತಿಯೂ ಇಲ್ಲ. ರಾಜೇಶ್ವರಿಗೆ ಹಿಡಿದಿದ್ದ ಕಾಯಿಲೆ ಕಡಿಮೆ ಆಗುತ್ತದೆಂದು ನಿರಂಜನ ಹೇಳಿದ್ದ. ಕಾಕತಾಳೀಯವಾಗಿ ರೋಗವಾಸಿಯಾಗಿದೆಯೇ ಹೊರತು ಇದರಲ್ಲಿ ನಿರಂಜನ ಶಕ್ತಿಯೇನೂ ಇಲ್ಲ.

ಎನ್‌ಆರ್‌ಐ ಉದ್ಯಮಿ ಭಾಸ್ಕರ್ ಶೆಟ್ಟಿಯ ಕೋಟ್ಯಂತರ ರೂಪಾಯಿ ಆಸ್ತಿ ಲಪಟಾಯಿಸುವ ಲಾಲಸೆಯಿಂದ ಆತನ ಹೆಂಡತಿ-ಮಗನ ದಾರಿ ತಪ್ಪಿಸಿದ್ದ ಈ ಅನಾಹುತಕಾರಿ ಹಾರವ ಹರಾಮಿ ಈಗ ಜೈಲು ಪಾಲಾಗಿದ್ದಾನೆ. ತಾನು ರಾಜೇಶ್ವರಿ-ನವನೀತನ ಜತೆ ಸೇರಿಸಿಕೊಂಡು ಮಾಡಿದ



ಕೊಲೆ ಕುಸುರಿ ಕಲೆಯ ವಿವರವಾಗಿ ಹೇಳಿದ್ದಾನೆ. ಜೈಲಿನ ಸೊಳ್ಳೆ-ಕೊಚ್ಚಕ್ಕಿ ಗಂಜಿ ಸಹವಾಸ ಸಾಕಾಗಿ ಆತ್ಮಹತ್ಯೆಗೂ ಪ್ರಯತ್ನಿಸಿದ್ದಾನೆ. ಒಂದೇ ಒಂದು ಎಲುಬಿನ ಚೂರೂ ಸಿಗದಂತೆ ಭಾಸ್ಕರ್ ಶೆಟ್ಟಿ ಶವ ಸುಟ್ಟು ಹಾಕಿರುವ ಈ ಹೋಮ ಪ್ರವೀಣ ಖತರ್‌ನಾಕ್ ಕ್ರಿಮಿನಲ್ ಎಂಬುದಕ್ಕೆ ಸಾಂದರ್ಭಿಕ ಸಾಕ್ಷಿಗಳೇ ಸಾಕು!

ಕೊಲೆಗಡುಕತ್ರಯರಿಗೆ ತಕ್ಕ ಶಿಕ್ಷೆಯಾಗುವಂತೆ ನೋಡಿಕೊಳ್ಳುವ ಹೊಣೆ ಉಡುಪಿ ಪೊಲೀಸರ ಮೇಲಿದೆ; ಭಾಸ್ಕರ್ ಶೆಟ್ಟರ ವೃದ್ಧ ತಾಯಿಗೆ ನ್ಯಾಯ ಪೊಲೀಸರು ಕೊಡಿಸದಿದ್ದರೆ ಆಕೆಯ ಕಣ್ಣೀರಿನ ಶಾಪ ತಟ್ಟದೇ ಇರದು!



ಜನನಿಗೆ ಅನುಕೂಲಕರವಾಗಿ ಇದ್ದ!!

ವಿಚ್ಛೇದನದ ಇಚ್ಛೆ!!

ಈಗೀಗ ಭಾಸ್ಕರ್ ಶೆಟ್ಟಿ ಹೆಂಡತಿ ರಾಜೇಶ್ವರಿ-ಟಾಟಕೆ ಮಂತ್ರವಾದಿ ನಿರಂಜನರ ವ್ಯವಹಾರದಿಂದ ಹೋಗಿದ್ದ. ಊರಿಗೆ ಬಂದಾಗೆಲ್ಲ ಆತನಿಗೆ ಹೆಂಡತಿ ದಿ ತಪ್ಪಿದ ಬಗ್ಗೆ ಪುಕಾರುಗಳು ಬರುತ್ತಿದ್ದವು. ಇದರಿಂದ ಚಿಟ್ಟು ಹಿಡಿದುಹೋಗಿದ್ದ ಭಾಸ್ಕರ್ ಶೆಟ್ಟಿಗೆ ಹೆಂಡತಿಯ ಬೈಲ್‌ನಲ್ಲಿ ಅನೈತಿಕ ಮಿಲನದ ಅನೇಕ ಸಾಕ್ಷ್ಯಾಧಾರಗಳು ದವು. ಹಣಕಾಸಿನ ದುರುಪಯೋಗವೂ ದೊಡ್ಡ ದಲ್ಲೇ ಆಗಿತ್ತು. ಇದೆಲ್ಲಕ್ಕಿಂತ ಹೆಚ್ಚಾಗಿ ಮಗ ನವನೀತ್ ಮತ್ತು ಅಮ್ಮನ ಆತ್ಮೀಯ ನಿರಂಜನ ಭಟ್ಟನ ಕ್ಕನಿಂದ ತನ್ನ ಮೇಲೆ ಪದೇ-ಪದೇ ಹಲ್ಲೆ ಮಾಡೋದು, ಗೇ ಒದೆಯುವುದು ಚಿಂತೆಗೀಡು ಮಾಡಿತು. ಆತನ ಗ ಮತ್ತು ಹೆಂಡತಿಯ ವಿಪರೀತ ವೈಪರೀತ್ಯದಿಂದ ಸಾಗಿ ಹೋಗಿದ್ದ ಇದಕ್ಕೆಲ್ಲ ರಾಜೇಶ್ವರಿಗೆ ಡೈವೋರ್ಸ್ ಡುವುದೊಂದೇ ಮದ್ದೆಂಬ ತೀರ್ಮಾನಕ್ಕಾತ ಬಂದಿದ್ದ.

ಈ ನಿರ್ಧಾರವನ್ನು ಭಾಸ್ಕರ್ ಶೆಟ್ಟಿ ತನ್ನ ತಾಯಿ-ಸಿ-ಬಂಧುಗಳಿಗೂ ತಿಳಿಸಿದ್ದ. ಹೆಂಡತಿಯ ಹೆಸರಲ್ಲಿರುವ ಡುಪಿಯ ಆಸ್ತಿಯನ್ನೆಲ್ಲ ತನ್ನ ಅಥವಾ ತಾಯಿ ಗುಲಾಬಿ ಗೆ ವರ್ಗಾಯಿಸಿಕೊಂಡು ವಿಚ್ಛೇದನ ಕೊಡಲೆಂದೇ ಬಾರಿ ಆತ ಉಡುಪಿಗೆ ಬಂದಿದ್ದ. ಮಗ-ಹೆಂಡತಿ ಡೆಯುತ್ತಾರೆಂದು ತಾಯಿಯಲ್ಲಿ ಅಳಲು ಡಿಕೊಂಡಿದ್ದ ಭಾಸ್ಕರ. ತಾಯಿ ಗುಲಾಬ ಮಗನಿಗೆ ಇಂಟರ್‌ನ್ಯಾಷನಲ್‌ನಲ್ಲಿ ಉಳಿಯುವಂತೆ ಹೇಳಿದ್ದರು. ಮತ್ತು ಮೊಮ್ಮಗನ ಮೇಲೆ ವಿಶ್ವಾಸ ಕಳೆದುಕೊಂಡಿದ್ದ ಬಿ ಮಗ ಭಾಸ್ಕರ್‌ಗೆ ಇಂದ್ರಾಳಿ ಮನೆಗೆ ಹೋಗದಂತೆ ದ್ದರು.

ಭಾಸ್ಕರ್ ಶೆಟ್ಟಿ ಉಡುಪಿಗೆ ಬಂದಿರುವುದು ತಿಳಿದು ಶ್ವರಿ ಮತ್ತು ನವನೀತ್ ದುರ್ಗಾ ಲಾಡ್ಜ್‌ಗೆ ಹೋದರು. ಹಣ, ಬದಲಾವಣೆ ಬಗ್ಗೆ ಅಲ್ಲಿ ಬಿಸಿಬಿಸಿ ಯವಾಗಿದೆ. ಕಟ್ಟುಮಸ್ತಾದ ಮೈಕಟ್ಟಿನ 25ರ ಹರೆಯದ ನವನೀತ್ ಅಪ್ಪನೆಂಬ ಮಮಕಾರವೂ ಇಲ್ಲದೆ ಯವಾಗಿ ಭಾಸ್ಕರ್ ಶೆಟ್ಟಿಗೆ ಹೊಡೆದಿದ್ದಾನೆ. ಏನೇ ಜುಲೈ 28ರಂದು ಆಸ್ತಿ ಹಣ ಬದಲಾವಣೆಯ ಕರಾರುಪತ್ರ ಮಾಡಿಸಲೇಬೇಕೆಂದು ಭಾಸ್ಕರ್ ಶೆಟ್ಟಿ ಹೆಂಡತಿ-ಮಗನಿಗೆ ತಾಕೀತು ಮಾಡಿಕಳಿಸಿದ್ದಾನೆ; ಅಂದು ಲಾಯರ್ ಒಬ್ಬರ ಮನೆಗೆ ಬರುವಂತೆಯೂ ರಾಜೇಶ್ವರಿ-ನವನೀತನಿಗೆ ಹೇಳಿದ್ದಾನೆ. ಆಸ್ತಿ ಪರಭಾರೆಯಾದ ನಂತರ ಭಾಸ್ಕರ್ ಶೆಟ್ಟಿ ತನ್ನನ್ನು ಮತ್ತು ಮಗ ನವನೀತನನ್ನ ದೂರ ಮಾಡುತ್ತಾನೆ. ನಂಟು ಹರಿದು ಹಾಕಿ ಡೈವೋರ್ಸ್ ಕೊಡುತ್ತಾನೆಂಬುದು ರಾಜೇಶ್ವರಿಗೆ ಪಕ್ಕಾ ಆಗಿದೆ!

ಕೊಲೆಗೆ ತ್ರಿವಿಧ ತಂತ್ರ!

ಯಾವಾಗ ಭಾಸ್ಕರ್ ಶೆಟ್ಟಿ ಆಸ್ತಿ ವರ್ಗಾವಣೆ ಮತ್ತು ವಿಚ್ಛೇದನದ ಹಠಕ್ಕೆ ಬಿದ್ದನೋ ಆಗ, ರಂಗೀಲಾ ರಾಜೇಶ್ವರಿ, ಗೂಂಡಾ ನವನೀತ್ ಮತ್ತವರ 'ಗುರು' ನಿರಂಜನ ಭಟ್ಟ ಗಡಿಬಿಡಿಗೆ ಬೀಳುತ್ತಾರೆ. ಭಾಸ್ಕರ್ ಶೆಟ್ಟಿಯ ಕೋಟಿ-



ಕೋಟಿಗಳ ಮೇಲೆ ಕಣ್ಣಿಟ್ಟೇ ರಾಜೇಶ್ವರಿಯನ್ನು ತೆಕ್ಕೆಗೆ ಎಳೆದುಕೊಂಡಿದ್ದ ನಿರಂಜನ ಭಟ್ಟನಿಗೆ ತನ್ನ ಪ್ಲಾನ್ ಫ್ಲಾಪ್ ಆಗುವ ಆತಂಕ ಶುರುವಾಗಿದೆ. ರಾಜೇಶ್ವರಿ ಮತ್ತು ನವನೀತನಿಗೆ ಕೋಟಿಗಳ ಆಸ್ತಿ ಕೈತಪ್ಪುವ ಭವಿಷ್ಯದ ದಿನಮಾನಗಳ ಕಲ್ಪನೆಯೇ ನಿದ್ದೆಗೆಡಿಸಿಬಿಟ್ಟಿದೆ. ಮೂವರೂ ಸೇರಿ ಭಾಸ್ಕರ್ ಶೆಟ್ಟಿಯನ್ನೇ ಕೊಂದು ಹಾಕಿ ಆತನ ಆಸ್ತಿ-ಹಣ-ಬಂಗ್ಲೆ-ಬಿಲ್ಡಿಂಗ್‌ಗಳನ್ನೆಲ್ಲ ದಕ್ಕಿಸಿಕೊಳ್ಳುವ ಸಂಚು ಮಾಡಿದ್ದಾರೆ!!

ಸೌದಿಯಿಂದ ಬಂದಂದಿನಿಂದ ಭಾಸ್ಕರ್ ಶೆಟ್ಟಿ ತನ್ನ ದುರ್ಗಾ ಇಂಟರ್‌ನ್ಯಾಷನಲ್ ಹೋಟೇಲಿನಲ್ಲೇ ಉಳಿದುಕೊಳ್ಳುತ್ತಿದ್ದ. ಆದರೆ ಅದ್ಯಾಕೋ ಸ್ನಾನಕ್ಕೆಂದು ದಿನಕ್ಕೊಂದು ಬಾರಿ ಮಾತ್ರ ಇಂದ್ರಾಳಿಯ ಮನೆಗೆ ಹೋಗಿಬರುತ್ತಿದ್ದ. ಅಲ್ಲಿ ತನ್ನ ಶತ್ರುಗಳಾದ ಹೆಂಡತಿ-ಮಗ ಇರುತ್ತಾರೆಂಬ ಭಯವೇನೂ ಆತನಿಗೆ ಇರಲಿಲ್ಲ. ಹೆಂಡತಿ-ಮಗ ತನ್ನನ್ನು ಕೊಂದೇ ಹಾಕುವ ಮಟ್ಟಕ್ಕೆ ಹೋಗಲಿಕ್ಕಿಲ್ಲವೆಂಬ ಹುಂಬ ಧೈರ್ಯ ಆತನಲ್ಲಿತ್ತು. ಅಂದು ಜುಲೈ 28. ಭಾಸ್ಕರ್ ಶೆಟ್ಟಿ ಯಥಾಪ್ರಕಾರ ಸ್ನಾನಕ್ಕೆಂದು ಇಂದ್ರಾಳಿ ಮನೆಗೆ ಹೋಗಿದ್ದಾನೆ. ಬಾತರೂಮ್‌ಗೆ ನೇರ ಹೋಗಿದ್ದಾನೆ. ಸುಮಾರು ಅರ್ಧ-ಮುಕ್ಕಾಲು ಗಂಟೆ ಆತನಿಗೆ ಸ್ನಾನಕ್ಕೆ ಬೇಕೆಂಬುದು ತಾಯಿ-ಮಗನಿಗೆ ಗೊತ್ತಿರುವಂಥದ್ದೇ.

ಅಪ್ಪ ಬಾತ್‌ರೂಮ್‌ನಿಂದ ಹೊರಬರುವುದನ್ನೇ ಮಗ ಕಾಯುತ್ತ ಬಾಗಿಲಲ್ಲಿ ನಿಂತಿದ್ದಾನೆ. ಹೊರಬಂದಾಗ ಏನೋ ಮಾತಾಡುವ ನೆಪ ಮಾಡಿ ನಿಲ್ಲಿಸಿದ್ದಾನೆ. ತಕ್ಷಣ 'ಪೆಪ್ಪರ್ ಸ್ಪ್ರೇ' ಕಣ್ಣಿಗೆ ಸಿಂಪಡಿಸಿದ್ದಾನೆ. ಏನಾಗುತ್ತಿದೆ ಎಂದು ಭಾಸ್ಕರ್ ಶೆಟ್ಟಿ ಗೊತ್ತು ಮಾಡಿಕೊಳ್ಳುವ ಮೊದಲೇ ಕಣ್ಣು ಮುಚ್ಚಿಕೊಂಡು ಉಜ್ಜಿಕೊಳ್ಳುತ್ತಿದ್ದ ಆತನ ತಲೆಗೆ ಹೆಂಡತಿ ರಾಜೇಶ್ವರಿ ಬಲವಾದ ಕಬ್ಬಿಣದ ರಾಡ್‌ನಿಂದ ಬಾರಿಸಿದ್ದಾಳೆ. ನೆಲಕ್ಕೆ ಬಿದ್ದ ಆತನ ಮೇಲೆ ತಾಯಿ-ಮಗ ಪೈಶಾಚಿಕ ಹಲ್ಲೆ ಮಾಡಿದ್ದಾರೆ. ರಾಡ್‌ನಿಂದ ಮತ್ತೆ-ಮತ್ತೆ ಹೊಡೆದಿದ್ದಾರೆ. ಅಷ್ಟಾದರೂ ಆತನ ಪ್ರಾಣ ಹೋಗುವುದಿಲ್ಲ.

ಆಗ ಬಚ್ಚಲಮನೆಯಲ್ಲಿರುವ ಟಬ್‌ಗೆ ಆತನ ಎಳೆದೊಯ್ದು ಹಾಕಿದ್ದಾರೆ. ಅದರ ತುಂಬ ನೀರು ತುಂಬಿ ಮುಳುಗಿಸಿ ಜೀವ ತೆಗೆಯಲು ಪ್ರಯತ್ನಿಸಿದ್ದಾರೆ. ಆಗಲೂ ಆತ ಸತ್ತ ಬಗ್ಗೆ ಖಾತ್ರಿಯಾಗುವುದಿಲ್ಲ ಪಾತಕಿ ತಾಯಿ-ಮಗನಿಗೆ. ಆಗ ಜಿರಲೆ ನಿರ್ಮೂಲನೆಗೆ ತಂದ ವಿಷ ಕುಡಿಸಿದ್ದಾರೆ. ಮೂರ್ಮೂರು ವಿಧದ ಮರ್ಡರ್ ಪ್ರಯತ್ನ ಮಾಡಿದ್ದಾರೆ. ಆತ ಸತ್ತದ್ದು ಪಕ್ಕಾ ಆದಾಗ ಹೆಣವನ್ನು ಕಾರಲ್ಲಿ ಹಾಕಿಕೊಂಡು ಸೀದಾ ಗುರು ನಿರಂಜನ ಭಟ್ಟನ ನಂದಳಿಕೆಯ ಯಜ್ಞಶಾಲೆಗೆ ಒಯ್ದಿದ್ದಾರೆ. ಗೆಳತಿ ರಾಜೇಶ್ವರಿ ಮತ್ತಾಕೆಯ ಮಗನಿಗೆ ಭಾಸ್ಕರ್ ಶೆಟ್ಟಿಯನ್ನು ಹೇಗೆ ಕೊಲೆ ಮಾಡಬೇಕೆಂದು ಸ್ಕೆಚ್ ಹಾಕಿಕೊಟ್ಟಿದ್ದ ನೀಚ ನಿರಂಜನ ಭಟ್ ಹೆಣವನ್ನು ಬೂದಿ ಮಾಡಲು ಯಜ್ಞದ 'ವಿಧಿ-ವಿಧಾನ' ಬಳಸಿಕೊಂಡಿದ್ದಾನೆ.

ಹೋಮಕುಂಡದಲ್ಲಿ ದಹನ!!

ಭಾಸ್ಕರ್ ಶೆಟ್ಟಿ ಮೃತ ದೇಹವನ್ನು ಪಾಪಿ ನಿರಂಜನ ಭಟ್ಟ ತಾನು ಹೋಮ-ಹವನ-ಯಜ್ಞ ಮಾಡುವ ಕುಂಡಕ್ಕೆ ಹಾಕಿದ್ದಾನೆ. ಅದಕ್ಕೆ ರಾಶಿ-ರಾಶಿ ಕಟ್ಟಿಗೆ ಹಾಕಿದ್ದಾನೆ. ತುಪ್ಪ ಯಥೇಚ್ಛವಾಗಿ ಸುರಿದಿದ್ದಾನೆ. ಹೆಣದ ಸುಟ್ಟ ವಾಸನೆ ಹೊರಗೆ ಪಸರಿಸದಂತೆ ಕರ್ಪೂರ ಬೆಂಕಿಗೆ ಹಾಕಿದ್ದಾನೆ. ಸುತ್ತಲಿನವರಿಗೆ ನಿರಂಜನ 'ಹೆಣ ಸಂಸ್ಕಾರ' ಮಾಡುತ್ತಿದ್ದಾನೆಂಬ ಯಾವ ಸಂಶಯ ಬರುವ ಚಾನ್ಸೇ ಇರಲಿಲ್ಲ. ಯಾಕೆಂದರೆ ಆಗಾಗ ಆತ ಅಲ್ಲಿ ಹೋಮ-ಹವನ ಮಾಡುತ್ತಿದ್ದ. ಊರೆಲ್ಲ ಹೊಗೆಯೆಬ್ಬಿಸುತ್ತಿದ್ದ. ಹೀಗಾಗಿ ಭಾಸ್ಕರ್ ಶೆಟ್ಟಿ ಅಂತ್ಯವಿಧಿಯೂ ಯಾವುದೋ ಹೋಮವೆಂತಲೇ ಜನ ಭಾವಿಸಿದ್ದರು. ಅಷ್ಟು ಕರಾರುವಾಕ್ಕಾಗಿ ಖತರ್‌ನಾಕ್ ನಿರಂಜನ ಭಟ್ಟ ಭಾಸ್ಕರ್ ಶೆಟ್ಟಿ ಹೆಣ ಸುಟ್ಟು ಬೂದಿ ಮಾಡಿದ್ದಾನೆ.

ಒಂದೇ ಒಂದು ಎಲುಬಿನ ಚೂರೂ ಇರದಂತೆ ಬೂದಿ ಮಾಡಿದ್ದಾನೆ. ಅಂದು ಮನೆಯಲ್ಲಿ ನಿರಂಜನ ಒಬ್ಬನೇ ಇದ್ದದ್ದು ಈ ಕ್ರಿಮಿನಲ್ ಪಾತಕಕ್ಕೆ ನೆರವಾಗಿದೆ. ಆ ದಿನ ಆತನ ತಂದೆ ಪಾಪದ ಅರ್ಚಕ ಶ್ರೀನಿವಾಸ ಭಟ್ಟ ಜ್ವರದಿಂದ ಆಸ್ಪತ್ರೆ ಸೇರಿದ್ದರು. ಗಂಡನ ನೋಡಿಕೊಳ್ಳಲು ನಿರಂಜನನ ತಾಯಿ ಜತೆಗೆ ಹೋಗಿದ್ದರು. ಹೀಗಾಗಿ 'ದಹನ' ಕೈಂಕರ್ಯ ತುಂಬ ನಾಜೂಕಾಗಿ ನಿರಂಜನ-ರಾಜೇಶ್ವರಿ ಮತ್ತು ನವನೀತ್ ಮಾಡಿ ಮುಗಿಸಿದ್ದಾರೆ. ನಂತರ ಭಾಸ್ಕರ್ ಶೆಟ್ಟಿಯ ಬೂದಿಯನ್ನು ಮನೆಯಿಂದ ಎರಡ್ಮೂರು ಕಿ.ಮೀ. ದೂರದ ತೊರೆಯೊಂದರಲ್ಲಿ ವಿಸರ್ಜನೆ ಮಾಡಿದ್ದಾರೆ. ಗೋಣಿ ಚೀಲದಲ್ಲಿ ಬೂದಿ ತುಂಬಿ ಕಾರಲ್ಲಿ ಹಾಕಿಕೊಂಡು ಹೊಳೆಗೆ ಹಾಕಲಾಗಿದೆ. ಹೀಗಾಗಿ ಒಂದೇ ಒಂದು ಅಂಗಾಂಗ ಅಥವಾ ಮೂಳೆ ಚೂರು ಪೊಲೀಸರಿಗೆ ಸಿಕ್ಕಿಲ್ಲ.


ಕಂಬಿಯ ಹಿಂದೆ

ಕೊಲೆ ಮತ್ತು ಶವಸಂಸ್ಕಾರ ತುಂಬ ವ್ಯವಸ್ಥಿತವಾಗಿ ಮಾಡಿರುವುದು ಮಣಿಪಾಲದ ಪೊಲೀಸರನ್ನೇ ಆರಂಭ 8-9 ದಿನ ದಿಕ್ಕೆಡಿಸಿಬಿಟ್ಟಿತ್ತು. ಹೆಣದ ಯಾವ ಕುರುಹೂ ಸಿಗದಿದ್ದರಿಂದ ರಾಜೇಶ್ವರಿ-ನವನೀತನನ್ನು ಪೊಲೀಸರು ಬಿಟ್ಟುಬಿಟ್ಟಿದ್ದರು. ಉಡುಪಿ ಜಿಲ್ಲಾ ಮಂತ್ರಿ ಪ್ರಮೋದ್ ಮಧ್ವರಾಜ್ ಮಣಿಪಾಲದ ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಫೋನಾಯಿಸಿ ಬೆವರಿಳಿಸಿದ ನಂತರವೇ ಕೇಸು ಹಳಿ ಮೇಲೆ ಬಂದಿದೆ. "ನನ್ನ ಮಗ 28ರಿಂದ ನಾಪತ್ತೆಯಾಗಿದ್ದಾನೆ. ನನಗೆ ಸೊಸೆ ಮತ್ತು ಮೊಮ್ಮಗನ ಮೇಲೆಯೇ ಅನುಮಾನ" ಎಂದು ಭಾಸ್ಕರ್ ಶೆಟ್ಟಿ ತಾಯಿ ಪೊಲೀಸರಿಗೆ ದೂರು ಕೊಟ್ಟಿದ್ದರು. ಹಾಗಂತ ರಾಜೇಶ್ವರಿ-ನವನೀತ ಕಂಪ್ಲೇಂಟು ಉಸಾಬರಿಗೆ ಹೋಗಿರಲಿಲ್ಲ. ಇದೊಂದು ಸಾಕು ಈ ತಾಯಿ-ಮಗನೇ ಕೊಲೆಗಡುಕರೆಂಬುದಕ್ಕೆ!

ಈಗ ರಾಜೇಶ್ವರಿ-ನವನೀತ್ ಮತ್ತು ಕೊಲೆ ಸೂತ್ರಧಾರ ನಿರಂಜನ ಭಟ್ಟ ಪೊಲೀಸರ ಬೋನಿಗೆ ಬಿದ್ದಿದ್ದಾರೆ. ದುಷ್ಟಪುಷ್ಟ ದೇಹದ ತಾಯಿ-ಮಗನ ಮುಖದಲ್ಲಿ ಕೊಲೆ ಮಾಡಿದ ಪಶ್ಚಾತ್ತಾಪದ ಚಹರೆಯೇ ಕಾಣಿಸದು. ಸಿಕ್ಕಿಬಿದ್ದೆವಲ್ಲ ಎಂಬ ಚಡಪಡಿಕೆ ಇದೆಯಷ್ಟೇ! ದೇಹದಾಹ-ಧನದಾಹದ ದುರಾಚಾರದಿಂದ ರಾಜೇಶ್ವರಿ-ನವನೀತ-ನಿರಂಜನ ಜೈಲು ಪಾಲಾಗಿದ್ದಾರೆ. ಮಾಡಬಾರದ್ದು ಮಾಡಿದರೆ ಆಗಬಾರದ್ದೇ ಆಗುತ್ತದೆ ತಾನೆ?!

ಉಪ್ಪು ತಿಂದವರು ನೀರು ಕುಡಿಯಲೇಬೇಕು. ಇದು ನೈಸರ್ಗಿಕ ನ್ಯಾಯತತ್ವ!!

■ ನಹುಷ



ಮಂತ್ರವಾದಿ ತಂದೆ ಶ್ರೀನಿವಾಸ್ ಭಟ್

ಸೀಬರ್ಡ್ ನಿರಾಶ್ರಿತರ ನರಕ

ಮತ್ತು ಸತ್ತಂತಿರುವ ಸಂಸದ ಹೆಗಡೆ!



ಉತ್ತರ ಕನ್ನಡ ಒಂದು ಭೀಭತ್ಸ ನಿರಾಶ್ರಿತರ ಡೇರೆ! ಸಾಲುಸಾಲಾಗಿ ವಕ್ಕರಿಸಿದ ಸರ್ಕಾರಿ ಪ್ರಳಯಾಂತಕ ಯೋಜನೆಗಳು ಇಲ್ಲಿಯ ಜನರ ಬದುಕನ್ನೇ ಬರ್ಬಾದ್ ಮಾಡಿಬಿಟ್ಟಿದೆ. ದೇಶೋದ್ಧಾರಕ್ಕೆ ತ್ಯಾಗ ಮಾಡಿದ ಮಂದಿ ಭಿಕ್ಷೆ ಬೇಡುವ-ದೇಹ ಮಾರುವ ಬರ್ಬರ-ಹೀನ ಸಂಕಷ್ಟಕ್ಕೆ ಬಿದ್ದಿದ್ದಾರೆ. ಇದು ಸ್ಥಳೀಯ ಜನದ್ರೋಹಿ -ಸಚಿವ-ಸಂಸದ-ಶಾಸಕರು ಗೆಲ್ಲಿಸಿದವರಿಗೆ ಕೊಟ್ಟಿರುವ ಬಳುವಳಿ-ಬಹುಮಾನ!!

ಇಲ್ಲಿ ಅಚ್ಚಾಗಿರುವ ಫೋಟೋಗಳು ಅಂಕೋಲಾದ ಸೀಬರ್ಡ್ ನೌಕಾನೆಲೆ ನಿರಾಶ್ರಿತರ ಕಾಲೋನಿಯ ನರಕಸದೃಶ ಬದುಕಿನದು. ಸದ್ರಿ ಚಿತ್ರಗಳು ಸ್ವಯಂಘೋಷಿತ ದೇಶಭಕ್ತ ಸಂಸದ ಅನಂತಕುಮಾರ ಹೆಗಡೆಯ ಯೋಗ್ಯತೆ, ಕ್ಷೇತ್ರವಾಸಿಗಳ ಬಗೆಗಿನ ಕಳಕಳಿ ಮತ್ತು ಕರ್ತವ್ಯಪ್ರಜ್ಞೆಗೆ ನಿಚ್ಚಳ ನಿದರ್ಶನದಂತಿದೆ. ಜತೆಗೆ ಬರೋಬ್ಬರಿ ಹದಿನೈದು ವರ್ಷದಿಂದ ಎಂಪಿಯಾಗಿ 'ಸೇವೆ' ಮಾಡುತ್ತಿರುವ ಹೆಗಡೆಯ ಮನುಷ್ಯತ್ವಕ್ಕೆ ಸಾಕ್ಷಿ.


ಅಂಕೋಲೆಯ ಸೀಬರ್ಡ್ ಕಾಲೋನಿಯಲ್ಲಿ ಸುಮಾರು 150 ನಿರಾಶ್ರಿತ ಕುಟುಂಬಗಳನ್ನು ಬಲವಂತದಿಂದ ತಂದು ತುಂಬಲಾಗಿದೆ. ಇದರಲ್ಲಿ ಯಾವ ಸಂಸಾರವೂ ನೆಮ್ಮದಿಯಿಂದಿಲ್ಲ. ಸೀಬರ್ಡ್ ಯೋಜನೆ ಬರುವ ಮೊದಲು ಈ ಮಂದಿ ದುಡಿದು ತಿನ್ನುತ್ತಿದ್ದರು. ದಿನವಿಡೀ ಗೇಯುವಷ್ಟು ಭೂಮಿ ಇವರಿಗಿತ್ತು. ಉಂಡುಟ್ಟು ಸುಖವಾಗಿದ್ದರು. ದೇಶ ರಕ್ಷಣೆಯ ನೆಪದಲ್ಲಿ ಈ ಶ್ರಮ ಸಂಸ್ಕೃತಿಯ ಮುಗ್ಧರ ಭೂಮಿ-ಹಿತ್ತಲು ಕಿತ್ತುಕೊಂಡ ಸರ್ಕಾರಿ ರಕ್ಕಸರು ಯೋಗ್ಯ ಪರಿಹಾರ-ಸಮರ್ಪಕ ಪುನರ್ವಸತಿ ಮಾತ್ರ ಕಲ್ಪಿಸಲಿಲ್ಲ.

ಸರ್ಕಾರ ಕೊಟ್ಟದ್ದು ಬಂಜರು ಭೂಮಿ. ಬಿತ್ತಿದರೆ ಬೆಳೆಯಾಗಲಿಲ್ಲ. ಪರ್ಯಾಯ ಉದ್ಯೋಗವೂ ರಕ್ಷಣಾ ಇಲಾಖೆ ಕೊಡಲಿಲ್ಲ. ಪರಿಹಾರ ಪಡೆದು ಎಲ್ಲಾದರೂ ಹೋಗಿ ಬದುಕು ಕಟ್ಟಿಕೊಳ್ಳೋಣವೆಂದರೆ, ಸರ್ಕಾರ ನಿಗದಿಸಿದ್ದು ಗುಂಟೆಗೆ ಬರೀ 150 ರೂ! ಕೆಲಸವಿಲ್ಲದೆ ನಿರಾಶ್ರಿತರು ಅಕ್ಷರಶಃ ಬೀದಿಗೆ ಬಿದ್ದರು. ಮನೋವ್ಯಾಧಿಗೆ ತುತ್ತಾದರು. ಪರಿಹಾರಕ್ಕೆ ಕಾದು-ಕಾದು ಖಿನ್ನತೆಯಿಂದ ಹುಚ್ಚರಾದರು; ಆಸ್ಪತ್ರೆ ಪಾಲಾದರು. ನಿರುದ್ಯೋಗ-ಬಡತನ-ಅಸಹಾಯಕತೆಯಲ್ಲಿ ಹೆಂಗಸರು ಅನುಭವಿಸುತ್ತಿರುವ ಗೋಳಂತೂ ಹೇಳತೀರದು. ಇಡೀ‌ಇಡೀ ಸಂಸಾರಗಳೇ ಮನೋರೋಗಿಗಳ ದೊಡ್ಡಿಗಳಂತಾಗಿವೆ. ನಾಗರಿಕ ಪ್ರಪಂಚದ ನಡುಗಡ್ಡೆಗಳಂತಾಗಿವೆ!! ಖಿನ್ನತೆಗೆ ಒಳಗಾದವರನ್ನು ಸಾಮಾಜಿಕ-ಕಾರ್ಯಕರ್ತರು ಆಸ್ಪತ್ರೆಗೆ ಸೇರಿಸುತ್ತಿದ್ದಾರೆ. ಬದುಕಲು ಒಂದಿಷ್ಟು ನೆರವಾಗುತ್ತಿದ್ದಾರೆ. ಆದರೂ ಗೋಳು ಹೇಳತೀರದು.

ಕಾರವಾರ-ಅಂಕೋಲಾ ನಡುವಿನ 23 ಕಿ.ಮೀ. ಕಡಲತಡಿಯ 13 ಗ್ರಾಮ ಸೀಬರ್ಡ್‌ಗಾಗಿ ರಕ್ಷಣಾ ಇಲಾಖೆ ಆಪೋಷನ ಪಡೆದಿದೆ. ಮನೆ-ಜೀವನಾಧಾರ, ಫಲವತ್ತಾದ ಭೂಮಿ, ಮೀನುಗಾರಿಕೆ ಕಳೆದುಕೊಂಡ ಹತ್ತು ಸಾವಿರ ಕುಟುಂಬಗಳು ನಿರ್ಗತಿಕವಾಗಿದೆ. ಈ ಮಂದಿ ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಮೂರು ದಶಕದಿಂದ ಹೋರಾಡುತ್ತಲೇ ಇದ್ದಾರೆ. ರಕ್ಷಣಾ ಇಲಾಖೆ ಇವತ್ತಿಗೂ ಭೂಪರಿಹಾರ ಕೊಡಲು ಮನಸ್ಸು ಮಾಡುತ್ತಿಲ್ಲ; ಕುಟುಂಬಕ್ಕೆ ಒಂದು ಉದ್ಯೋಗ ನೀಡುವ ನಿಯಮವನ್ನು ಬುದ್ಧಿಪೂರ್ವಕವಾಗಿ ಕಡೆಗಣಿಸುತ್ತಿದೆ. ಭೂಪರಿಹಾರ ಪ್ರತಿ ಗುಂಟೆಗೆ 150 ರೂ. ಎಂದು ನಿಗದಿಸಿರುವುದು ಅವೈಜ್ಞಾನಿಕ-ಘೋರ ಅನ್ಯಾಯವೆಂದು ಹೋರಾಟಗಾರರು ಸುಪ್ರೀಂಕೋರ್ಟ್‌ವರೆಗೆ ಹೋದರು. ಸುದೀರ್ಘ ಕಾನೂನು ಹೋರಾಟವೇ ನಡೆಯಿತು.

ಸುಪ್ರೀಂಕೋರ್ಟ್ ಪ್ರತಿ ಗುಂಟೆಗೆ 11,500 ರೂ.ನಂತೆ ಪರಿಹಾರ ಕೊಡುವಂತೆ ರಕ್ಷಣಾ ಇಲಾಖೆಗೆ ಆಜ್ಞೆ ಮಾಡಿತು. 2014 ಜುಲೈನಲ್ಲಿ 179 ನಿರಾಶ್ರಿತರ ಭೂ ಪರಿಹಾರ ಪ್ರಕರಣದ ತೀರ್ಪು ಬಂತು. ಕಾರವಾರ ನ್ಯಾಯಾಲಯದಲ್ಲಿ ಈ 179 ನಿರಾಶ್ರಿತರಿಗೆ ಸೇರಬೇಕಾದ ಒಟ್ಟು 47 ಕೋಟಿ ತುಂಬುವಂತೆ ಸುಪ್ರೀಂಕೋರ್ಟ್ ಖಡಾಖಂಡಿತವಾಗಿ ಆದೇಶ ನೀಡಿತು. ಅಸಹಾಯಕರನ್ನು ಸುಖಾಸುಮ್ಮನೆ ಮೂರು ದಶಕ ಸತಾಯಿಸಿದ ರಕ್ಷಣಾ ಇಲಾಖೆ ಸುಪ್ರೀಂ ಚಾಟಿಗೆ ಬೆದರಿ ಅನಿವಾರ್ಯವಾಗಿ ಕಾರವಾರ ಕೋರ್ಟ್‌ನಲ್ಲಿ 47 ಕೋಟಿ ಪರಿಹಾರ ಭರಣ ಮಾಡಿದೆ. ಆದರೆ ಇನ್ನುಳಿದ ನೂರಾರು ಪ್ರಕರಣಗಳ ವಿಲೇವಾರಿ ಮಾಡದೆ ಮನೆ ಮುರುಕು ಆಟ ಆಡುತ್ತಿದೆ.

ಕೇಂದ್ರ ಸರ್ಕಾರ ಈಗ ಬಡ್ಡಿಸಹಿತ ಪರಿಹಾರ ಕೊಡಬೇಕಾಗಿದೆ. ಒಂದಲ್ಲ ಒಂದು ಸಬೂಬು ಹೇಳಿ ಕಾಲಹರಣ ಮಾಡುತ್ತಿದೆ. ಸೀಬರ್ಡ್ ನಿರಾಶ್ರಿತ ಕಾಲೋನಿ ಮಂದಿ ಪರಿಹಾರಕ್ಕೆ ಕಾದು-ಕಾದು ಹೈರಾಣಾಗಿ ಜೀವ ಬಿಡುತ್ತಿದ್ದಾರೆ. ಒಬ್ಬೊಬ್ಬರೇ ಖಿನ್ನತೆಯಿಂದ ಹಾಸಿಗೆ ಹಿಡಿಯುತ್ತಿದ್ದಾರೆ. ಆದರೆ ಸಚಿವ ದೇಶಪಾಂಡೆ, ಸಂಸದ



ಅನಂತ್ ಹೆಗಡೆ, ಶಾಸಕ ಸತೀಶ್ ಸೈಲ್ ನಿರಾಶ್ರಿತರ ಸಮಸ್ಯೆ ಕಡೆಗಣಿಸಿ ಆರಾಮಾಗಿದ್ದಾರೆ. ನೌಕಾನೆಲೆ ನಿರಾಶ್ರಿತರಿಗೆ ಆಗುತ್ತಿರುವ ಅನ್ಯಾಯ-ಹಿಂಸೆಗೆ ಸಂಸದ ಅನಂತ ಹೆಗಡೆಯೇ ನೇರಾ-ನೇರ ಹೊಣೆ. ನಡುವೆ ಒಂದೈದು ವರ್ಷ ಮ್ಯಾಗ್ಗಿ ಎಂಪಿಯಾಗಿದ್ದು ಬಿಟ್ಟರೆ, 1996 ರಿಂದ ಈ ಅನಂತ್ ಹೆಗಡೆಯೇ ಕೆನರಾ ಕ್ಷೇತ್ರವನ್ನು ಪಾರ್ಲಿಮೆಂಟ್‌ನಲ್ಲಿ ಪ್ರತಿನಿಧಿಸುತ್ತಿದ್ದಾನೆ. ಆದರೆ ಈ ಪುಣ್ಯಾತ್ಮ ಒಂದೇ ಒಂದುಕ್ಷಣ ಸೀಬರ್ಡ್ ನಿರಾಶ್ರಿತರತ್ತ ತಿರುಗಿ ನೋಡಿದ್ದೇ ಇಲ್ಲ; ಯಾವ ಸಮಸ್ಯೆಗೂ ಸ್ಪಂದಿಸಿದ್ದೇ ಇಲ್ಲ!!


ನೌಕಾನೆಲೆ ಕೇಂದ್ರ ರಕ್ಷಣಾ ಇಲಾಖೆಗೆ ಸೇರಿದ್ದು. ಅಂದರೆ ನಿರಾಶ್ರಿತರ ಸಮಸ್ಯೆ ಪರಿಹಾರ ಕೇಂದ್ರ ಸರ್ಕಾರದ ಮಟ್ಟದಲ್ಲಿ ಆಗಬೇಕಷ್ಟೆ. ಇದರ ಹೊಣೆಗಾರಿಕೆ ಸಂಸದ ಅನಂತ್ ಹೆಗಡೆಯದು. ಎಮ್ಮೆಲ್ಲೆ, ರಾಜ್ಯದ ಮಂತ್ರಿಗಳೆಲ್ಲ ತನ್ನೆದುರು ಜುಜುಬಿ; ತಾನು ಕೇಂದ್ರದಲ್ಲಿ ಕುಳಿತು ಶಾಸನ ತಯಾರಿಸುವ ಪ್ರಭೃತಿ ಎಂದು ನಿರ್ಲಜ್ಜವಾಗಿ ಹೇಳುವ ಅನಂತ್ ಹೆಗಡೆಗೆ ಸೀಬರ್ಡ್ ಸಮಸ್ಯೆ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದೆಂದು ಪಾಠ ಹೇಳಬೇಕಾಗಿ ಬಂದಿದೆ. ಸ್ಥಳೀಯ ರಸ್ತೆ, ನೀರು, ಕಾಮಗಾರಿ ಬಗ್ಗೆ ದೂರಿದರೆ ಬೈದಟ್ಟುವ ಸಂಸದ ಅನಂತ್ ಹೆಗಡೆ "…. ಇದೆಲ್ಲಾ ಎಂಪಿ ಕೆಲ್ಸ ಅಲ್ರೀ….. ನಿಮ್ಮ ಎಮ್ಮೆಲ್ಲೆಗೆ ಹೇಳ್ರಿ…." ಎಂದು ದುರಹಂಕಾರದಿಂದ ಹಾರಾಡುತ್ತಾನೆ.


ಹಾಗಂತ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಸೀಬರ್ಡ್ ಸಮಸ್ಯೆ, ಸಿಆರ್‌ಝಡ್ ಸಮಸ್ಯೆ, ಬೆಳವಿಮೆ ಗೊಂದಲ, ಅಡಿಕೆಬೆಲೆ ಕುಸಿತ, ರಾಷ್ಟ್ರೀಯ ಹೆದ್ದಾರಿ ಅವಾಂತರ, ರೈಲು ಯೋಜನೆ, ಪರಿಸರ ಪ್ರಕರಣದಲ್ಲೂ ಈತ ಪ್ರಾಮಾಣಿಕವಾಗಿ ಕರ್ತವ್ಯ ನಿಭಾಯಿಸಿದ್ದೇ ಇಲ್ಲ. ಸೀಬರ್ಡ್ ನಿರಾಶ್ರಿತರಿಗೆ ಸಿಗಬೇಕಾದ ನ್ಯಾಯೋಚಿತ ಭೂಪರಿಹಾರ ಕೊಡಿಸಲು ಅನಂತ ಹೆಗಡೆ ಇನ್ನಾದರೂ ಪ್ರಯತ್ನಿಸಿ ಇಷ್ಟು… ಪಾಪ ಪರಿಹಾರ ಮಾಡಿಕೊಳ್ಳಬೇಕಾಗಿದೆ. ಊರಿಗೆ… ಹಾಕುವ ಕೋಮು ಕಿತಾಪತಿ ಬಿಟ್ಟು ಕ… ನಿಭಾಯಿಸಬೇಕಾಗಿದೆ. ಸೀಬರ್ಡ್ ನಿರಾಶ್ರಿತರ ಕುಟು… ಒಂದು ಉದ್ಯೋಗ ರಕ್ಷಣಾ ಇಲಾಖೆಯಲ್ಲಿ ಕೊ… ಅನಂತ್ ಹೆಗಡೆ ಯೋಚಿಸಬೇಕಿದೆ. ಮಾಜಾ… ಮೀನುಗಾರಿಕಾ ಬಂದರು ಸೀಬರ್ಡ್ ಪ್ರಾಜೆಕ್ಟ್… ಅದು ಮಾಡುವ ಜವಾಬ್ದಾರಿ ಸಂಸದನದು. ಹಾ… 2008ರವರೆಗೆ ನಿರಾಶ್ರಿತರ ಕುಟುಂಬದ ಒಬ್ಬ ವಿದ್ಯಾ… ನೀಡುತ್ತಿದ್ದ ಉಚಿತ ಐಟಿಐ ತರಬೇತಿ ಮತ್ತೆ ಪ್ರಾರಂ… ಜರೂರತ್ತಿರುವುದು ಸಂಸದ ಸಾಹೇಬರಿಗೆ ಗೊತ್ತಿದ…


ಕುಮಟಾದ ಚಿಡ್ಡಿ ವರ್ತಕರಿಬ್ಬರ ಕಳ್ಳ… ಬಚಾಯಿಸಲು ಸರ್ಕಾರಕ್ಕೆ ಕೋಟ್ಯಂತರ ರೂ. ಹಾನಿ… ರಾಷ್ಟ್ರೀಯ ಹೆದ್ದಾರಿ 66ರಕ್ಕೆ ಬೈಪಾಸ್ ಮಾಡಲು… ನೀರು-ಊಟ ಬಿಟ್ಟು ದಿಲ್ಲಿಯಲ್ಲಿ ಕುಳಿತು ಕರಾ… ಮಾಡುವ ಅನಂತ್ ಹೆಗಡೆಗೆ ಸೀಬರ್ಡ್ ನಿರಾಶ್ರಿ… ಯೋಗ್ಯ ಭೂಪರಿಹಾರ-ಪುನರ್ವಸತಿ ಕೊಡಿಸುವ ಕಳ… ಇಲ್ಲದಿರುವುದು ನಾಚಿಕೆಗೇಡು. ಇದೆಂಥ ಕಪಟ ರಾಷ್ಟ್ರ…

ಸಂಸದ ಅನಂತ್ ಹೆಗಡೆ ಸೀಬರ್ಡ್ ನಿರಾ… ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡ… ಕೆಲಸಕ್ಕೆ ಬಾರದ ಕೋಮು ಕ್ರೌರ್ಯಬಿಟ್ಟು ಮನ… ಸಂಸದಗಿರಿಯ ಜವಾಬ್ದಾರಿ ಅರಿಯಬೇಕಿದೆ. ಅ… ಹೆಗಡೆ ಈಗಲೂ ಎಚ್ಚೆತ್ತುಕೊಳ್ಳದಿದ್ದರೆ, ನಿರಾಶ್ರಿ… ನ್ಯಾಯ ಕೊಡಿಸದಿದ್ದರೆ ಸೀಬರ್ಡ್ ನಿರಾಶ್ರಿತ ಕಾ… ಯಲ್ಲಿ ಬೀಳುವ ಒಂದೊಂದು ಕಣ್ಣೀರಿನ ಹನಿಯೂ … ಶಾಪವಾಗಿ ತಟ್ಟುವುದು ಖಂಡಿತ!

■ ವರದಿ…







09 ◀◀

ಸುತ್ತಮುತ್ತಲಿನ ಹಳ್ಳಿಗರ ಕೊಳವೆಬಾವಿಗಳ ನೀರಿನ ಗುಣಮಟ್ಟ ಪರಿಶೀಲಿಸಬೇಕು, ಜನರ ಜೊತೆ ಸೌಹಾರ್ದಯುತವಾಗಿ ಚರ್ಚಿಸಿ ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡುವ ಭರವಸೆ ಮೂಡಿಸಬೇಕು. ಆದರೆ ಜಿಲ್ಲಾಡಳಿತವಾಗಲಿ, ಟೊಂಕಕಟ್ಟಿ ನಿಂತಿದ್ದ ಉಸ್ತುವಾರಿ ಮಂತ್ರಿಯಾಗಲಿ ಇವುಗಳಲ್ಲಿ ಯಾವೊಂದನ್ನೂ ಮಾಡಿರಲಿಲ್ಲ.

ಸೊರಕೆ ಆಶ್ವಾಸನೆಗೆ ಅರ್ಧ'ಚಂದ್ರ'

ಅಧಿಕಾರಿ ಮತ್ತು ಜನಪ್ರತಿನಿಧಿ ವರ್ಗದಿಂದ ನಿರ್ಲಕ್ಷ್ಯ ದಟ್ಟವಾದಷ್ಟೂ ಜನ ತಮ್ಮ ಹೋರಾಟವನ್ನು ಉಗ್ರವಾಗಿಸುತ್ತಾ ಬಂದರು. ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದ್ದ ವೇಳೆ ಮಹಿಳೆಯರು ಮಕ್ಕಳು ಸಮೇತ ಹೋರಾಟಗಾರರು ವಿಧಾನಸೌಧದ ಮುಂದೆ ಪ್ರತಿಭಟನೆ ನಡೆಸಿದರು. ಆಗ ನಗರಾಭಿವೃದ್ಧಿ ಸಚಿವರಾಗಿದ್ದ ವಿನಯ್ ಕುಮಾರ್ ಸೊರಕೆಯವರು ಸ್ಥಳಕ್ಕಾಗಮಿಸಿ ಜನರ ಅಹವಾಲುಗಳನ್ನು ಕೇಳಿಸಿಕೊಂಡು "ಯಾವುದೇ ಕಾರಣಕ್ಕೂ ಅಜ್ಜಗೊಂಡನಹಳ್ಳಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆ ಮಾಡುವುದಿಲ್ಲ" ಅಂತ ಆಶ್ವಾಸನೆ ಕೊಟ್ಟರು. ಆದರೂ ಜನರಲ್ಲಿ ಜಯಚಂದ್ರರ ಆತಂಕ ಇದ್ದೇ ಇತ್ತು. ಕೊನೆಗೆ ಅದರಂತೆಯೇ ಆಯ್ತು.

ಮಿನಿಸ್ಟರ್ ಸೊರಕೆ ಇತ್ತ ಆಶ್ವಾಸನೆ ನೀಡಿ ತಮ್ಮ ಕಚೇರಿ ಸೇರಿಕೊಳ್ಳುತ್ತಿದ್ದಂತೆಯೇ ಜಯಚಂದ್ರ ಅವರನ್ನು ಭೇಟಿ ಮಾಡಿ ಜನರ ಒತ್ತಡಕ್ಕೆ ಮಣಿದು ನಿರ್ಮಿಸಲಾಗುತ್ತಿರುವ ತ್ಯಾಜ್ಯ ಘಟಕ ಕಾಮಗಾರಿ ನಿಲ್ಲಿಸಲು ಸಾಧ್ಯವಿಲ್ಲ ಅಂದರು. ಅಷ್ಟೇ, ಹೋದ ಸ್ಪೀಡಿನಲ್ಲೇ ವಾಪಾಸು ಬಂದ ಸೊರಕೆಯವರು ಸೊರಗಿದ ಮುಖ ಹಾಕಿಕೊಂಡು "ಘಟಕ ನಿರ್ಮಾಣ ನಿಲ್ಲಿಸಲು ಸಾಧ್ಯವಿಲ್ಲ, ಸ್ಥಾಪಿಸಿಯೇ ತೀರುತ್ತೇವೆ" ಅನ್ನೋ ಕಂಠಪಾಠ ಒಪ್ಪಿಸಿ ವಾಪಾಸಾದರು. ಆಮೇಲೆ ಮಧ್ಯಸ್ಥಿಕೆ ವಹಿಸಿಕೊಂಡು ಬಂದ ಜಿಲ್ಲಾ ವರಿಷ್ಠಾಧಿಕಾರಿ ಲಕ್ಷ್ಮಣ್‌ರ "ಸತ್ಯಾಗ್ರಹ ನಿಲ್ಲಿಸಿ ಕಾನೂನು ಹೋರಾಟ ಮಾಡಿ" ಅನ್ನೋ ಬಿಟ್ಟಿ ಸಲಹೆಗೂ ಜನ ಜಗ್ಗಲಿಲ್ಲ.

ಒಂದು ಜೀವವೇ ಹೋಯ್ತು

ಈ ಸಮಸ್ಯೆಯನ್ನು ಸಾಮರಸ್ಯವಾಗಿ ಬಗೆಹರಿಸುವ ಚಕ್ಯತೆಯೇ ಜಿಲ್ಲಾಡಳಿತದ ಯಾವೊಬ್ಬ ಅಧಿಕಾರಿಗೂ ಇಲ್ಲ. ಇಂತಹ ಎಡಬಿಡಂಗಿ… ನಡುವೆ ಒಂದು ಜೀವವೇ ಬಲಿಯಾಗಬೇಕಾಗಿ ಒಂದದ್ದು ಮಾತ್ರ ದುರಂತ.

ಈ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಕಟ್ಟಿಗೇನಹಳ್ಳಿಯ ಯುವಕ ಶಿವಕುಮಾರ್ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿದ್ದರು. ತ್ಯಾಜ್ಯ ಘಟಕ ನಿರ್ಮಾಣಕ್ಕೆಂದು ಅವರ ಸ್ವಂತ ಜಮೀನನ್ನೂ ಜಿಲ್ಲಾಡಳಿತ ಸ್ವಾಧೀನ ಮಾಡಿಕೊಂಡಿತ್ತು. ತಮಗಾದ ಅನ್ಯಾಯದ ವಿರುದ್ಧ ಅಧಿಕಾರಿಗಳು, ಜನಪ್ರತಿನಿಧಿಗಳು ಸೇರಿದಂತೆ 29 ಜನರಿಗೆ ಪತ್ರ ಬರೆದು ಗೋಳು ತೋಡಿಕೊಂಡಿದ್ದರು. ಆದರೆ ಯಾರೊಬ್ಬರೂ ಕ್ಯಾರೆ ಅಂದಿರಲಿಲ್ಲ. ಬೇಸತ್ತ ಆತ ಕೊನೆಗೆ ಆತ್ಮಹತ್ಯೆ ಮಾಡಿಕೊಂಡ. ವಿಷಯ ತಿಳಿಯುತ್ತಿದ್ದಂತೆಯೇ ಜನ ಸಿಟ್ಟಿಗೆದ್ದರು. ಸಮಸ್ಯೆಗೆ ಶಾಶ್ವತ ಪರಿಹಾರ ಕೊಡುವವರೆಗೆ ಶವಸಂಸ್ಕಾರ ಮಾಡುವುದಿಲ್ಲ ಅಂತ ಶವ ಇಟ್ಟುಕೊಂಡು ಪ್ರತಿಭಟಿಸಿದರು. ಅಲ್ಲದೇ ತಮ್ಮ ಊರೊಳಕ್ಕೆ ಪೊಲೀಸರನ್ನು ಬಿಟ್ಟುಕೊಳ್ಳುವುದಿಲ್ಲ ಎಂದು ಅಡ್ಡಗಟ್ಟಿದರು. ಅವತ್ತು ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆದು ಅದು ಗಲಾಟೆಗೆ ತಿರುಗಿಕೊಂಡಿತ್ತು. ಸಂದರ್ಭದ ಗಂಭೀರತೆಯನ್ನು ಅರ್ಥಮಾಡಿಕೊಳ್ಳದೆ, ಪೂರ್ವಸಿದ್ಧತೆಯಿಲ್ಲದೆ ಪೊಲೀಸರು ಬಂದಿದ್ದರಿಂದ ಗಲಾಟೆ ಭುಗಿಲೆದ್ದು ಹಲವು ರೈತರೂ ಸೇರಿದಂತೆ ಪೊಲೀಸ್ ಅಧಿಕಾರಿ ಖಾದರ್ ಮತ್ತು ಇತರರಿಗೆ ಗಾಯಗಳಾಗಿದ್ದವು.

ರೊಚ್ಚಿಗೆದ್ದ ಜನ ಪೊಲೀಸ್ ವಾಹನವನ್ನೇ ಸುಟ್ಟು ಹಾಕಿದ್ದರು. ಕೊನೆಗೆ ರೈತ ಸಂಘದ ಅಧ್ಯಕ್ಷ ಕೋ… ಚಂದ್ರಶೇಖರ್ ಹಳ್ಳಿಗರೊಂದಿಗೆ ರಾಜಿಸಂದಾನ… ಶಿವಕುಮಾರ್ ಅಂತ್ಯಸಂಸ್ಕಾರ ನಡೆಸಬೇಕಾಯ… ಸಂಧಾನದ ಸಮಯದಲ್ಲಿ ಗಲಭೆ ಕುರಿತಂತೆ ಯಾ… ಬಂಧಿಸುವುದಿಲ್ಲ ಅಂತ ಮಾತು ಕೊಟ್ಟಿದ್ದ ಪೊಲೀ… ಅಂತ್ಯಕ್ರಿಯೆ ಮುಗಿಯುತ್ತಿದ್ದಂತೆಯೇ ಸಿಕ್ಕಸಿಕ್ಕವರ… ಕೇಸು ಜಡಿದು ಜೈಲಿಗಟ್ಟಿದರು. ಮುಂಚೂಣಿ ನಾ… ಮೇಲೆ ಹಲವು ಸೆಕ್ಷನ್‌ಗಳಡಿ ಕೇಸು ದಾಖಲಿಸಿದರಾ… ಇದುವರೆವಿಗೂ ಚಾರ್ಜ್‌ಶೀಟ್ ಹಾಕುವಂತಹ… ಸಬೂಬು ಅವರಿಗೆ ಸಿಕ್ಕಿಲ್ಲ. ಆದರೇನಂತೆ ಅವೇ ಕೇ… ನೆಪವಿಟ್ಟುಕೊಂಡು ಜನರನ್ನು ಬೆದರಿಸುತ್ತಿದ್ದಾರೆ.

ಅವತ್ತು ಇದೇ ಜನರ ಪರವಾಗಿ ಪ್ರತಿಭಟನೆ … ಪರಮೇಶ್ವರರೇ ಇವತ್ತು ಗೃಹಮಂತ್ರಿ. ಪೊಲೀಸ್ ಇಲಾ… ಅವರದ್ದು. ಹೋರಾಟಗಾರರ ಮೇಲಿನ ಖೊಟ್ಟಿ ಕೇಸು… ತೆಗೆದುಹಾಕುವಂತೆ ಅವರ ಬಳಿ ಹಲವು ಬಾರಿ … ಮಾಡಿಕೊಂಡಿದ್ದಾರೆ. ಆದರೆ ಸಾಹೇಬರು ಆಶ್ವಾಸನೆಯ… ಬಿಟ್ಟು ಇಂಚು ಕೂಡಾ ಕದಲುತ್ತಿಲ್ಲ. ಅದಕ್ಕೂ ಜಯ… ದರ್ಬಾರೇ ಕಾರಣ ಎನ್ನಲಾಗುತ್ತಿದೆ.

■ ಅನಿಲ್ ಕುಮ…

ಗುಜರಾತ್ ದಲಿತರ ಮುಗಿಯದ ತಲ್ಲಣ

ಅದೊಂದು ವಿಡಿಯೋ. ಆ ವಿಡಿಯೋದಲ್ಲಿ ಒಂದು ಜೀಪ್, ಆಟೋ ಇದೆ. ಅದರ ಮುಂದೆ ನಾಲ್ವರು ಯುವಕರನ್ನು ಬಟ್ಟೆ ಬಿಚ್ಚಿ ಕೂರಿಸಲಾಗಿದೆ. ಆಟೋದಲ್ಲಿ ತುಂಬಿರುವ ದನದ ಮಾಂಸ... ಪಕ್ಕದಲ್ಲಿ ಬಿದ್ದಿರುವ ಸತ್ತ ದನದ ಮೂಳೆಗಳು... ದನದ ಕಳೇಬರ... ಆಗಷ್ಟೆ ತೆಗೆದ ಚರ್ಮ... ನಡುನಡುವೆ ಆ ನಾಲ್ವರು ಯುವಕರನ್ನು ನಮಗೆ ಅರ್ಥವಾಗದ ಭಾಷೆಯಲ್ಲಿ ಬೈಯಲಾಗುತ್ತಿದೆ... ಆ ಯುವಕರು ತಪ್ಪಾಯ್ತು ಕ್ಷಮಿಸಿ ಎನ್ನುವಂತೆ ಅಂಗಲಾಚುತ್ತಿದ್ದಾರೆ... ಹಾಗೆ ಅಂಗಲಾಚುತ್ತಿರುವವರ ಮೇಲೆ ಕಬ್ಬಿಣದ ರಾಡು ಹಿಡಿದ ಯುವಕನೊಬ್ಬ ಮನಬಂದಂತೆ ಹಲ್ಲೆ ನಡೆಸುತ್ತಿದ್ದಾನೆ... ಏಟು ತಿಂದ ಆ ನಾಲ್ವರಲ್ಲೊಬ್ಬ ಅಲ್ಲೇ ಕುಸಿದುಬೀಳುತ್ತಾನೆ... ಉಳಿದವರು 'ಯಾರಾದರೂ ಕಾಪಾಡಿ' ಎಂದು ಗೋಗರೆಯುತ್ತಾರೆ... ಹಾಗೆ ಮುಂದುವರಿದ ಆ ವಿಡಿಯೋದಲ್ಲಿ ಆ ನಾಲ್ವರು ಯುವಕರನ್ನು ಪಟ್ಟಣದ ಬೀದಿಯೊಂದಕ್ಕೆ ಕೈ ಕಟ್ಟಿ ಎಳೆದು ತರಲಾಗುತ್ತದೆ... ಜೀಪ್ ಒಂದರ ಹಿಂದೆ ಆ ನಾಲ್ವರನ್ನು ಕಟ್ಟಿ ಅಲ್ಲಿಯೂ ಸಾರ್ವಜನಿಕರ ಮುಂದೆ ಮನಸೋಇಚ್ಛೆ ಥಳಿಸಲಾಗುತ್ತದೆ... ಕಬ್ಬಿಣದ ರಾಡುಗಳಿಂದ ಏಟು ತಿಂದ ಆ ನಾಲ್ವರು ಯುವಕರು ಅಲ್ಲಿಯೂ ಅಷ್ಟೇ 'ಕಾಪಾಡಿ, ಕಾಪಾಡಿ' ಎಂದು ಅರಚುತ್ತಾರೆ... ಕಾಪಾಡಲು ಯಾರೂ ಇಲ್ಲ!

ಕ್ಷಮಿಸಿ, ಇದು ಯಾವುದೋ ಸಿನಿಮಾದ ಯೂಟ್ಯೂಬ್‌ನಲ್ಲಿ ಪ್ರಸಾರವಾದ ತುಣುಕಲ್ಲ. ಗುಜರಾತ್‌ನಲ್ಲಿ ಕಳೆದ ಜುಲೈ 11 ರಂದು ಗಿರ್ ಜಿಲ್ಲೆಯ ಉನಾ ತಾಲ್ಲೂಕಿನ ಮೋಟಾ ಸಮಾಧಿಯಾಲ ಗ್ರಾಮದಲ್ಲಿ ಗೋರಕ್ಷಕರಿಂದ ಹೀಗೆ ಭೀಕರವಾಗಿ ಹಲ್ಲೆಗೊಳಗಾದ ದಲಿತ ಯುವಕರ ದೃಶ್ಯದ ವಿಡಿಯೋ ಇದು. ಸತ್ತ ಹಸುವಿನ ಚರ್ಮ ಸುಲಿಯುತ್ತಿದ್ದ ಆ ನಾಲ್ವರು ದಲಿತ ಯುವಕರ ಮೇಲೆ ಗೋಹತ್ಯೆ ಆರೋಪ ಹೊರಿಸಿ ಶಿವಸೇನೆ ಕಾರ್ಯಕರ್ತರು ಅಲಿಯಾಸ್ ಗೋರಕ್ಷಕರು ಮೇಲೆ ಹೇಳಿದಂತೆ ಭೀಭತ್ಸವಾಗಿ ಥಳಿಸಿದ್ದರು. ಥಳಿಸಿದ್ದಲ್ಲದೆ ಅದನ್ನು ವಿಡಿಯೋ ಮಾಡಿ ಫೇಸ್‌ಬುಕ್‌ಗೂ ಅಪ್‌ಲೋಡ್ ಮಾಡಿದ್ದರು ಆ ಗೋರಕ್ಷಕ ಮಹಾಶಯರು. ಮುಂದೆ ಯಾವ ಬೇರೆ ದಲಿತರು ಅದನ್ನು ನೋಡಿ ಗೋಹತ್ಯೆ ಮಾಡದಿರಲಿ ಎಂಬಂತೆ!

ಖಂಡಿತ, ಇಂಥ ಘಟನೆ, ಅದು ನಡೆದಿರುವ ರೀತಿ ನೋಡಿದರೆ ಎಂಥವರಿಗಾದರೂ ಮೈ ಜುಂ ಎನ್ನದಿರದು. ಹಾಗೆ ಅದು ಬರೀ ಗೋಹತ್ಯೆಯ ಆರೋಪದ ಮೇಲಿನ ಥಳಿಸಿದಂತೆಯೂ ಕಾಣುವುದಿಲ್ಲ. ಶತಮಾನಗಳ ದಲಿತರ ಮೇಲಿನ ದ್ವೇಷವನ್ನು ಒಮ್ಮೆಲೇ ತೀರಿಸಿಕೊಂಡಂತೆ ಅದು ಭಾಸವಾಗುತ್ತದೆ. ಅಲ್ಲದೆ ಗುಜರಾತ್‌ನಂತಹ ಮೋದಿ ಪ್ರಣೀತ ಹಿಂದೂತ್ವ ಹೊಂದಿರುವ ರಾಜ್ಯದಲ್ಲಿ ದಲಿತರ ಮೇಲಿನ ಮನೋಭಾವದ ಪ್ರತೀಕವಾಗಿಯೂ ದಿಗ್ದರ್ಶನವಾಗಿಯೂ ಇದು ನಮ್ಮ ಕಣ್ಣಮುಂದೆ ತೆರೆಯಲ್ಪಡುತ್ತದೆ. ಯಾಕೆಂದರೆ ಗೋಹತ್ಯೆ ಮಾಡುವವರನ್ನು, ಗೋವಿನ ಚರ್ಮ ಸುಲಿಯುವವರನ್ನು ಬಟ್ಟೆ ಬಿಚ್ಚಿ ಕೈಕಟ್ಟಿ ಹಾಕಿ, ಕಬ್ಬಿಣದ ರಾಡುಗಳಿಂದ ಥಳಿಸಿ ಎಂದು ನಮ್ಮ ಸಂವಿಧಾನ ಹೇಳುತ್ತದೆಯೇ? ಕಾನೂನು ಹೇಳುತ್ತದೆಯೇ? ಖಂಡಿತ ಇಲ್ಲ. ಆದರೆ ಹೀಗೆ ಮಾಡಲಾಗುತ್ತದೆಯೆಂದರೆ? ಇದು ದಲಿತರ ಮೇಲಿನ ದ್ವೇಷದ ಫಲಿತವಲ್ಲದೆ, ಅಸ್ಪೃಶ್ಯತೆಯ ವಸ್ತುನಿಷ್ಠ ಆಚರಣೆಯಲ್ಲದೆ ಮತ್ತೇನಾಗುತ್ತದೆ? ಅಂದಹಾಗೆ ಇದು ಕಾನೂನಿನ ಭಯದ ಲವಲೇಶವೂ ಇಲ್ಲದೆ ನಡೆಸಿದ ಭೀಕರ ಹಲ್ಲೆಯೂ ಆಗುತ್ತದೆ. ಅದರಲ್ಲೂ ಅಂತಹ ಹಲ್ಲೆಗೆ ಬೆಂಬಲಿಸುವ ಸರ್ಕಾರವೇ, ವ್ಯವಸ್ಥೆಯೇ ನಮ್ಮ ಸುತ್ತಮುತ್ತಲೂ ಇದೆ. ಗುಜರಾತ್‌ನ ರಾಜಧಾನಿ ಅಹಮದಾಬಾದ್‌ನಿಂದ



ದೆಹಲಿಯವರೆಗೆ ಇದೆ ಎಂದಾಗ ಇಂತಹ ಹಲ್ಲೆ ನಡೆದೇ ನಡೆಯುತ್ತದೆ. ಹೀಗೆ ಹಲ್ಲೆ ಭೀಕರವಾಗಿ ಸತತ 4 ಗಂಟೆ ನಡೆದಿವೆ! ಉನಾ ಪಟ್ಟಣದ ಮಧ್ಯದಲ್ಲಿಯೇ ಇದು ನಡೆದಿದೆ!! ಇದರರ್ಥ ಪೊಲೀಸರ ಗಮನಕ್ಕೆ ಇದು ಬಂದೇ ಇದೆ. ಆದರೂ ಯಾವುದೇ ಕ್ರಮ ಜರುಗಿಸಲಾಗಿಲ್ಲ, ಹಲ್ಲೆ ತಡೆಯಲಾಗಿಲ್ಲ ಎಂದರೆ ಸರ್ಕಾರಿ ಕೃಪಾಪೋಷಿತ ಹಲ್ಲೆ ಇದು ಎಂಬುದು ಸ್ಪಷ್ಟ.

ದುರಂತವೆಂದರೆ ಇಂತಹ ಅಮಾನವೀಯ ಹಲ್ಲೆಯ ವಿರುದ್ಧ ನ್ಯಾಯಯುತವಾಗಿ ಪ್ರತಿಭಟಿಸುವ ಶಕ್ತಿಯನ್ನೆ ಇಂದು ಗುಜರಾತಿನ ದಲಿತರು ಕಳೆದುಕೊಂಡಿದ್ದಾರೆ ಅಥವ ಕಳೆದುಕೊಳ್ಳುವಂತೆ ಮಾಡಲಾಗಿದೆ. ಯಾಕೆಂದರೆ ಘಟನೆಯ ವಿಡಿಯೊ ವೈರಲ್ ಆಗುತ್ತಲೇ ದಲಿತರು ಬೀದಿಗಿಳಿದರು, ಹೆದ್ದಾರಿ ಬಂದ್ ಮಾಡಿದರು, ಕಲ್ಲುತೂರಾಟ ನಡೆಸಿ ಪೊಲೀಸ್ ಕಾನ್‌ಸ್ಟೇಬಲ್ ಒಬ್ಬನ ಸಾವಿಗೂ ಕಾರಣರಾದರು. ಆದರೆ ಮುಂದೆ ಘಟನೆಯ ವಿರುದ್ಧ ಹೀಗೆಯೇ ಪ್ರತಿಭಟಿಸಿದರೆ ಎಲ್ಲಿ ಸರ್ಕಾರ ತಮ್ಮ ಮೇಲೆ ಪೊಲೀಸರ ಮೂಲಕ ದಬ್ಬಾಳಿಕೆ ನಡೆಸುತ್ತದೆ ಎಂದು ಹೆದರಿದ ದಲಿತರು ಪರ್ಯಾಯ ಮಾರ್ಗವಾಗಿ ಬೇರೆ ದಾರಿ ಕಾಣದೆ ಆತ್ಮಹತ್ಯೆಯ ಹಾದಿ ಹಿಡಿದರು. ಒಬ್ಬಿಬ್ಬರಲ್ಲ ಬರೋಬ್ಬರಿ 20 ಜನ ದಲಿತರು ಕೀಟನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು ಮತ್ತು ಹೀಗೆ ಆತ್ಮಹತ್ಯೆಗೆ ಯತ್ನಿಸಿದವರಲ್ಲಿ ಹೇಮಂತ್ ಸೋಳಂಕಿ ಎಂಬುವವರು ಸಾವಿಗೂ ಶರಣಾದರು. ಇದರಿಂದ ಅರ್ಥವಾಗುವುದೆಂದರೆ ಗುಜರಾತಿನ ದಲಿತರು ತಲುಪಿರುವ ಅಸಹಾಯಕ ಪರಿಸ್ಥಿತಿ ಎಂತಹದ್ದು ಎಂಬುದು. ತಮಗೆ ಯಾರೂ ಸಹಾಯಕ್ಕೆ ಬರುವುದಿಲ್ಲ, ತಮ್ಮ ಪರವಾಗಿ ಯಾರೂ ಇಲ್ಲ ಎಂಬ ದಯನೀಯ ಸ್ಥಿತಿ ಅದು. ದಯನೀಯ ಸ್ಥಿತಿ... ಇದು ಕಲ್ಪನೆಯಲ್ಲ, ವಾಸ್ತವ! ಯಾಕೆಂದರೆ ಸ್ವತಃ ಅವರದೇ ರಾಜ್ಯದ ಈ ದೇಶದ ಪ್ರಧಾನಿ ಮಂತ್ರಿ ನರೇಂದ್ರ ಮೋದಿಯವರು ಅವರ ಬೆಂಬಲಕ್ಕೆ ಬರುವುದು ಬೇಡ, ಕಡೇಪಕ್ಷ ಘಟನೆಗೆ ವಿಷಾದ ವ್ಯಕ್ತಪಡಿಸಿಲಿಲ್ಲವೆಂದರೆ... ಈ ನಿಟ್ಟಿನಲ್ಲಿ ತಮ್ಮ ರಾಜ್ಯದಲ್ಲಿ ಇಷ್ಟೆಲ್ಲ ಆಗುತ್ತಿದ್ದರೂ ಅದು ಪ್ರಧಾನಿ ಮೋದಿಯವರ ಗಮನಕ್ಕೆ ಬಂದಿಲ್ಲ ಎಂದೇ? ಅಥವ ಫೇಸ್‌ಬುಕ್‌ನಲ್ಲಿರುವ ಆ ವಿಡಿಯೋವನ್ನು ಮೋದಿಯವರು ನೋಡಿಲ್ಲ ಎಂದೇ? ಖಂಡಿತ, ನೋಡಿಲ್ಲ ಎಂದರೆ, ಗಮನಕ್ಕೆ ಬಂದಿಲ್ಲ ಎಂದರೆ ಅದನ್ನು ನಂಬಲು ಸಾಧ್ಯವಿಲ್ಲ; ಸದಾ ಸೋಷಿಯಲ್ ಮಿಡಿಯಾಗಳಲ್ಲೇ ಹೆಚ್ಚು ಸಕ್ರಿಯರಾಗಿರುವ ಪ್ರಧಾನಿಗಳಿಗೆ ತಮ್ಮ ರಾಜ್ಯದಲ್ಲಿ ನಡೆದಿರುವ ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಆಗಿರುವ ದಲಿತರ ಮೇಲಿನ ಭೀಕರ ಹಲ್ಲೆಯ ದೃಶ್ಯ ಗಮನಕ್ಕೆ ಬಂದೇ ಬಂದಿರುತ್ತದೆ.

ಆಶ್ಚರ್ಯವೆಂದರೆ ಗುಜರಾತ್ ಸರ್ಕಾರ ಕೂಡ ಈ ಘಟನೆಯ ಬಗ್ಗೆ ಘಟನೆ ನಡೆದು 10 ದಿನವಾದರೂ ಕೂಡ ಯಾವುದೇ ಕ್ರಮಕ್ಕೆ ಮುಂದಾಗಿರಲಿಲ್ಲ, ಇದೊಂದು ಸಹಜ ಘಟನೆ ಎಂಬಂತೆ ಇತ್ತು! ಆದರೆ ಘಟನೆಯನ್ನು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಬಿಎಸ್‌ಪಿ ನಾಯಕಿ ಮಾಯಾವತಿಯವರು ಪ್ರಸ್ತಾಪಿಸುತ್ತಲೇ ಗುಜರಾತ್ ಸಿಎಂ ಆನಂದಿಬೆನ್ ಪಟೇಲ್ ಎಚ್ಚೆತ್ತುಕೊಂಡರು! ಯಥಾಪ್ರಕಾರ ದಲಿತರ ಮೇಲಿನ ಹಲ್ಲೆಯನ್ನು ತಮ್ಮ ಹಣದಲ್ಲಿ ಅಳೆದ ಆನಂದಿಬೆನ್ ಪಟೇಲ್ ಪರಿಹಾರವನ್ನು ಒಂದು ಲಕ್ಷದಿಂದ ನಾಲ್ಕು ಲಕ್ಷಕ್ಕೆ ಏರಿಸಿದರು. ಈ ನಡುವೆ ಸ್ವಾಭಿಮಾನಿ ದಲಿತರು ತಮ್ಮ ಪ್ರತಿಭಟನೆಯ ರೀತಿಯನ್ನು ವಿನೂತನ ಮಾದರಿಗೆ ಬದಲಿಸಿ ಸತ್ತ ದನಗಳ ಶವಗಳನ್ನು ತೆಗೆಯುವುದಿಲ್ಲ ಎಂದು ನಿರ್ಧರಿಸಿ ಸುಮಾರು ಒಂದು ಲಾರಿ ಸತ್ತ ದನಗಳ ಶವಗಳನ್ನು ತಂದು ಗುಜರಾತಿನ ಸುರೇಂದ್ರನಗರ ಜಿಲ್ಲಾಧಿಕಾರಿಯ ಕಚೇರಿಯ ಮುಂದೆ ಸುರಿದರು. ಮುಂದುವರೆದು ಜುಲೈ 20 ರಂದು ಗುಜರಾತ್ ಬಂದ್ ನಡೆಸಿ ಜುಲೈ 25ರಂದು ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳ ಕಚೇರಿಗಳ ಮುಂದೆ 'ಮೌನ ನಿಲ್ಲುವಿಕೆ' ಪ್ರತಿಭಟನೆಯನ್ನೂ ದಲಿತರು ನಡೆಸಿದರು. ಅಂತೆಯೇ ಇದರ ಭಾಗವಾಗಿ ದಲಿತರು ಗುಜರಾತಿನ ಉದ್ದಗಲಕ್ಕೂ ರಸ್ತೆಗಳ ಮಧ್ಯೆ ಸತ್ತ ದನಗಳ ಶವ ಸುರಿದು ಹಿಂದೂಗಳ ಗೋವಿನ ಪ್ರೀತಿ ಪರೀಕ್ಷಿಸಿದರು. ಖಂಡಿತ, ಯಾವ ಗೋರಕ್ಷಕನೂ ಗೋಮಾತೆ ಪೂಜಕನೂ ಸತ್ತ ಆ ದನಗಳ ಶವ ತೆಗೆದು ತಮ್ಮ ಗೋಪ್ರೀತಿ ಮೆರೆಯಲಿಲ್ಲ!


ಈ ನಡುವೆ ಕಳೆದ ಜುಲೈ 31ರಂದು ಗುಜರಾತಿನ ರಾಜಧಾನಿ ಅಹಮದಾಬಾದ್‌ನಲ್ಲಿ ದಲಿತರು 'ಮಹಾ ಸಮ್ಮೇಳನ' ಹೆಸರಿನಲ್ಲಿ ಬೃಹತ್ ಸಮಾವೇಶ ನಡೆಸಿ ಇಡೀ ಜಗತ್ತಿಗೆ ತಮ್ಮ ಶಕ್ತಿ ತೋರಿಸಿದ್ದಾರೆ. ಈ ಸಮಾವೇಶದಲ್ಲಿ 25 ಸಾವಿರಕ್ಕೂ ಹೆಚ್ಚು ದಲಿತರು ಒಟ್ಟಾಗಿ "ತಾವು ಇನ್ನೆಂದೂ ಸತ್ತ ಪ್ರಾಣಿಗಳ ಶವ ತೆಗೆಯುವುದಿಲ್ಲ" ಎಂಬ ಅಭೂತಪೂರ್ವ, ಕೆಚ್ಚೆದೆಯ ಪ್ರತಿಜ್ಞೆ ಸ್ವೀಕರಿಸಿದ್ದಾರೆ. ತಮಗೆ ಪರ್ಯಾಯ ಉದ್ಯೋಗವನ್ನು ಒದಗಿಸಿಕೊಡಬೇಕೆಂದು ಕೂಡ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ. ಈ ಸಂಬಂಧ ಮುಂದಿನ ಹಂತವಾಗಿ ಆಗಸ್ಟ್ 5ರಿಂದ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯವರೆಗೆ ಅಹಮದಾಬಾದ್‌ನಿಂದ ಉನಾದವರೆಗೆ ಪಾದಯಾತ್ರೆ ನಡೆಸಲೂ ಅವರು ನಿರ್ಧರಿಸಿದ್ದಾರೆ. ದುರಂತವೆಂದರೆ ಈ ಸಮಾವೇಶ ನಡೆದ ದಿನವೇ ಆತ್ಮಹತ್ಯೆಗೆ ಯತ್ನಿಸಿದ್ದ 20 ದಲಿತರಲ್ಲಿ ಹರಿಭಾಯ್ ಸೋಳಂಕಿ ಅಸುನೀಗಿರುವುದು...


ಈ ನಿಟ್ಟಿನಲ್ಲಿ ಹೇಳುವುದಾದರೆ ಗುಜರಾತ್‌ನಲ್ಲೀಗ ದಲಿತರ ಸ್ಥಿತಿ ಬಹಳ ಶೋಚನೀಯದ್ದು ಎಂಬುದು. 2001ರಲ್ಲಿ ಗೋಧ್ರೋತ್ತರ ಗಲಭೆಯಲ್ಲಿ ಮುಸ್ಲಿಮರು ಅಪಾರ ನಷ್ಟ ಅನುಭವಿಸಿದ ನಂತರ ಮುಂದಿನ ಸರದಿ ದಲಿತರದ್ದು ಎಂಬಂತೆ ಈಗಿನ ಬೆಳವಣಿಗೆಗಳು ಘಟಿಸುತ್ತಿವೆ. ಇದಕ್ಕೆ ಪುಷ್ಟಿ ನೀಡುವಂತೆ ಕೇಂದ್ರ ಸಾಮಾಜಿಕ ನ್ಯಾಯ ಇಲಾಖೆ ಬಿಡುಗಡೆಗೊಳಿಸಿರುವ ಅಂಕಿಅಂಶಗಳನ್ನೆ ಇಲ್ಲಿ ದಾಖಲಿಸುವುದಾದರೆ ಕಳೆದ ವರ್ಷ ಅಂದರೆ 2015ರಲ್ಲಿ ಗುಜರಾತ್‌ನಲ್ಲಿ ದಲಿತರ ಮೇಲಿನ ಹಲ್ಲೆ ಐದು ಪಟ್ಟು ಹೆಚ್ಚಾಗಿದೆ. ಅಂದರೆ 2015ರಲ್ಲಿ ಗುಜರಾತ್‌ನಲ್ಲಿ ಪ್ರತೀ ಒಂದು ಲಕ್ಷ ದಲಿತರಿಗೆ 163 ಪ್ರಕರಣಗಳು ಎಂಬಂತೆ ದೌರ್ಜನ್ಯ ದಲಿತರ ಮೇಲೆ ನಡೆದಿವೆ. ಹಾಗೆಯೇ ದೌರ್ಜನ್ಯ ಪ್ರಕರಣಗಳ ರಾಷ್ಟ್ರೀಯ ಸರಾಸರಿಯಲ್ಲಿಯೂ ಅಷ್ಟೆ, 2015ರಲ್ಲಿ ಇಡೀ ದೇಶದಲ್ಲಿಯೇ ಗುಜರಾತ್‌ನಲ್ಲಿ ದಲಿತರ ಮೇಲಿನ ದೌರ್ಜನ್ಯದ ಸರಾಸರಿ ಅತಿಹೆಚ್ಚು. ಸ್ಪಷ್ಟ ಸಂಖ್ಯೆಯನ್ನೇ ಇಲ್ಲಿ ಉಲ್ಲೇಖಿಸುವುದಾದರೆ 2015ರಲ್ಲಿ ಗುಜರಾತ್‌ನಲ್ಲಿ ನಡದಿರುವ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ 6665. ಹಾಗೆಯೇ ಇದರ ನಂತರದ ಸ್ಥಾನ ಬಿಜೆಪಿ ಆಳ್ವಿಕೆ ಇರುವ ಮತ್ತೊಂದು ರಾಜ್ಯ ಛತ್ತೀಸಗಢ! ಈ ನಿಟ್ಟಿನಲ್ಲಿ ಹೇಳುವುದಾದರೆ ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳಲ್ಲಿ ಸಾಮಾಜಿಕ ಭಯೋತ್ಪಾದನೆ ತಾರಕಕ್ಕೇರಿರುವುದು ಸ್ಪಷ್ಟ.

ದುರಂತವೆಂದರೆ ತಮ್ಮ ಮಾತೃ ರಾಜ್ಯ ಇಷ್ಟೆಲ್ಲ ಹೊತ್ತು ಉರಿಯುತ್ತಿದ್ದರೂ ಪ್ರಧಾನಿ ಮೋದಿ ತಮ್ಮ ಮನದ ಮಾತಾಡಿಲ್ಲ, ಪಾರ್ಲಿಮೆಂಟ್ ಇರಲಿ, ಕಡೇ ಪಕ್ಷ ತಮ್ಮ ಕಳೆದ ಜುಲೈ 31ರಂದು ಪ್ರಸಾರವಾದ ಪ್ರತೀ ತಿಂಗಳ ರೇಡಿಯೋ ಕಾರ್ಯಕ್ರಮ 'ಮನ್ ಕೀ ಬಾತ್'ನಲ್ಲಾದರೂ ಪ್ರಧಾನಿ ಗುಜರಾತ್ ಘಟನೆ ಪ್ರಸ್ತಾಪಿಸುತ್ತಾರೆ, ತಮ್ಮ ವಿಷಾದ ವ್ಯಕ್ತಪಡಿಸುತ್ತಾರೆ ಎಂದು ದಲಿತರು ಕಾದಿದ್ದೇ ಕಾದಿದ್ದು. ಆದರೆ ಪ್ರಧಾನಿ ಬಾಯ್ದೆರೆಯಲಿಲ್ಲ. ಬದಲಿಗೆ 'ಆಂಟಿಬಯಾಟಿಕ್ ಬಳಕೆಯ ದುಷ್ಪರಿಣಾಮದ ಬಗ್ಗೆ', 'ಗರ್ಭಿಣಿಯರಿಗೆ ಧರ್ಮಾರ್ಥ ಪರೀಕ್ಷೆಯ ಬಗ್ಗೆ' ಅವರು ದೇಶದ ಜನತೆಗೆ ತಿಳಿವಳಿಕೆ ಹೇಳಿದರಾದರೂ ಗುಜರಾತ್‌ನಲ್ಲಿ ನಡೆದ ಸಾಮಾಜಿಕ ಭಯೋತ್ಪಾದನೆಯ ಬಗ್ಗೆ ತುಟಿಪಿಟಿಕ್ಕೆನ್ನಲಿಲ್ಲ. ಮೋದಿಯವರ ಈ ನಡೆ ಈ ದೇಶದ ದಲಿತರಿಗೆ ನೈತಿಕಸ್ಥೈರ್ಯ ತುಂಬುತ್ತದೆಯೇ? ಇಲ್ಲ. ಬದಲಿಗೆ 'ನಾನು ನಿಮ್ಮ ರಕ್ಷಣೆಗೆ ಇಲ್ಲ' ಎಂಬ ಪರೋಕ್ಷ ಸಂದೇಶ ಸಾರುವ ಅಪಾಯ ಉಂಟಾಗಿದೆ. ಇರಬಹುದು, ಈ ಎಲ್ಲ ಘಟನೆಗಳ ಒತ್ತಡದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಆನಂದಿಬೆನ್ ಪಟೇಲ್ ರಾಜೀನಾಮೆ ನೀಡಿದ್ದಾರೆ. ಆದರೆ ನೈತಿಕ ಹೊಣೆ ಹೊತ್ತು ನಿಜಕ್ಕೂ ರಾಜೀನಾಮೆ ನೀಡಬೇಕಾದ್ದು? ಗುಜರಾತ್ ಇಂದು ದಲಿತರ ಪಾಲಿನ ನರಕದ ಪ್ರಯೋಗಶಾಲೆಯಾಗಿದೆ. 'ಗುಜರಾತ್ ಮಾದರಿ' ಎಂದು ನೆನೆಸಿಕೊಂಡರೇನೆ ಭಯವಾಗುತ್ತದೆ. ವಿಶೇಷವಾಗಿ ದಲಿತರಿಗೆ. ಯಾಕೆಂದರೆ ಕಣ್ಣಮುಂದೆ ಕಾಣುವ ಆ ಅಮಾಯಕ ದಲಿತರ ನೋವು, ಚೀತ್ಕಾರ, ಅವರಿಗೆ ಥಳಿಸುತ್ತಿದ್ದವರ ಆ ಅಮಾನವೀಯ ವರ್ತನೆ, ಹೋರಾಟದ ಮಾರ್ಗದಲ್ಲಿ ಗುಜರಾತಿನ ದಲಿತರು ಸಾಗಬೇಕಾದ ಹಾದಿ ಬಹಳ ದುರ್ಗಮವಿದೆ. ಅವರ ಸಹಾಯಕ್ಕೆ ಇಡೀ ದೇಶದ ದಲಿತರು ಬರಬೇಕಾದ ತುರ್ತಿನ ಅಗತ್ಯ ಸದ್ಯ ನಮ್ಮ ಮುಂದಿದೆ. ಈ ದಿಸೆಯಲ್ಲಿ ಶೋಷಿತ ಸಮುದಾಯ ಚಿಂತಿಸಲಿ; ಹೋರಾಟದ ಹೊಸ ಸಾಗರವಾಗಲಿ ಎಂಬುದೇ ಸದ್ಯದ ಕಳಕಳಿ.

■ ರಘೋತ್ತಮ ಹೊ.ಬ

ಸ್ವಾತಂತ್ರ್ಯ ದಿನಾಚರಣೆ ಪ್ರಧಾನ ಮಂತ್ರಿಯವರಿಂದ ಜನ ಏನನ್ನು ಕೇಳಬಯಸುತ್ತಾರೆ?





ಆಗಸ್ಟ್ 15 ರಂದು ಭಾರತ ಸ್ವಾತಂತ್ರ್ಯದ ದಿನಾಚರಣೆಯ ಸಂದರ್ಭದಲ್ಲಿ ಪ್ರಜೆಗಳನ್ನು ಉದ್ದೇಶಿಸಿ ತಾನು ಮಾಡಲಿರುವ ಭಾಷಣ ಕುರಿತು ಪ್ರಧಾನ ಮಂತ್ರಿಯವರು ಪ್ರಜೆಗಳಿಂದಲೇ ಸಲಹೆಗಳನ್ನು ಆಹ್ವಾನಿಸಿದ್ದಾರೆ. ಅಂಗೈ ಹುಣ್ಣು ನೋಡಲು ಕನ್ನಡಿ ಬೇಕೆ? ಪ್ರಜೆಗಳ ಕಷ್ಟಗಳೇನು? ಸರಕಾರದಿಂದ ಅವರು ಏನು ನಿರೀಕ್ಷಿಸುತ್ತಿದ್ದಾರೆ? ಎಂಬುದು ಪ್ರಧಾನ ಮಂತ್ರಿಯವರಿಗೆ ಗೊತ್ತಿಲ್ಲವೆ? ಅಥವಾ ಗೊತ್ತಿಲ್ಲದವರ ಹಾಗೆ ಅವರು ನಟಿಸುತ್ತಿದ್ದಾರೆಯೆ? 2014 ರ ಮೇ ತಿಂಗಳಲ್ಲಿ ಅವರು ಅಧಿಕಾರ ವಹಿಸಿ ಕೊಂಡಂದಿನಿಂದ, ಇಂದಿನವರೆಗೆ ಪ್ರಧಾನಮಂತ್ರಿ ದೇಶದ ಯಾವ ಮಹತ್ವದ ವಿದ್ಯಮಾನದ ಬಗ್ಗೆಯೂ ತಮ್ಮ ಮೌನ ಮುರಿದಿಲ್ಲ ಎಂಬುದನ್ನು ಗಮನಿಸಿದರೆ ಒಂದೋ ಅವರು ಮತ್ತು ದೇಶದ ಆಗುಹೋಗುಗಳ ಬಗ್ಗೆ ಏನೂ ಗೊತ್ತಿಲ್ಲದವರಂತೆ ನಾಟಕವಾಡುತ್ತಿದ್ದಾರೆ. ಇಲ್ಲ ಅವು ಆಳುವ ಪಕ್ಷದ ಅಜೆಂಡಾ ಪ್ರಕಾರವೇ ಸಂಭವಿಸಿವೆ. ಪ್ರಧಾನ ಮಂತ್ರಿಯವರು ತನ್ನ ಸ್ವಾತಂತ್ರ್ಯ ದಿನದ ಭಾಷಣಕ್ಕೆ ಪ್ರಜೆಗಳಿಂದ ಸಲಹೆಗಳನ್ನು ಆಹ್ವಾನಿಸಿರುವುದು ಕೇವಲ ಪ್ರಚಾರತಂತ್ರವಷ್ಟೇ ಆಗಿದ್ದು ಪ್ರಜೆಗಳ ಸಲಹೆಗಳೆಲ್ಲ ಅವರ ಕಸದ ಬುಟ್ಟಿ ಸೇರುವುದು ನಿಶ್ಚಯವೆಂಬಂತೆ ಕಾಣುತ್ತದೆ. ಆದರೆ ಭಾರತ ತೋರಿಕೆಯ ಮಟ್ಟಿಗಾದರೂ ಒಂದು ಪ್ರಜಾಪ್ರಭುತ್ವವಾಗಿರುವುದರಿಂದ ಪ್ರಜೆಗಳು ಆಳುವವರಿಗೆ ತಮ್ಮ ಅಹವಾಲು ಹೇಳಿಕೊಳ್ಳಬೇಕು ಮತ್ತು ಆಳುವವರು ಅದನ್ನು ಆಲಿಸುತ್ತಿರುವವರಂತೆ ನಟಿಸಬೇಕು. ಪ್ರಜಾಪ್ರಭುತ್ವದ ಈ ಅಲಿಖಿತ ಒಪ್ಪಂದದ ಪ್ರಕಾರ ಆಗಸ್ಟ್ 15ರ ಸ್ವಾತಂತ್ರ್ಯ ದಿನದ ಪ್ರಧಾನ ಮಂತ್ರಿಯವರ ಭಾಷಣ ಯಾವ ವಿಷಯಗಳನ್ನು ಒಳಗೊಂಡಿರಬೇಕು ಎಂಬ ಬಗ್ಗೆ ಇಲ್ಲಿ ಕೆಲವು ಸೂಚನೆಗಳನ್ನು ನೀಡಲಾಗಿದೆ.

1) ಕಳೆದ ವರ್ಷ ಇದೇ ಆಗಸ್ಟ್ ತಿಂಗಳ 30 ರಂದು ಕನ್ನಡದ ಹಿರಿಯ ಚಿಂತಕ ಡಾ.ಎಂ.ಎಂ.ಕಲಬುರ್ಗಿ ಅವರನ್ನು ಹತ್ಯೆ ಮಾಡಲಾಯಿತು. ಅವರು ಈ ಬಗ್ಗೆ ಇದುವರೆಗೂ ಏನೂ ಪ್ರತಿಕ್ರಿಯೆ ವ್ಯಕ್ತಪಡಿಸಿದ ಹಾಗಿಲ್ಲ, ಕಲಬುರ್ಗಿಯವರ ಹತ್ಯೆಗಿಂತ ಮೊದಲು ಮಹಾರಾಷ್ಟ್ರದ ವಿಚಾರವಾದಿ ನರೇಂದ್ರ ಧಾಬೋಲ್ಕರ್ ಮತ್ತು ಎಡಪಂಥೀಯ ಬುದ್ಧಿಜೀವಿ ಹಾಗೂ ಕಾರ್ಯಕರ್ತ ಗೋವಿಂದ ಪನ್ಸಾರೆ ಅವರ ಕೊಲೆಗಳ ಬಗ್ಗೆ ಕೂಡ ಪ್ರಧಾನ ಮಂತ್ರಿ ಈವರೆಗೆ ಏನೂ ಹೇಳಿಲ್ಲ, ಈ ಮೂವರು ಹಿರಿಯರ ಹತ್ಯೆಯ ಬಗ್ಗೆ ಪ್ರಧಾನ ಮಂತ್ರಿ ಈಗಲಾದರೂ ವಿಷಾದ ವ್ಯಕ್ತಪಡಿಸಬೇಕು.

2) 2015ರ ಸೆಪ್ಟಂಬರ್‌ನಲ್ಲಿ ಉತ್ತರ ಪ್ರದೇಶದ ದಾದ್ರಿಯಲ್ಲಿ ಮೊಹಮ್ಮದ್ ಅಖ್ಲಾಕ್ ಎಂಬ ಮುಸ್ಲಿಮ್ ಗೃಹಸ್ಥರೊಬ್ಬರನ್ನು ಅವರ ತಾಯಿ, ಪತ್ನಿ ಮತ್ತು ಮಕ್ಕಳ ಎದುರೇ ಕೊಲ್ಲಲಾಯಿತು. ಅವರ ಮನೆಯಲ್ಲಿ ದನದ ಮಾಂಸವಿದೆ ಎಂಬ ಸುದ್ದಿ ಹಬ್ಬಿ ಊರಿನ ಜನ ಒಟ್ಟಾಗಿ ಅಖ್ಲಾಕ್ ಅವರ ಮನೆ ಒಳನುಗ್ಗಿ ಅವರನ್ನು ಹೊಡೆದು ಕೊಂದರು; ಈ ಕೊಲೆ ದೇಶದಲ್ಲಿ ದೊಡ್ಡ ಸುದ್ದಿ ಆದಾಗ ಅನೇಕ ಬಿಜೆಪಿ ನಾಯಕರು ಅಖ್ಲಾಕ್ ತನ್ನ ಮನೆಯಲ್ಲಿ ದನದ ಮಾಂಸ ಇರಿಸಿಕೊಂಡದ್ದು ಅವರನ್ನು ಗುಂಪುಹತ್ಯೆ ಮಾಡಿದ್ದಕ್ಕಿಂತ ದೊಡ್ಡ ಅಪರಾಧ ಎಂಬ ಅರ್ಥದ ಹೇಳಿಕೆಗಳನ್ನು ಕೊಟ್ಟರು. ಅಖ್ಲಾಕ್ ಅವರ ಮನೆಯಲ್ಲಿ ಆವತ್ತು ಇದ್ದ ಮಾಂಸ ದನದ್ದಲ್ಲ ಎಂಬ ವರದಿಗಳೂ ನಂತರ ಪ್ರಕಟವಾದವು. ಆ ಮಾಂಸ ದನದ್ದೇ ಆಗಿದ್ದರೂ ಅಖ್ಲಾಕ್ ಅವರನ್ನು ಆ ಕಾರಣಕ್ಕೆ ಜನ ಒಟ್ಟಾಗಿ ಹೊಡೆದು ಕೊಲ್ಲುವುದು ನ್ಯಾಯವೆ? ಅದು ಸರಕಾರದ ಗೋಸಂರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸುವ ವಿಧಾನವೇ? ಪ್ರಧಾನ ಮಂತ್ರಿಯವರು ಈಗಲಾದರೂ ಆ ಕುರಿತು ತಮ್ಮ ಅಭಿಪ್ರಾಯ ಏನು ಎಂದು ತಿಳಿಸಬೇಕು ಉತ್ತರ ಪ್ರದೇಶದ ನ್ಯಾಯಾಲಯವೊಂದು ಈಗ ಮೃತ ಅಖ್ಲಾಕ್ ತನ್ನ ಮನೆಯಲ್ಲಿ ಕಾನೂನುಬಾಹಿರವಾಗಿ ದನದ ಮಾಂಸ ಇರಿಸಿದ್ದರು ಎಂಬ ಆರೋಪ ಹೊರಿಸಿ ಕೇಸು ದಾಖಲಿಸಿಕೊಂಡಿರುವುದರಿಂದ, ಪ್ರಧಾನ ಮಂತ್ರಿಯವರು ಈ ಕುರಿತು ತಮ್ಮ ಅನಿಸಿಕೆಯನ್ನು ಹೇಳಲೇಬೇಕಾಗಿರುವುದು ಅತ್ಯಂತ ತುರ್ತಿನ ಸಂಗತಿಯಾಗಿದೆ. ಮೊಹಮ್ಮದ್ ಅಖ್ಲಾಕ್ ಕಾನೂನುರೀತ್ಯಾ ಅಪರಾಧಿಯಾಗಿರಲಿ, ಅಲ್ಲದಿರಲಿ, ದಾದ್ರಿಯ ಜನ ಅವರಿಗೆ ಮರಣದಂಡನೆ ನೀಡಿ ಅದನ್ನು ಈಗಾಗಲೆ ಜಾರಿ ಮಾಡಿಬಿಟ್ಟಿದ್ದಾರೆ. ನ್ಯಾಯಾಲಯ ಈಗ ಯಾರ ವಿಚಾರಣೆ ನಡೆಸುತ್ತದೆ? ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತದೆ? ನ್ಯಾಯ ತೀರ್ಮಾನದ ಈ ಬಗೆ ದೇಶದ ಪ್ರಧಾನ ಮಂತ್ರಿಗೆ ಒಪ್ಪಿಗೆಯೆ? ಪ್ರಧಾನ ಮಂತ್ರಿಯವರು ಈ ಕುರಿತು ಸ್ಪಷ್ಟನೆ ನೀಡಬೇಕು.


3) ದಾದ್ರಿ ಘಟನೆ ಉತ್ತರ ಪ್ರದೇಶ ರಾಜ್ಯಕ್ಕೆ ಸಂಬಂಧಿಸಿರುವುದರಿಂದ ಅದರ ತಪ್ಪು ಒಪ್ಪುಗಳಿಗೆಲ್ಲ ಅಲ್ಲಿನ ರಾಜ್ಯ ಸರಕಾರವೇ ಹೊಣೆ ಎಂದು ಆ ಸಂದರ್ಭದಲ್ಲಿ ರಾಷ್ಟ್ರ ಮಟ್ಟದ ಹಲವು ಬಿಜೆಪಿ ನಾಯಕರು ವಾದಿಸಿದ್ದರು. ಕಾನೂನುರೀತ್ಯಾ ದಾದ್ರಿಯ ಘಟನೆ ಉತ್ತರ ಪ್ರದೇಶದ ರಾಜ್ಯ ಸರಕಾರದ ವ್ಯಾಪ್ತಿಗೆ ಒಳಪಟ್ಟಿದ್ದರೂ ಅದು ನಡೆದದ್ದು ಬಿಜೆಪಿಯ ಗೋವಿನ ರಾಜಕೀಯದ ಅಜೆಂಡಾಕ್ಕೆ ಅನುಗುಣವಾಗಿ. ಹಾಗಾಗಿ ಬಿಜೆಪಿಯೇ ಅದಕ್ಕೆ ಉತ್ತರದಾಯಿ ಎಂಬ ಸತ್ಯವನ್ನು ಆಗ ಮುಚ್ಚಿಹಾಕಲಾಯಿತು. ಆದರೆ ಇದೇ ಜುಲೈ 11 ರಂದು ಬಿಜೆಪಿಯದ್ದೇ ಸರಕಾರವಿರುವ ಗುಜರಾತ್‌ನ ಉನಾ ಎಂಬಲ್ಲಿ ಸತ್ತ ದನದ ಧರ್ಮ ಸುಲಿದು ಹದ ಮಾಡುತ್ತಿದ್ದ ನಾಲ್ವರು ದಲಿತರನ್ನು ಗೋಸಂರಕ್ಷಕರು ಹೊಡೆದು ಬಡಿದು ಹಿಂಸೆ ನಡೆಸಿದ್ದಾರೆ. ಸಾಲದ್ದಕ್ಕೆ ಅದನ್ನು ಚಿತ್ರೀಕರಿಸಿಕೊಂಡು ಪ್ರಸಾರ ಮಾಡಿದ್ದಾರೆ. ಗೋಸಂರಕ್ಷಣೆಯ ತಮ್ಮ ಈ ಮಾದರಿಯನ್ನು ಎಲ್ಲರೂ ಅನುಸರಿಸಲಿ ಎಂಬ ಅವರ ರಾಜಕೀಯ ಉದ್ದೇಶ ಈ ವಿಡಿಯೋದಿಂದ ಸ್ಪಷ್ಟವಾಗಿದೆ. ಪ್ರಧಾನ ಮಂತ್ರಿಯವರು 2002ರಿಂದ 2014 ರವರೆಗೆ ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಗುಜರಾತ್ ಅವರ ಕರ್ಮಭೂಮಿ, ಅವರ ರಾಜಕೀಯ ಗರಡಿಯೂ ಹೌದು. ಹಾಗಾಗಿ ಸ್ವಾತಂತ್ರ್ಯ ದಿನದ ತಮ್ಮ ಭಾಷಣದಲ್ಲಿ ಪ್ರಧಾನ ಮಂತ್ರಿ ಉನಾದ ಘಟನೆಯನ್ನು ಅಗತ್ಯ ಪ್ರಸ್ತಾಪಿಸಬೇಕು. ದಾದ್ರಿ, ಉನಾ ಹಾಗೂ ಕರ್ನಾಟಕದ ಆದಿ ಉಡುಪಿ, ಕುಂದೂರು - ಶಾಂತಿಪುರಗಳೂ ಸೇರಿದಂತೆ ನೂರಾರು ಊರುಗಳಲ್ಲಿ ಬಿಜೆಪಿ ಅಜೆಂಡಾವನ್ನು ಗೋಸಂರಕ್ಷಕರು ಜಾರಿಗೊಳಿಸುತ್ತಿರುವ ವಿಧಾನ ಆ ಪಕ್ಷದ ನಾಯಕರಾಗಿ, ತಮಗೆ ಒಪ್ಪಿಗೆಯೋ ಹೇಗೆ ಎಂದು ಪ್ರಧಾನಮಂತ್ರಿಯವರು ಹೇಳಬೇಕು. ಉನಾ ಘಟನೆಯ ಬಗ್ಗೆ ಬಿಜೆಪಿಯ ಮತ್ತೊಬ್ಬ ಹಿರಿಯ ನಾಯಕ ಹಾಗೂ ಕೇಂದ್ರ ಸಚಿವ, ವೆಂಕಯ್ಯ ನಾಯ್ಡು 'ಗೋವಿನ ಜೀವ ಉಳಿಸಲು ದಲಿತರ ಜೀವ ತೆಗೆಯುವುದು ಸರಿಯಲ್ಲ' ಎಂದು ಹೇಳಿದ್ದಾರೆ. ದಲಿತರ ಬಗ್ಗೆ ಜೀವಗಳ ಬಗ್ಗೆ ಸದ್ಯ ಸಚಿವರಿಗೆ ಇರುವ ಕಾಳಜಿ ಮೆಚ್ಚಬೇಕಾದದ್ದೆ. ಆದರೆ ಬಿಜೆಪಿಯ ಗೋಸಂರಕ್ಷಕರು ಸಾಗಿಸುತ್ತಿದ್ದರು ಅಥವಾ ದನದ ಮಾಂಸ ಅಡುಗೆ ಮಾಡುತ್ತಿದ್ದರು ಎಂದು ಆರೋಪಿಸಿ ಮುಸ್ಲಿಮರ ಮೇಲೆ ಹಲ್ಲೆ ನಡೆಸಿದಾಗ ಮಾತ್ರ ಅವರ ಬಗ್ಗೆ ಸಚಿವರು ಮೌನ ವಹಿಸಿದ್ದರು. ಹಿಂದೊಮ್ಮೆ ನ್ಯಾಯಾಲಯದಲ್ಲಿ ಆರೋಪಿಗಳಾಗಿರುವ ಶಂಕಿತ ಮುಸ್ಲಿಮ್ ಭಯೋತ್ಪಾದಕರ ಮಾನವ ಹಕ್ಕುಗಳ ಬಗ್ಗೆ ವೆಂಕಯ್ಯ ನಾಯ್ಡು ಅವರನ್ನು ಪತ್ರಕರ್ತರು ಪ್ರಶ್ನಿಸಿದಾಗ ಅವರು 'ಮಾನವ ಹಕ್ಕುಗಳು ಇರುವುದು ಮನುಷ್ಯರಿಗೆ ಮಾತ್ರ' ಎಂದು ಉತ್ತರಿಸಿದ್ದರು. ಅದೇ ಮಾತನ್ನು ಅವರು ಗೋಸಾಗಾಣಿಕೆ ಮಾಡುವ ಮತ್ತು ಗೋಮಾಂಸ ತಿನ್ನುವ ಮುಸ್ಲಿಮರ ಬಗೆಗೂ ಹೇಳುವವರೋ? ಅವರು ಪ್ರಜೆಗಳೂ ಅಲ್ಲ; ಮನುಷ್ಯರೂ ಅಲ್ಲ ಎಂಬುದು ಅವರ ನಂಬಿಕೆಯೋ? ಆ ಬಗ್ಗೆ ಪ್ರಧಾನಮಂತ್ರಿಯವರ ನಿಲುವು ಏನು? ಪ್ರಧಾನಮಂತ್ರಿಯಾಗಿ

ಅವರಿಗೆ ಆಳುವ ಪಕ್ಷದ [illegible] ಬದ್ಧತೆ ಇದೆ; ಆಳುವ ಪಕ್ಷಕ್ಕೆ ಮತಹಾಕದ ಮಟ್ಟಿಗೂ ಅವರು ಪ್ರಧಾನ ಮಂತ್ರಿ. ಹಾಗಾಗಿ ಉನಾ ಇತ್ಯಾದಿ ಘಟನೆಗಳ ಬಗ್ಗೆ ಪ್ರಧಾನ ಮಂತ್ರಿ ಜನರನ್ನೂ ತನ್ನದೇ ಪಕ್ಷದ ಕಾರ್ಯಕರ್ತರನ್ನೂ ಉದ್ದೇಶಿಸಿ, ಸ್ವಾತಂತ್ರ್ಯದ ದಿನದಂದು ಅಗತ್ಯ ಮಾತಾಡ

ಇತ್ತೀಚೆಗೆ ಪ್ರಧಾನಮಂತ್ರಿಯವರು ಕ್ರಿ ದಂಧೆಗಳಲ್ಲಿ ತೊಡಗಿಕೊಂಡಿರುವ ನಕಲಿ ಗೋಸಂರ ಕಟುವಾಗಿ ಟೀಕಿಸಿದ್ದಾರೆ. ಗೋಮಾಂಸ ತಿನ್ನುವ ಸಾಚಾ ಗೋಸಂರಕ್ಷಕರು ಹಿಡಿದು ಚಚ್ಚಿದರೆ ಪರವಾಗಿ ಬಹುಶಃ ಉನಾದ ಘಟನೆಯನ್ನು ಮನಸ್ಸಿನಲ್ಲಿಟ್ಟುಕೊ ಪ್ರಧಾನ ಮಂತ್ರಿಯವರು ಗೋವಿನ ಹೆಸರಿನಲ್ಲಿ ಮೇಲೆ ನಡೆಯುವ ಹಲ್ಲೆಗಳನ್ನು ಸಹ ಖಂಡಿ ಆದರೆ ದಾದ್ರಿಯ ದುರ್ಘಟನೆಯ ಬಗ್ಗೆಯಾ ದೇಶಾದ್ಯಂತ ಗೋವಿನ ನೆವದಲ್ಲಿ ಮುಸ್ಲಿಮರ ನಡೆದಿರುವ ಹಿಂಸಾಚಾರದ ಬಗ್ಗೆಯಾಗಲೀ ಇದು ಏನೂ ಹೇಳಿಲ್ಲ. ಮುಂದಾದರೂ ಈ ಘಟನೆ ಅವರು ಖಂಡಿಸುವ ಸಂಭವವಿಲ್ಲವೆಂದೇ ತೋ ಪ್ರಧಾನ ಮಂತ್ರಿಯವರ ಆರ್‌ಎಸ್‌ಎಸ್ ನಿಷ್ಠೆಯನ್ನು ಬಲ್ಲರು. ಆ ಸಂಘಟನೆಯ ಮುಸ್ಲಿಮ್ ಅಭಿಯಾನದಲ್ಲಿ ಗೋಹತ್ಯಾ ನಿಷೇಧಕ್ಕೆ ಪ್ರಮುಖ ಸ್ಥಾ ಈ ವಿಷಯದಲ್ಲಿ ಪ್ರಧಾನ ಮಂತ್ರಿ ಆರ್‌ಎಸ್‌ಎಸ್ ಧಿಕ್ಕರಿಸಿ ನಿಲ್ಲಲಾರರು. ಆದರೆ ಪ್ರಧಾನ ಮಂತ್ರಿ ಆರ್‌ಎಸ್‌ಎಸ್ ನಿಷ್ಠಾವಂತ ಸದಸ್ಯ ಮಾತ್ರವಲ್ಲ; ದೇಶದ ಅತ್ಯುನ್ನತ ಚುನಾಯಿತ ಹುದ್ದೆಯಲ್ಲಿ ಇರು ಮತ್ತು ದೇಶದ ಸಂವಿಧಾನಕ್ಕೆ ಮಾತ್ರ ಬದ್ಧರು. ಆರ್‌ಎಸ್‌ಎಸ್‌ನ ರಿಮೋಟ್ ಕಂಟ್ರೋಲ್‌ನಿಂದ ಈ ಕಳಚಿಕೊಂಡು, ಸ್ವಾತಂತ್ರ್ಯೋತ್ಸವದ ವೇದಿಕೆಯಲ್ಲಿ ಪ್ರಜಾಪ್ರಭುತ್ವ ಮತ್ತು ಅದನ್ನು ಕಾರ್ಯಸಾಧ್ಯ ಸಂವಿಧಾನಕ್ಕೆ ತನ್ನ ಪರಮನಿಷ್ಠೆಯನ್ನು ಘೋಷಿಸ

4) ಈ ವರ್ಷದ ಸ್ವಾತಂತ್ರ್ಯ ದಿನಾಚ ಸಂದರ್ಭದಲ್ಲಾದರೂ ದೇಶದ ಉತ್ತರ ಮತ್ತು ಗಡಿಯಲ್ಲಿರುವ ಕಾಶ್ಮೀರ, ಮಣಿಪುರ, ಭಾಗಶಃ ಹಾಗೂ ಮತ್ತು ಇತರ ಕಡೆಗಳಲ್ಲಿ ಜಾರಿಯಲ್ಲಿರು ಸೈನಿಕರ ವಿಶೇಷ ಅಧಿಕಾರ ಕಾಯ್ದೆಯ ಮುಂದುವರಿಸುವುದರ ಬಗ್ಗೆ ಸರಕಾರದ ನಿರ್ಧಾ ಎಂಬುದನ್ನು ಪ್ರಧಾನ ಮಂತ್ರಿ ತಿಳಿಸಬೇಕು. ಈ ರಕ್ಷಣಾ ಪಡೆಯ ಸೈನಿಕರಿಗೆ ಕೇವಲ ಸಂದೇಹದ ಆಧ ಪ್ರಜೆಗಳ ನಿವಾಸಗಳನ್ನು ತಪಾಸಣೆ ಮಾ ಬಂಧನದಲ್ಲಿಡಲು ಅವಶ್ಯ ಕಂಡರೆ ಶಸ್ತ್ರಪ್ರಯೋಗ ಸಹ ಪರಮಾಧಿಕಾರ ನೀಡುತ್ತದೆ; ಅವರ ಈ ಕೃ ನ್ಯಾಯಾಂಗ ತನಿಖೆಯಿಂದ ಸಂಪೂರ್ಣ ವಿನಾಯಿ ನೀಡುವ ಈ ಕಾಯ್ದೆ ಪ್ರಜೆಗಳ ಮೂಲಭೂತ ಸ್ವಾತಂ ಕಸಿಯುವಂತಹದ್ದು. ಮಣಿಪುರದ ರಾಜಧಾನಿ ಇಂಫಾ ಕಳೆದ 16 ವರ್ಷಗಳಿಂದ ಈ ಕಾಯ್ದೆಯ ರದ್ದ ಇರೋಮ್ ಶರ್ಮಿಳಾ ಎಂಬ ಮಹಿಳೆ ಉಪವಾಸ ನಡೆಸಿದ್ದಾರೆ. 2000 ನವೆಂಬರ್ ತಿಂಗಳಲ್ಲಿ ಅವರು ಪ್ರಾರಂಭಿಸಿದಾಗ 28 ವರ್ಷದ ಯುವತಿ. ಇರೋ ಶರ್ಮಿಳಾರ ಕಣ್ಣೆದುರೇ ಇಂಫಾಲ್ ನ ಹೊರವಲಯದಲ್ಲಿ ಸೈನಿಕರು, 10 ನಾಗರಿಕರನ್ನು (ಒಬ್ಬ ಬಾಲಕ) ಯಾವ ಸಾಕ್ಷ್ಯಾಧಾರವೂ ಉಗ್ರವಾದಿಗಳು ಎಂದು ಆರೋಪಿಸಿ ಗುಂಡಿಟ್ಟು ಕೊ ಅದು ಅವರ ಈ ಸತ್ಯಾಗ್ರಹಕ್ಕೆ ತಕ್ಷಣದ ಪ್ರಚೋ ಯಾಯಿತು. ಇರೋಮ್ ಶರ್ಮಿಳ ಅವರ ಈ ಸು ಸತ್ಯಾಗ್ರಹಕ್ಕೆ ಕೇಂದ್ರ ಸರಕಾರ ಯಾವ ಬಗೆ ಸ್ಪಂದಿಸಲಿಲ್ಲ. ಮಣಿಪುರ ಭಾರತದ ಅವಿಭಾಜ್ಯ ಎಂಬುದು ಬಿಜೆಪಿ, ಕಾಂಗ್ರೆಸ್ ಎರಡೂ ಪ ರಾಜಕೀಯ ಪಕ್ಷಗಳ ಧೋರಣೆಯಾಗಿದೆ. ಆದಾಗ್ಯೂ ದಿಂದ 2004 ರಿಂದ ದೇಶದ ಪ್ರಧಾನಮಂತ್ರಿ ಬಿಜೆಪಿಯ ನಾಯಕ ಅಟಲ್ ಬಿಹಾರಿ ವಾಜ 2004 ರಿಂದ 2014ರ ವರೆಗೆ ಪ್ರಧಾನ ಮಂತ್ರಿ ಕಾಂಗ್ರೆಸ್‌ನ ಮನಮೋಹನ್ ಸಿಂಗ್ ಮತ್ತು ಹಾಲಿ ಮಂತ್ರಿ ಈ ಮೂವರಲ್ಲಿ ಯಾರೊಬ್ಬರೂ ಇರು







ರ್ಮಿಳ ಅವರನ್ನು ಭೇಟಿ ಮಾಡಲಿಲ್ಲ, ಸತ್ಯಾಗ್ರಹ ನಿಲ್ಲಿಸಲು ...ತಿಸಿಕೊಳ್ಳಲೂ ಇಲ್ಲ. 16 ವರ್ಷಗಳಿಂದ, ಇರೋಮ್ ...ರ್ಮಿಳಾ ಅವರ ಮೂಗಿಗೆ ಬಲವಂತವಾಗಿ ತುರುಕಿಸಿದ ...ಬಿನ ಮೂಲಕ ನೀಡಲಾಗುತ್ತಿರುವ ದ್ರವಾಹಾರದ ...ಲೆ ತನ್ನ ಜೀವ ಉಳಿಸಿಕೊಂಡಿದ್ದಾರೆ. ಅವರನ್ನು ...ಧನದಲ್ಲಿರಿಸಲಾಗಿದ್ದ ಕೋಣೆಯಲ್ಲಿ ಕನ್ನಡಿ, ಬಾಚಣಿಗೆ, ...ೀಗಲಿ, ಒಂದು ಗಡಿಯಾರ ಕೂಡ ಇರಲಿಲ್ಲ. ಇರೋಮ್ ...ರ್ಮಿಳ ತನ್ನ ಜೀವಿತದ 16 ಅಮೂಲ್ಯ ವರ್ಷಗಳನ್ನು ...ಗೆ, ಭಾರತವೆಂಬ ಪ್ರಜಾಪ್ರಭುತ್ವದಲ್ಲಿ ಕಳೆದರು. ಕೆಲವು ...ರ್ಗಳ ಕೆಳಗೆ ಅವರು ಉಪವಾಸ ಸತ್ಯಾಗ್ರಹ ನಿಲ್ಲಿಸಿ ...ಸ್ತ್ರ ಸೈನಿಕರ ವಿಶೇಷ ಅಧಿಕಾರ ಕಾಯ್ದೆಯ ವಿರುದ್ಧ ...ನ್ನ ಹೋರಾಟವನ್ನು ಬೇರೆ ವಿಧಾನಗಳಲ್ಲಿ ...ಂದುವರಿಸುವುದಾಗಿ ಘೋಷಿಸಿದ್ದಾರೆ. ಬರಲಿರುವ ...ಣಿಪುರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದು ...ರ ಮುಂದಿರುವ ಹೋರಾಟದ ಒಂದು ಆಯ್ಕೆ ಎಂದೂ ...ರು ಹೇಳಿಕೊಂಡಿದ್ದಾರೆ. ಕರಾಳ ಕಾಯ್ದೆಯೊಂದರ ವಿರುದ್ಧ ...ತೆ ಮತ್ತು ಗಾಢ ನೈತಿಕತೆಯಿಂದ ಕೂಡಿದ ಇರೋಮ್ ...ರ್ಮಿಳ ಅವರ ಪ್ರಜಾಸತ್ತಾತ್ಮಕ ಹೋರಾಟದ ಬಗ್ಗೆ ...ಕಾರ ತನ್ನ ಅತೀವ ನಿರ್ಲಕ್ಷದ ಧೋರಣೆಯನ್ನು ...ನ್ನಾದರೂ ಕೈಬಿಡಬೇಕು. ಪ್ರಧಾನಮಂತ್ರಿಯವರು ಈ ...ಗ್ಗೆ ತಡಮಾಡದೆ ತನ್ನ ನಿರ್ಧಾರವನ್ನು ತಿಳಿಸಬೇಕು. ...ದಕ್ಕೆ ಸ್ವಾತಂತ್ರ್ಯ ದಿನದಷ್ಟು ಒಳ್ಳೆಯ ಸಂದರ್ಭ ಇನ್ನಾವುದು ...ದ್ದೀತು?

ಸಶಸ್ತ್ರ ಸೈನಿಕರ ವಿಶೇಷ ಅಧಿಕಾರ ಕಾಯ್ದೆಯ ...ರುಪಯೋಗ, ಮಣಿಪುರಕ್ಕಿಂತ ಹಲವು ಪಟ್ಟು ...ಕರವಾಗಿ ಜಾರಿಯಲ್ಲಿರುವ ರಾಜ್ಯ ಕಾಶ್ಮೀರ. ಆ ಪುಟ್ಟ ...ಜ್ಯದಲ್ಲಿ, ಅಲ್ಲಿನದ್ದೇ ಪೊಲೀಸು ಪಡೆಯ ಜೊತೆ ಸುಮಾರು ...ಲಕ್ಷ ಭಾರತದ ಸೈನಿಕರು ಬೀಡುಬಿಟ್ಟಿದ್ದಾರೆ. ಕಾಶ್ಮೀರದಲ್ಲಿ ...ಂತರವಾದ ದಂಗೆಯ ಸ್ಥಿತಿ ಇದ್ದು, ಸೈನಿಕ ...ರ್ಯಾಚರಣೆಯಲ್ಲಿ, ಅಧಿಕೃತ ದಾಖಲೆಗಳ ಪ್ರಕಾರವೇ ...ಮಾರು 7000 ಜನ 'ನಾಪತ್ತೆ'ಯಾಗಿದ್ದಾರೆ. ಕಾಶ್ಮೀರದಲ್ಲಿ ...ಪತ್ತೆಯಾದ ಪ್ರಜೆಗಳ ಹೆತ್ತವರ ಸಂಘಟನೆ-ಎಪಿಡಿಪಿಯ ...ಕ್ಷೆ ಪರ್ವಿನಾ ಅಹಂಗೇರ್ ಅವರ ಪ್ರಕಾರ ಈ ಸಂಖ್ಯೆ ...ತ್ತು ಸಾವಿರವನ್ನೂ ಮೀರುತ್ತದೆ. ಸ್ವತಃ ಪರ್ವಿನಾ ಅಹಂಗೇರ್ ...ಪತ್ತೆಯಾಗಿರುವ ಕಾಶ್ಮೀರಿ ಯುವಕನೋರ್ವನ ತಾಯಿ! ...ಪತ್ತೆಯಾದ ಕಾಶ್ಮೀರಿ ಪ್ರಜೆಗಳನ್ನು ಸೈನಿಕರು ಎಲ್ಲಿಗೆ ...ಯ್ದಿದ್ದಾರೆ? ಅವರು ಜೀವಂತವಾಗಿದ್ದಾರೋ ಅಥವಾ ...ವರನ್ನು ಕೊಂದು ಶವವನ್ನು ಮಣ್ಣು ಮಾಡಲಾಗಿದೆಯೋ? ...ಶ್ಮೀರದ ಹಲವೆಡೆ ಅನಾಮಧೇಯ ಗೋರಿಗಳು ...ತ್ತೆಯಾಗಿವೆ. ಅವುಗಳ ಅಡಿ ಯಾರನ್ನು ಮಣ್ಣು ...ಮಾಡಲಾಗಿದೆ? ರಾಜ್ಯ ಸರಕಾರವಾಗಲೀ, ಕೇಂದ್ರ ...ಸರಕಾರವಾಗಲೀ ಈ ಕುರಿತು ಇದುವರೆಗೆ ಯಾವ ...ವರಣೆಯನ್ನು ಕೊಟ್ಟಿಲ್ಲ. ಕಾಶ್ಮೀರದಲ್ಲಿ 'ರಾಷ್ಟ್ರಪ್ರಭುತ್ವ'ದ ...ದ್ದೇಶಗಳಿಗಾಗಿ 'ನಾಪತ್ತೆ'ಯಾದ ಪ್ರಜೆಗಳ ಕುಟುಂಬದವರು ...ದಿನ ಪ್ರತಿಕ್ಷಣ ಅನುಭವಿಸುತ್ತಿರುವ ಸಂಕಟಕ್ಕೆ ಭಾರತ ...ಪ್ರಜಾಪ್ರಭುತ್ವ ಸ್ಪಂದಿಸಬೇಕು. ಕಡೆಗೆ ಏನಿಲ್ಲವಾದರೂ ಪ್ರಧಾನ ...ಮಂತ್ರಿ ಸ್ವಾತಂತ್ರ್ಯೋತ್ಸವದ ತನ್ನ ಭಾಷಣದಲ್ಲಿ ಕಾಶ್ಮೀರದ ...ತ್ರಸ್ತ ಜನರಿಗೆ ಸಾಂತ್ವನ ಹೇಳಬೇಕು. ಕಳೆದ ಒಂದು ...ಗಳಿಂದ ಉಲ್ಬಣಗೊಂಡಿರುವ ಪ್ರಕ್ಷುಬ್ಧತೆಯಿಂದಾಗಿ, ...ಶ್ಮೀರದಲ್ಲಿ 50ಕ್ಕೂ ಹೆಚ್ಚು ಜನ ಸಾವಿಗೀಡಾಗಿದ್ದಾರೆ. ...ಭಾರತದ ಸಶಸ್ತ್ರ ಪಡೆಗಳು, ಪ್ರತಿಭಟನಾಕಾರರ ಮೇಲೆ ...ಸುತ್ತಿರುವ ಪೆಲೆಟ್ ಗನ್ನುಗಳ ಪ್ರಯೋಗದಿಂದ ಸಾವಿರಾರು ... ಅಂಗವಿಕಲರಾಗಿದ್ದು ಕೆಲವರಂತೂ ಶಾಶ್ವತವಾಗಿ ...ಕುರುಡರಾಗಿದ್ದಾರೆ. ಕಾಶ್ಮೀರದಲ್ಲಿ ಇತ್ತೀಚೆಗಿನ ಸೈನಿಕ ...ಕಾರ್ಯಾಚರಣೆಯಲ್ಲಿ ಸತ್ತವರು ಹಾಗೂ ಗಾಯಾಳುಗಳಲ್ಲಿ ...ಶೇಕಡಾ 90ಕ್ಕಿಂತಲೂ ಹೆಚ್ಚಿನವರು 25ಕ್ಕಿಂತ ಕಡಿಮೆ ...ವಯಸ್ಸಿನ ಯುವಕರು! ಕಾಶ್ಮೀರ ಭಾರತದ ಅವಿಭಾಜ್ಯ ...ಅಂಗ ಎಂದು ಸರಕಾರ ಮಾತ್ರವಲ್ಲ, ಎಲ್ಲಾ ರಾಜಕೀಯ ...ಪಕ್ಷಗಳು ಹಾಗೂ ನಾಗರಿಕ ಸಮಾಜ ಕೂಡ ...ಪ್ರತಿಪಾದಿಸುತ್ತಿವೆ. ಆದರೆ ಆ ಬಗ್ಗೆ ಕಾಶ್ಮೀರ ಪ್ರಜೆಗಳ ...ಅಭಿಪ್ರಾಯ ಏನು ಎಂದು ನಾವು ಕೇಳಬೇಡವೆ? ಅಥವಾ ...ನಾವು ಸಹ ರಾಷ್ಟ್ರದ 'ಪ್ರಧಾನಧಾರೆ'ಯ ಪ್ರಜೆಗಳಾದ ...ವರೇ ಅವರ ಪರವಾಗಿ ತೀರ್ಮಾನಿಸುವವರೋ? ಕಾಶ್ಮೀರದ ...ಭವಿಷ್ಯವನ್ನು ಅಂತಿಮವಾಗಿ ಕಾಶ್ಮೀರದ ಪ್ರಜೆಗಳೇ ...ನಿರ್ಧರಿಸಿಕೊಳ್ಳಬೇಕು. ಅದೇ ನಿಜವಾದ ಸ್ವಾತಂತ್ರ್ಯ ಅದೇ ...ನಿಜವಾದ ಪ್ರಜಾಪ್ರಭುತ್ವ. ಪ್ರಧಾನಮಂತ್ರಿಯವರು ಕಾಶ್ಮೀರದ ...ಜನರೊಡನೆ ತಕ್ಷಣ ಸಮಾಲೋಚನೆಗೆ ಮುಂದಾಗಬೇಕು. ...ಅವರ ಜೊತೆ ಸಂವಾದ ನಡೆಸುವುದರಿಂದ ...ಭಯೋತ್ಪಾದಕರನ್ನು ಬೆಂಬಲಿಸಿದಂತಾಗುತ್ತದೆ ಎಂಬ ಹುಸಿ ...ರಾಷ್ಟ್ರೀಯವಾದಿಗಳ ಅಪಪ್ರಚಾರಕ್ಕೆ, ಪ್ರಧಾನಮಂತ್ರಿ ...ಮಣಿಗೊಡಬಾರದು. ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ...ಕಾಶ್ಮೀರದ ಬೇಗುದಿಗೆ ಪ್ರಜಾಪ್ರಭುತ್ವ ಮತ್ತು ಸ್ವಾಯತ್ತತೆಗಳ ...ಚೌಕಟ್ಟಿನ ಹದಿಯಲ್ಲಿ ಒಂದು ಪರಿಹಾರ ಕಂಡುಕೊಳ್ಳುವ ...ಇಚ್ಛೆಯನ್ನು, ಪ್ರಧಾನ ಮಂತ್ರಿಯವರು ಪ್ರಕಟಿಸಬೇಕು.


● ಜಿ.ರಾಜಶೇಖರ್

ಇಬ್ರಾಹಿಂ ಕಾರು ಅಪಘಾತ ಮತ್ತು ಸಂಘಪರಿವಾರದ 'ಭಕ್ತರ' ಸಂಭ್ರಮ

ಸುತ್ತೂರು ಕಾಯುವ ಪುತ್ತೂರು ದೇವರು ಹೆದ್ದಾರಿ ಮಧ್ಯೆ ಬಂದು ನಿಂತು ಇಬ್ರಾಹಿಂ ಕಾರಿಗೆ ಸ್ಕಾರ್ಪಿಯೊ ಗುದ್ದಿಸಿ ಯಾವುದೋ ಬಡಪಾಯಿಗಳು ಆಸ್ಪತ್ರೆ ಸೇರುವಂತೆ ಮಾಡುತ್ತಾನೆಯೆ? ಎಂಚಿನ ಸಾವ್ ಮಾರೆ...



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನರ ನಡುವೆ ಸಾಮಾನ್ಯರಂತೆ ಬೆರೆತು ಸಾಕಷ್ಟು ಒಳ್ಳೆಯ ಕೆಲಸ ಮಾಡಿದ್ದ ಜಿಲ್ಲಾಧಿಕಾರಿ ಇಬ್ರಾಹಿಂ ಇದೀಗ ಬೆಂಗಳೂರಿಗೆ ವರ್ಗವಾಗಿ ಹೋಗಿದ್ದಾರೆ. ಇಬ್ರಾಹಿಂ ಇತರ ಐಎಎಸ್ ಅಧಿಕಾರಿಗಳಂತೆ ಇರಲಿಲ್ಲ, ಅವರಿಗೆ ಜನರ ಕಷ್ಟಗಳ ಅರಿವಿತ್ತು, ಸಾಮಾನ್ಯ ಜನರ ಬದುಕು ಏನು ಎಂಬುದು ತಿಳಿದಿತ್ತು. ಅನೇಕ ಬಾರಿ ಸರ್ಕಾರದ ಕೆಲವು ನಿರ್ಧಾರಗಳು ಜನಪರವಾಗಿ ಇರದಿದ್ದಾಗ, ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಇದ್ದಾಗ ಆ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಲು ಇಬ್ರಾಹಿಂ ಪತ್ರಗಳನ್ನೂ ಬರೆದಿದ್ದರು. ಆ ಪತ್ರಗಳನ್ನು ಓದಿದವರಿಗೆ ಇಬ್ರಾಹಿಂ ಎಷ್ಟು ಸೂಕ್ಷ್ಮ ಸಂವೇದನೆಯ ಮನುಷ್ಯ ಎಂದು ಗೊತ್ತಿದೆ. ಸಾಹಿತ್ಯ ಮತ್ತು ಸೃಜನಶೀಲತೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲೂ ಇಬ್ರಾಹಿಂಗೆ ಅತೀವ ಆಸಕ್ತಿ ಇತ್ತು, ಇದೆಲ್ಲಕ್ಕಿಂತ ಮಿಗಿಲಾಗಿ ಅವರಲ್ಲಿ ಅದ್ಭುತವಾದ ಅಂತಃಕರಣವಿತ್ತು.



ಪುತ್ತೂರು ದೇವಾಲಯದ ಜಾತ್ರೆಗೆ ಸಂಬಂಧಿಸಿ ಆಮಂತ್ರಣ ಪತ್ರಿಕೆಯಲ್ಲಿ ಇಬ್ರಾಹಿಂ ಅವರ ಹೆಸರು ಇದ್ದದ್ದಕ್ಕೆ ಸಂಘ ಪರಿವಾರ ಅವರನ್ನು ತೀರಾ ಹೀನಾಯವಾಗಿ ನಡೆಸಿಕೊಂಡು ಅವಮಾನ ಮಾಡಿತು. ತನ್ನ ಕರ್ತವ್ಯವನ್ನಷ್ಟೇ ನಿಭಾಯಿಸುತ್ತಿದ್ದ ಓರ್ವ ಜಿಲ್ಲಾಧಿಕಾರಿಗೆ ಈ ರೀತಿಯ ಅವಮಾನ ಮಾಡಿದ್ದು ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ಮೌಲ್ಯಗಳಿಗೆ ವಿರುದ್ಧವಾಗಿತ್ತು. ಪುತ್ತೂರಿನ ಸಮಸ್ತರಿಗೂ ಸೇರಿದ ಮಹಾಲಿಂಗೇಶ್ವರ ದೇವಸ್ಥಾನವನ್ನು ಸಂಘಪರಿವಾರದ ಕೆಲವೇ ಮಂದಿಯ ಗುಂಪು ಹೈಜಾಕ್ ಮಾಡಿ ಪುತ್ತೂರಿನ ಜನರ ಉದಾತ್ತ ಮನೋಭಾವ, ಸಹಿಷ್ಣುತೆಯ ಶತಮಾನಗಳ ಸಂಸ್ಕೃತಿಯ ಮೇಲೆಯೇ ಪ್ರಹಾರ ಮಾಡಿತು. ಪುತ್ತೂರಿನ ಸಜ್ಜನ ಹಿಂದೂ ಬಾಂಧವರೆಲ್ಲ ಸಂಘಪರಿವಾರ ಮಾಡುತ್ತಿರುವುದು ತಪ್ಪೆಂದು ಗೊತ್ತಿದ್ದೂ ಸುಮ್ಮನಾದರು. ಕೊನೆಗೆ ನ್ಯಾಯಾಲಯದಲ್ಲೂ ಸರ್ಕಾರ ಇಬ್ರಾಹಿಂ ಅವರ ಪರ ಸಮರ್ಥ ವಾದ ಮಂಡಿಸಲು ವಿಫಲವಾಯ್ತು. ಸಂಘಪರಿವಾರದ ಕೈಮೇಲಾಯ್ತು.

ಇಷ್ಟೆಲ್ಲ ಈಗ ಏಕೆ ಹೇಳುತ್ತಿದ್ದೇನೆ ಎಂದರೆ ಮೊನ್ನೆ ಮಂಗಳೂರಿನಿಂದ ಬೆಂಗಳೂರಿಗೆ ಹೋಗುತ್ತಿದ್ದಾಗ ಜಿಲ್ಲಾಧಿಕಾರಿಗಳು ಇದ್ದ ಕಾರು ಅಪಘಾತಕ್ಕೆ ಈಡಾಯಿತು. ಇಬ್ರಾಹಿಂ ಮತ್ತು ಅವರ ಪತ್ನಿ ಪ್ರಯಾಣಿಸುತ್ತಿದ್ದ ಫಾರ್ಚುನರ್ ವಾಹನ ಮತ್ತು ಸ್ಕಾರ್ಪಿಯೊ ವಾಹನ ಪರಸ್ಪರ ಢಿಕ್ಕಿಯಾಯಿತು. ಇಬ್ರಾಹಿಂ ಮತ್ತು ಅವರ ಪತ್ನಿ ಯಾವುದೇ ಅಪಾಯವಿಲ್ಲದೆ ಪಾರಾದರು. ಸ್ಕಾರ್ಪಿಯೊ ವಾಹನದಲ್ಲಿದ್ದವರಿಗೆ ಗಾಯಗಳಾಗಿ ಅವರನ್ನು ಆಸ್ಪತ್ರೆಗೆ ಸೇರಿಸಲಾಯ್ತು. ಬಳಿಕ ಇನ್ನೊಂದು ಅಪಘಾತ ನಡೆಯಿತು. ಅಪಘಾತಕ್ಕೆ ಈಡಾದ ಇಬ್ರಾಹಿಂ ಅವರ ವಾಹನದಿಂದ ಅವರ ಸಾಮಾನು ಸರಂಜಾಮುಗಳನ್ನು ಇನ್ನೊಂದು ಫಾರ್ಚುನರ್ ವಾಹನದಲ್ಲಿ ಹಾಕಿಕೊಂಡು ಬೆಂಗಳೂರಿನತ್ತ ಸಾಗುತ್ತಿದ್ದ ಜಿಲ್ಲಾಧಿಕಾರಿ ಅವರ ಮಗನಿದ್ದ ಕಾರು ಕೂಡ ಎದುರಿನಿಂದ ಬಂದ ಇನ್ನೊಂದು ವಾಹನಕ್ಕೆ ಢಿಕ್ಕಿಯಾಯ್ತು. ಇಬ್ರಾಹಿಂ ಅವರ ಮಗನಿಗೆ ಏಟಾಗಲಿಲ್ಲ, ಆದರೆ ಎದುರಿದ್ದ ವಾಹನದಲ್ಲಿದವರಿಗೆ ಗಂಭೀರ ಗಾಯಗಳಾಗಿವೆ. ಯಾರಿಗೆ ಏನೇ ದುರಂತ ಸಂಭವಿಸಲಿ, ಅದರಲ್ಲೂ ಖುಷಿಪಡುವ ವಿಕೃತ ಜನರು ಈಗಲೂ ಇದ್ದಾರೆ. ಇಬ್ರಾಹಿಂ ಮತ್ತು ಅವರ ಮಗನಿದ್ದ ವಾಹನಗಳ ಅಪಘಾತ ಕೆಲವರಿಗೆ ತಮ್ಮ ವಿಚಿತ್ರ ತೀಟೆ ತೀರಿಕೊಳ್ಳಲು ವಿಷಯವಾಗಿದ್ದು ಮಾತ್ರ ಈ ಸಮಾಜದ ದುರಂತ.

ಇಬ್ರಾಹಿಂ ಮತ್ತು ಅವರ ಮಗನಿದ್ದ ಕಾರುಗಳ ಅಪಘಾತ ನಡೆದದ್ದೇ ತಡ, 'ನೋಡಿ ಪುತ್ತೂರು ಮಹಾಲಿಂಗೇಶ್ವರನ ಮಹಿಮೆ, ಜಿಲ್ಲೆಯ ಗಡಿ ದಾಟುವ ಒಳಗೆ ತಾನು ಏನೆಂದು ಇಬ್ರಾಹಿಂಗೆ ಆ ಮಹಾಲಿಂಗೇಶ್ವರ ತೋರಿಸಿಕೊಟ್ಟ' ಎಂದೆಲ್ಲ ಕಥೆಕಟ್ಟಿ ಪ್ರಚಾರಕ್ಕೆ ಶುರುವಿಟ್ಟರು. ಈಗ ಇಂತಹ ವಿಕೃತ ಮನಸ್ಸುಗಳು ಸೃಷ್ಟಿ ಮಾಡುವ ಇಂತಹ ನೀಚ ಕಥೆಗಳು ಹರಡಲು ಸೋಷಿಯಲ್ ಮೀಡಿಯಾ ಇದೆ ಮತ್ತು ಅದರಲ್ಲಿ ಇಂತಹ ವಿಕೃತಿಗಳು ಹರಡಲು ಸಮಯವೇ ಬೇಕಾಗಿಲ್ಲ, ತಕ್ಷಣ ಹರಡಿಬಿಡುತ್ತದೆ. ಇದೀಗ ಸಂಘಪರಿವಾರದ ಭಕ್ತ ಮಹಾಶಯರು ಇಬ್ರಾಹಿಂ ಅವರಿಗೆ ಆದ ಅಪಘಾತ ಪುತ್ತೂರಿನ ಮಹಾಲಿಂಗೇಶ್ವರನ ಶಾಪ ಎಂದು ಸೋಷಿಯಲ್ ಮೀಡಿಯಾದಲ್ಲಿ ಕಥೆ ಕಟ್ಟಿ ಬೀಗುತ್ತಿದ್ದಾರೆ. ನೋಡಿದಿರಾ ದೇವರ ಶಕ್ತಿ ಎಂದು ಎದುರಿನಿಂದ ಹೇಳುತ್ತಾ 'ಛೇ ಅಪಘಾತವಾದರೂ ಇಬ್ರಾಹಿಂಗೆ, ಅವರ ಹೆಂಡತಿಗೆ, ಅವರ ಮಗನಿಗೆ ಏನೂ ಆಗಲಿಲ್ಲವಲ್ಲ' ಎಂದು ಒಳಗೊಳಗೆ ಕೊರಗುತ್ತಲೂ ಇದ್ದಾರೆ. ಇಂತಹ ಮನಸ್ಥಿತಿಯವರಿಗೆ ಏನು ಹೇಳಬೇಕೆಂಬುದೇ ಗೊತ್ತಾಗುತ್ತಿಲ್ಲ.

ಅಷ್ಟಕ್ಕೂ ಸುತ್ತೂರು ಕಾಯುವ ಪುತ್ತೂರು ಮಹಾಲಿಂಗೇಶ್ವರ ಜಿಲ್ಲಾಧಿಕಾರಿ ಇಬ್ರಾಹಿಂರನ್ನೋ ಅಥವಾ ಇನ್ನಾವುದೋ ದಾರಿಹೋಕನನ್ನು ಕಾಯಬಹುದು ವಿನಃ ಕಾಡುತ್ತಾನೆಯೆ? ಈ ವಿಕೃತಿಗಳು ತಾವೆ ಕಟ್ಟುತ್ತಿರುವ ಕಥೆ ಎಷ್ಟು ಅಮಾನವೀಯವಾಗಿದೆ ಎಂಬ ಅರಿವಾದರೂ ಇವರಿಗೆ ಇದೆಯೆ? ಇಬ್ರಾಹಿಂ ಅವರ ಕಾರು ಗಟ್ಟಿಮುಟ್ಟಾದ ಫಾರ್ಚುನರ್ ಕಾರು. ಅವರು ಸೀಟ್ ಬೆಲ್ಟ್ ಧರಿಸಿದ ಕಾರಣ ಅವರಿಗೆ ಅಪಾಯವಾಗಿಲ್ಲ, ಫಾರ್ಚುನರ್‌ನಲ್ಲಿ ಜೀವರಕ್ಷಕ ಏರ್‌ಬ್ಯಾಗಗಳು ಇದ್ದವು. ಅವರ ಕಾರಿಗೆ ಎದುರಿನಿಂದ ಗುದ್ದಿದ ಸ್ಕೋರ್ಪಿಯೊ ಹಳೆಯ ವಾಹನ. ಅದರಲ್ಲಿದ್ದವರಿಗೆ ಹೆಚ್ಚು ಏಟಾಗಿದೆ. ಮತ್ತೂ ಒಂದು ಸಂಗತಿ ನೋಡಿ. ಸ್ಕೋರ್ಪಿಯೊ ವಾಹನದ ಎದುರು ದೊಡ್ಡದಾಗಿ ಲಕ್ಷ್ಮಿ ನರಸಿಂಹ ಪ್ರಸನ್ನ ಎಂದು ಬರೆಯಲಾಗಿದೆ. ಅದರಲ್ಲಿದ್ದವರು ಪಾಪ ಯಾರೋ ಬಡಪಾಯಿಗಳು. ಜಿಲ್ಲಾಧಿಕಾರಿಗೆ 'ಶಿಕ್ಷಿಸುವ' ಭರದಲ್ಲಿ ಪುತ್ತೂರು ಮಹಾಲಿಂಗೇಶ್ವರ ಯಾರೋ ಬಡಪಾಯಿಗಳಿಗೆ ಹೆಚ್ಚು ಹಾನಿ ಮಾಡುತ್ತಾನೆಯೆ? ಜಿಲ್ಲಾಧಿಕಾರಿ ಇಬ್ರಾಹಿಂ ಒಂದು ವೇಳೆ ತಪ್ಪೇ ಮಾಡಿ ಮಹಾಲಿಂಗೇಶ್ವರ ಶಾಪ ಕೊಟ್ಟ ಅಂತ ವಾದಕ್ಕಾದರೂ ಸರಿ ಎಂದರೂ ಆ ದೇವರು ಅದರಿಂದ ಇನಾರೋ ಬಡಪಾಯಿ ದಾರಿಹೋಕರಿಗೆ ಹಾನಿಯಾಗುವ ಹಾಗೆ ಶಾಪ ಕೊಡುತ್ತಾಯೆ? ಓದಲು ತಮಾಷೆ ಅನಿಸಬಹುದು. ಆದರೆ ಇವರ ಈ ವಿಕೃತ ಮನಸ್ಸು ಆ ಬಡಪಾಯಿ ಗಾಯಾಳುಗಳ ಬಗ್ಗೆ ಯಾಕೆ ಯೋಚನೆ ಮಾಡುವುದಿಲ್ಲ? ದೇವರು ಕಾಯಲಿಕ್ಕಾಗಿರುತ್ತಾನೊ ಅಥವಾ ಕೊಲ್ಲಲಿಕ್ಕಾಗಿಯೊ? ದೇವರಿಗೆ ಕೆಡುಕು ಮಾಡುವುದು ಉದ್ಯೋಗವೆ? ಮನುಷ್ಯ ತಪ್ಪು ಮಾಡಿದರೂ ಕ್ಷಮೆ ಕೊಡುವುದು, ತಪ್ಪನ್ನು ಸುಧಾರಿಸುವುದು, ಒಳ್ಳೆಯ ಬುದ್ಧಿ ಕೊಡುವುದು ಇದೆಲ್ಲ ದೇವರ ಕೆಲಸ ಅಂತ ನಾವೆಲ್ಲ ತಿಳಿದುಕೊಂಡಿದ್ದೆವು. ದೇವರು ಯಾವುದೊ ಹೆದ್ದಾರಿಯಲ್ಲಿ ನಮಗೇನು ಕೇಡು ಮಾಡದಿರಲಿ ಎಂದು ಆಸ್ತಿಕರೆಲ್ಲ ಗಾಡಿ ಹತ್ತುವ ಮುನ್ನವೇ ದೇವರನ್ನು ನೆನೆಯುತ್ತಾರೆ. ಅಂಥದ್ದರಲ್ಲಿ ಆ ದೇವರೇನು ಊದನೆ-ಗುಂಡ್ಯದ ಮಧ್ಯೆ ಬಂದು ನಿಂತು ಇಬ್ರಾಹಿಂ ಕಾರಿಗೆ ಸ್ಕೋರ್ಪಿಯೊ ಕಾರು ಗುದ್ದಿಸುತ್ತಾನೆಯೆ? ಎಂಚಿನ ಸಾವ್ ಮಾರೆ!

ನಿತ್ಯವೂ ನೂರಾರು ಜನರು ವಿವಿಧ ಕಾರಣಗಳಿಗೆ ಸಾಯುತ್ತಾರೆ. ಏನೇನು ಲೋಕದ ಅರಿವಿಲ್ಲದ ಮಕ್ಕಳು ಕೂಡ ಅಪಘಾತಗಳಲ್ಲಿ ಸಾಯುತ್ತಾರೆ. ಬದುಕಿದ್ದವರಿಗೆ ಮಾತ್ರ ದೇವರ ಕೃಪೆ, ಸಾಯುವವರೆಲ್ಲ ದೇವರ ಸಿಟ್ಟಿಗೆ ಪಾತ್ರರಾದವರು ಎಂದು ಯೋಚಿಸುವುದೆ ಎಷ್ಟು ಅಮಾನವೀಯ. ಕಳೆದ ಶನಿವಾರ ಉಡುಪಿ ಸಮೀಪದ ಹಿರಿಯಡ್ಕ ದೇವಸ್ಥಾನದ ಜೀರ್ಣೋದ್ಧಾರ ಕೆಲಸ ಶುರು ಮಾಡಿದ ದಿನವೇ ಸ್ವಯಂಪ್ರೇರಿತರಾಗಿ ಅಲ್ಲಿ ಕೆಲಸ ಮಾಡಲು ಬಂದಿದ್ದ ಇಬ್ಬರು ಯುವಕರು ಮಣ್ಣಿನ ಗೋಡೆಯಡಿ ಸಿಲುಕಿ ಸಾವನ್ನಪ್ಪಿದರು. ಎಂತಹ ಘೋರ ದುರಂತವಿದು. ಮನೆಯ ಆಧಾರಸ್ತಂಭಗಳಾಗಿದ್ದ ಇಬ್ಬರು ಯುವಕರು ಇಲ್ಲದೆ ಅವರ ಮನೆಗಳೀಗ ಗೋಳಿನ ಗೂಡು. ಕಳೆದ ಕೆಲ ತಿಂಗಳ ಹಿಂದೆ ಕುಂದಾಪುರ ತಾಲೂಕಿನ ತಲ್ಲೂರಿನಲ್ಲಿ 'ಶ್ರೀನಿವಾಸ ಕಲ್ಯಾಣೋತ್ಸವ' ಕಾರ್ಯಕ್ರಮದ ಸಿದ್ಧತೆ ನಡೆಸುತ್ತಿದ್ದಾಗ ಇಬ್ಬರು ಯುವಕರು ವಿದ್ಯುತ್ ತಂತಿ ತಾಗಿ ಮೃತಪಟ್ಟರು. ಇವರೆಲ್ಲ ದೇವರ ಸೇವೆಗೆಂದು ಹೋದವರು. ಆದರೆ ಸಾವು ಇವರನ್ನು ಕೊಂಡೊಯ್ಯಿತು. ಇವರೆಲ್ಲ ಪಾಪಿಗಳೆಂದು ಈ ವಿಕೃತ ಮನಸ್ಸಿನ ವ್ಯಕ್ತಿಗಳು ಹೇಳುತ್ತಿದ್ದಾರೆಯೆ? ಇಂತಹ ವಿಕೃತ ವಿತಂಡವಾದಗಳಿಂದ ಅದ್ಯಾವ ರಾಜಕೀಯ ಮಾಡುತ್ತಿದ್ದೇವೆ ಎಂದು ಈ ದರಿದ್ರ ಮನಸ್ಸುಗಳು ಆತ್ಮಾವಲೋಕ ಮಾಡಿಕೊಳ್ಳಬೇಕಿದೆ.

ಕೆಡುಕಿನಲ್ಲಿ ಸಂಭ್ರಮಿಸುವುದು ಅತ್ಯಂತ ಕ್ರೂರ. ಇಬ್ರಾಹಿಂ ಎಂಬ ಜಿಲ್ಲಾಧಿಕಾರಿ ಈ ಜಿಲ್ಲೆಗೆ ಅತ್ಯುತ್ತಮ ಸೇವೆ ಸಲ್ಲಿಸಿ ಹೊರಟುನಿಂತಿದ್ದಾರೆ. ಅವರ ಮುಂದಿನ ಹುದ್ದೆಗೆ, ಅವರ ಕೌಟುಂಬಿಕ ಜೀವನಕ್ಕೆ ಶುಭ ಹರಸಿ ಬೀಳ್ಕೊಡಬೇಕಾಗಿತ್ತು ನಾವೆಲ್ಲ. ಆದರೆ ಅವರ ಕಾರು ಅಪಘಾತವಾಯಿತೆಂದು ಸಂಭ್ರಮಪಡುವ ಜನರು ನಮ್ಮ ಕರಾವಳಿಯಲ್ಲಿ, ನಮ್ಮ ಸುತ್ತಮುತ್ತಲೇ ಇದ್ದಾರಲ್ಲ ಎಂದು ಯೋಚಿಸುವುದಕ್ಕೂ ಹೇಸಿಗೆ ಅನಿಸುತ್ತಿದೆ. ಕ್ಷಮಿಸಿ ಇಬ್ರಾಹಿಂ. ನಿಮಗೆ ಶುಭವಾಗಲಿ.

ಸುತ್ತೂರು ಕಾಯುವ ಪುತ್ತೂರು ಮಹಾಲಿಂಗೇಶ್ವರ ತನ್ನ ಭಕ್ತರಿಗೆ ಸದ್ಬುದ್ಧಿ ಕೊಡುತ್ತಿರುವನೊ ಇಲ್ಲವೊ ತಿಳಿಯದು, ಆದರೆ ಈ ಸಂಘಪರಿವಾರದ 'ಭಕ್ತ' ಮಹಾಶಯರಿಗೆ ಮಾನವೀಯತೆ ಮತ್ತು ಅಂತಃಕರಣದ ತುರ್ತು ಕ್ಲಾಸ್ ಬೇಕಾಗಿದೆ. ಕರಾವಳಿ ಹೀಗಂತೂ ಇರಬಾರದು. ಇಷ್ಟು, ಈ ಬರಹದ ಆಶಯ.

● ಶಶಿಧರ ಹೆಮ್ಮಾಡಿ

ಇದೇನಾ 'ಮೇಕ್ ಇನ್ ಇಂಡಿಯ'?

ಭಾರಿ ದೊಡ್ಡ ತುತ್ತೂರಿಯೊಂದಿಗೆ ಮೋದಿ ಸರ್ಕಾರದ 'ಮೇಕ್ ಇನ್ ಇಂಡಿಯ' ಕಾರ್ಯಕ್ರಮ ಪ್ರಾರಂಭವಾದಾಗ ದೇಶದ ಅಮಾಯಕ ಜನರೆಲ್ಲ ಇನ್ನೇನು ನಿರುದ್ಯೋಗದ ಸಮಸ್ಯೆ ಪೂರ್ತಿ ಬಗೆಹರಿದಂತೆಯೆ ಎಂದು ಯೋಚಿಸಿದರು. 'ಮೇಕ್ ಇನ್ ಇಂಡಿಯ'ದಡಿ ವಿದೇಶೀ ಉದ್ದಿಮೆಗಳು ಭಾರತದಲ್ಲಿ ಉತ್ಪಾದನೆ ಪ್ರಾರಂಭಿಸಿದಾಗ ತಮ್ಮ ಅದೃಷ್ಟ ಖುಲಾಯಿಸಲಿದೆ ಎಂದು ಲಕ್ಷಾಂತರ ನಿರುದ್ಯೋಗಿಗಳು ಕೊರಳುದ್ದ ಮಾಡಿ ಕಾದರು. ಆದರೆ ಹತ್ತಿರ ಹತ್ತಿರ ಒಂದು ವರ್ಷವೇ ಕಳೆದರೂ ತಳಮಟ್ಟದಲ್ಲಿ ಯಾವುದೇ ಪರಿಣಾಮಕಾರಿ ಬದಲಾವಣೆ ಕಾಣಿಸದಾಗ ಜನರಿಗೀಗ ಇದು ಮತ್ತೊಂದು ಪೊಳ್ಳು ಘೋಷಣೆಯೆ ಹೊರತು ಬೇರೇನೂ ಅಲ್ಲ ಎಂಬ ಸತ್ಯದರ್ಶನ ಆಗುತ್ತಿದೆ.

ಜವಳಿ ಕ್ಷೇತ್ರದಲ್ಲಿ ಬಿಕ್ಕಟ್ಟು


ಭಾರತದಲ್ಲಿ ಒಟ್ಟು 1420 ಹತ್ತಿ ಮತ್ತು ಪಾಲಿಸ್ಟರ್ ನೂಲಿನ ಗಿರಣಿಗಳಿವೆ. ಕಳೆದ 11 ತಿಂಗಳ ಅವಧಿಯಲ್ಲಿ ಇವುಗಳ ಪೈಕಿ 17 ಗಿರಣಿಗಳು ಕಣ್ಣುಮುಚ್ಚಿರುವ ದುರಂತ ಚಿತ್ರವೊಂದು ನಮ್ಮ ಮುಂದೆ ಅನಾವರಣಗೊಳ್ಳುತ್ತಿದೆ. ತಮಿಳುನಾಡಿನಲ್ಲಿ 6 ಗಿರಣಿಗಳು ಮುಚ್ಚಿದ್ದರೆ, ಆಂಧ್ರದಲ್ಲಿ 3, ಕರ್ನಾಟಕದಲ್ಲಿ 3, ತೆಲಂಗಾಣದಲ್ಲಿ 1, ಹರಿಯಾಣಾದಲ್ಲಿ 1, ಮಹಾರಾಷ್ಟ್ರದಲ್ಲಿ 1, ರಾಜಸ್ಥಾನದಲ್ಲಿ 1 ಮತ್ತು ಉತ್ತರ ಪ್ರದೇಶದಲ್ಲಿ 1 ಗಿರಣಿ ಬಂದ್ ಆಗಿವೆ. ಇದಕ್ಕೆ ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ, ಇಳಿಯುತ್ತಿರುವ ಲಾಭ, ನಗದಿನ ಅಭಾವಗಳೇ ಪ್ರಮುಖ ಕಾರಣವಾಗಿವೆ ಎಂದು ಖುದ್ದು ಮೋದಿ ಸರ್ಕಾರವೇ ಸಂಸತ್ತಿನಲ್ಲಿ ಒಪ್ಪಿಕೊಂಡಿದೆ. ಮಳೆನೀರಿನ ಕೊರತೆ ಮತ್ತು ಕೀಟಬಾಧೆಗಳಿಂದಾಗಿ ಕಳೆದೆರಡು ವರ್ಷಗಳಿಂದ ಹತ್ತಿ ಉತ್ಪಾದನೆ ಇಳಿಮುಖವಾಗಿದೆ. ಈ ಬಾರಿಯೂ ಪಂಜಾಬ್ ಮತ್ತಿತರ ರಾಜ್ಯಗಳಲ್ಲಿ ಕೀಟಬಾಧೆ ಕಾಣಿಸಿಕೊಂಡಿರುವುದರಿಂದ 2015-16ರ ಸಾಲಿನಲ್ಲಿ ಒಟ್ಟು ಉತ್ಪಾದನೆ ಶೇಕಡಾ 7.4ರಷ್ಟು ಕಡಿಮೆಯಾಗುವ ಶಂಕೆ ಇದೆ. ಹತ್ತಿ ಬೆಳೆ ಕಡಿಮೆಯಾಗಿ ಬೆಲೆಗಳು 30-35% ಹೆಚ್ಚಾಗಿರುವುದರಿಂದ ಗಿರಣಿಗಳ ಉತ್ಪಾದನಾ ವೆಚ್ಚವೂ ಏರಿದೆ. ಹೀಗಾಗಿ ಸುದೀರ್ಘ ಕಾಲದಿಂದ ಸಂಕಷ್ಟದಲ್ಲಿದ್ದ ಗಿರಣಿಗಳು ಅಂತಿಮವಾಗಿ ತಮ್ಮ ಉದ್ದಿಮೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ವಿಫಲವಾಗಿವೆ. ಪರಿಣಾಮವಾಗಿ ನೂರಾರು ಕಾರ್ಮಿಕರು ಉದ್ಯೋಗ ಕಳೆದುಕೊಂಡು ವಸ್ತುಶಃ ಬೀದಿಗೆ ಬಿದ್ದಿದ್ದಾರೆ. ವಿಪರ್ಯಾಸವೇನೆಂದರೆ 'ಮೇಕ್ ಇನ್ ಇಂಡಿಯ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಉದ್ಯೋಗಗಳು ಹೆಚ್ಚಲಿವೆ ಎಂದು ಭರವಸೆ ಕೊಟ್ಟಂಥ ಮೋದಿ ಸರ್ಕಾರ ಈಗ ತನ್ನ ರಾಗ ಬದಲಾಯಿಸಿ ಬಂದ್ ಆಗಿರುವ ಗಿರಣಿಗಳ ಪುನಶ್ಚೇತನಕ್ಕೆ ತನ್ನ ಬಳಿ ದುಡ್ಡಿಲ್ಲ, ತಾಂತ್ರಿಕ ನೆರವಿನ ಯಾವ ಯೋಜನೆಯೂ ತನ್ನಲ್ಲಿಲ್ಲ, ಹೊಸ ಜವಳಿ ಮತ್ತು ನೂಲುವ ಮಿಲ್ಲುಗಳನ್ನು ಸ್ಥಾಪಿಸುವ ಬಗ್ಗೆಯೂ ಯೋಚಿಸಲಾಗಿಲ್ಲವೆಂದು ಹೇಳುತ್ತಿದೆ!

'ಮೇಡ್ ಇನ್ ಅಮೆರಿಕ', 'ಮೇಡ್ ಇನ್ ಇಸ್ರೇಲ್' ಯುದ್ಧೋಪಕರಣಗಳು

ಮೋದಿ ಸರ್ಕಾರ ಈಗ ತನ್ನ 'ಮೇಕ್ ಇನ್ ಇಂಡಿಯ' ಘೋಷಿತ ನೀತಿಗೆ ವಿರುದ್ಧವಾಗಿ ದುಬಾರಿ ವಿದೇಶೀ ನಿರ್ಮಿತ ಯುದ್ಧೋಪಕರಣಗಳನ್ನು ಆಮದು ಮಾಡಿಕೊಳ್ಳಲು ಮುಂದಾಗಿದೆ. ಭಾರತದಲ್ಲಿ ಉತ್ಪಾದನೆ, ಜೋಡಣೆ ಅಥವಾ ತಂತ್ರಜ್ಞಾನವನ್ನು ವರ್ಗಾವಣೆ ಮಾಡಿಕೊಳ್ಳುವ ಬದಲು ನೇರ ಖರೀದಿಗೆ ಹೊರಟಿದೆ. ಅದೀಗ ಅಮೆರಿಕದ ಬೋಯಿಂಗ್ ಕಂಪೆನಿಗೆ 3 ಬಿಲಿಯ ಡಾಲರು ತೆತ್ತು 61 'ಅಪಾಚಿ' ದಾಳಿ ಹೆಲಿಕಾಪ್ಟರ್‌ಗಳು ಮತ್ತು 15 'ಚಿನೂಕ್' ಭಾರಿ ಸರಕಿನ ಹೆಲಿಕಾಪ್ಟರ್‌ಗಳನ್ನು ಖರೀದಿಸಲು ಹೊರಟಿದೆ. ಹೆಲಿಕಾಪ್ಟರ್‌ಗಳ ಖರೀದಿ ಪ್ರಸ್ತಾಪಕ್ಕೆ ಭದ್ರತಾ ವಿಷಯಗಳಿಗೆ ಸಂಬಂಧಪಟ್ಟ ಸಚಿವಸಂಪುಟ ಸಮಿತಿ ಕಳೆದ ಸೆಪ್ಟಂಬರ್‌ನಲ್ಲಿ ಮೋದಿಯ ಎರಡನೆ ಅಮೆರಿಕ ಭೇಟಿಗೆ ಮುನ್ನ ಮಂಜೂರಾತಿ ನೀಡಿದೆ. ತರುವಾಯದಲ್ಲಿ ಭೂಸೇನೆಗೆ ಬೇಕಾಗಿರುವ 39 ದಾಳಿ ಹೆಲಿಕಾಪ್ಟರ್‌ಗಳ ಖರೀದಿಗೆ ಪ್ರತ್ಯೇಕ ಟೆಂಡರ್ ಕರೆಯದೆ ಅದೇ ಷರತ್ತುಗಳಡಿ ಬೋಯಿಂಗ್ ಸಂಸ್ಥೆಗೆ ಆರ್ಡರ್ ನೀಡಲಾಗಿದೆ! ಅಂದರೆ ಒಟ್ಟು 61 ದಾಳಿ ಹೆಲಿಕಾಪ್ಟರ್‌ಗಳನ್ನು ನೇರವಾಗಿ ವಿದೇಶದಿಂದ ಆಮದು ಮಾಡಲಾಗುತ್ತಿದೆ. ಅಸಲಿಗೆ ಅಮೆರಿಕದ ಈ ಅಪಾಚಿ ಹೆಲಿಕಾಪ್ಟರ್ ವಿಯೆಟ್ನಾಂ ಮತ್ತು ಇರಾಕ್ ಯುದ್ಧಗಳ ಕಾಲದಲ್ಲಿ ಬಳಕೆಯಾಗಿ ಇಂದು ಬರೀ ಒಂದು ಪಳಿಯುಳಿಕೆ ಆಗಿರುವಂಥದ್ದು! ಹೆಲಿಕಾಪ್ಟರ್‌ಗಳ ಒಡಲನ್ನು (ಫ್ಯೂಸಿಲಾಜ್) ಭಾರತದಲ್ಲಿ ಟಾಟಾ ಸಂಸ್ಥೆಯ ಜಂಟಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗುವುದೆಂದು ಒಪ್ಪಂದದ ನಂತರ ಬೋಯಿಂಗ್ ಘೋಷಿಸಿದೆ. ಇದಾದ ಕೆಲವೇ ದಿನಗಳಲ್ಲಿ ಮೋದಿ ಸರ್ಕಾರ ಭದ್ರತಾ ಕ್ಷೇತ್ರದಲ್ಲಿ ವಿದೇಶೀ ನೇರ ಹೂಡಿಕೆಯ ನಿಯಮಗಳನ್ನು ಸಡಿಲಗೊಳಿಸಿದೆ. ಆದರೆ ತಂತ್ರಜ್ಞಾನ ವರ್ಗಾವಣೆಯ ಬಗ್ಗೆ ಯಾವುದೇ ಉಲ್ಲೇಖ ಮಾಡದಿರುವುದು ಗಮನಾರ್ಹವಾಗಿದೆ. ಇನ್ನೂ ಒಂದು ಗಮನಾರ್ಹ ವಿಷಯವೆಂದರೆ ಇನ್ನು ಮುಂದೆ ಎಲ್ಲಾ ಬಿಡಿಭಾಗಗಳಿಗೆ ಬೋಯಿಂಗ್‌ಅನ್ನೆ ನೆಚ್ಚಿಕೊಳ್ಳಬೇಕಾದ ಪರಿಸ್ಥಿತಿ ಬರಲಿದೆ. ಎಲ್ಲರಿಗೂ ತಿಳಿದಿರುವ ಹಾಗೆ ನೇರ ಖರೀದಿ ಎಂದರೆ ವಿದೇಶೀ ಕಂಪೆನಿಗಳಿಗೆ ಸುಗ್ಗಿ. ಏಕೆಂದರೆ ಆರಂಭದಲ್ಲಿ ಬಿಡಿಭಾಗಗಳ ಬೆಲೆಗಳನ್ನು ಕಡಿಮೆ ಇಡಲಾಗುತ್ತದೆ; ಒಮ್ಮೆ ಖರೀದಿಸಿದ ಬಳಿಕ ಎರಡರಿಂದ ಐದು ಪಟ್ಟು ಹೆಚ್ಚಿಸಲಾಗುತ್ತದೆ!

ಮೋದಿ ಸರ್ಕಾರ ಕೇವಲ ಅಪಾಚಿ ಹೆಲಿಕಾಪ್ಟರ್‌ಗಳನ್ನು ಮಾತ್ರವಲ್ಲ ಇಸ್ರೇಲ್‌ನಿಂದ ಮಾನವರಹಿತ ಡ್ರೋನ್‌ಗಳನ್ನು ಕೂಡಾ ಖರೀದಿಸುತ್ತಿರುವ ವಿಷಯ ಬಹುಶಃ ಹೆಚ್ಚಿನವರಿಗೆ ಗೊತ್ತಿರಲಾರದು! ವಾಸ್ತವದಲ್ಲಿ ಸ್ವದೇಶೀ ಸಂಸ್ಥೆಯಾದ ಹಿಂದುಸ್ಥಾನ್ ಏರೊನಾಟಿಕ್ಸ್ ಇದೇ ವರ್ಗಕ್ಕೆ ಸೇರಿದ ರುಸ್ತುಂ II ಎಂಬ ಡ್ರೋನ್‌ಗಳನ್ನು ಅಭಿವೃದ್ಧಿಪಡಿಸುತ್ತಾ ಇತ್ತಾದರೂ ಅದನ್ನು ನಿರ್ಲಕ್ಷಿಸಿ 400 ಮಿಲಿಯ ಡಾಲರುಗಳ ವೆಚ್ಚದಲ್ಲಿ ಇಸ್ರೇಲ್‌ನಿಂದ ಖರೀದಿಸಲು ನಿರ್ಧರಿಸಲಾಗಿದೆ. ದಾಳಿ ಹೆಲಿಕಾಪ್ಟರ್‌ಗಳನ್ನು ಉತ್ಪಾದಿಸುವ ಸಾಮರ್ಥ್ಯ ತನ್ನಲ್ಲಿದೆ ಎಂದು ಎಚ್‌ಎಎಲ್ ಹೇಳಿತ್ತಲ್ಲದೆ ಈ ಕುರಿತ ಪ್ರಸ್ತಾಪವನ್ನೂ ಸರ್ಕಾರಕ್ಕೆ ಕಳುಹಿಸಿತ್ತು. ಎಚ್‌ಎಎಲ್‌ನಲ್ಲಿ ಉತ್ಪಾದಿಸುತ್ತಿದ್ದರೆ ಬಿಡಿಭಾಗಗಳ ಸಮಸ್ಯೆಯೂ ಇರುತ್ತಿರಲಿಲ್ಲ. ಎಚ್‌ಎಎಲ್ ಈಗಾಗಲೆ ಭೂಸೇನೆಗಾಗಿ ತೇಜಸ್ ಲಘು ಕದನ ಹೆಲಿಕಾಪ್ಟರ್ (ಎಲ್‌ಸಿಎಚ್) ಮತ್ತು ಲಘು ಸರ್ವೋಪಯೋಗಿ ಹೆಲಿಕಾಪ್ಟರ್ (ಎಲ್‌ಯುಎಚ್) ಎಂಬ ಎರಡು ಬಗೆಯ ಹೆಲಿಕಾಪ್ಟರ್‌ಗಳನ್ನು ತಯಾರಿಸುತ್ತಿದೆ. ವಾಯುಸೇನೆಯೂ 140 ತೇಜಸ್‌ಗಳ ಖರೀದಿಗೆ ಆರ್ಡರ್ ಕೊಟ್ಟಿತ್ತು.

ಬೂಸಿ ಬಸ್ಯ... ಮೋದಿ



ಹೀಗಿರುವಾಗ ಎಚ್‌ಎಎಲ್‌ನ ಭಾರತದಲ್ಲಿ ಉತ್... ಮಾಡುವ ಪ್ರಸ್ತಾಪವನ್ನು ತಿರಸ್ಕರಿಸಿ ನೇರವಾಗಿ ವಿದೇಶ... ಖರೀದಿಸುವ ನಿರ್ಧಾರ ಮೋದಿ ಸರ್ಕಾರದ ನಿಜಬಣ್ಣ... ಸಂಪೂರ್ಣವಾಗಿ ಬಯಲುಗೊಳಿಸುವುದಿಲ್ಲವೆ? ... ಮಧ್ಯೆ ಭೂಸೇನೆಗೆ ಪೂರೈಸಲಾದ ಎಲ್ಲಾ ಹೆಲಿಕಾಪ್ಟರ್‌ಗಳನ್ನು ತಿರಸ್ಕರಿಸಿರುವುದು ಎಚ್‌ಎ... ಯೋಜನೆಗೆ ದೊಡ್ಡ ಹೊಡೆತ ನೀಡಿದೆ.

ಮೋದಿ ಸರ್ಕಾರದ ನಿರ್ಧಾರಗಳ ಹಿಂದೆ ಕ... ಪಾಶ್ಚಿಮಾತ್ಯ ಭದ್ರತಾ ಚಿಂತನಾಕೂಟಗಳ ಕೈ... ಇಲ್ಲವೆನ್ನಲಾಗುವುದಿಲ್ಲ. ಶಸ್ತ್ರಾಸ್ತ್ರ ಉದ್ದಿಮೆಗಳ ಹೊರ... ಆಗಿರುವ ಇವು ಸಾಮಾನ್ಯವಾಗಿ ವಿಶ್ವಾದ್ಯಂತದ ಸಂಘ... ವಲಯಗಳ ಬಗ್ಗೆ ಅತಿಯಾದ ಆಸಕ್ತಿ ವಹಿಸು... ನಿರ್ದಿಷ್ಟವಾಗಿ ಭಾರತದ ವಿಷಯಕ್ಕೆ ಬಂದರೆ ಚ... ಪಾಕಿಸ್ತಾನಗಳ ಹೆಸರು ಹೇಳುತ್ತ ವಿದೇಶಗಳಿಂದ ಹೆ... ಶಸ್ತ್ರಾಸ್ತ್ರಗಳನ್ನು ಖರೀದಿಸಲು ಉತ್ತೇಜನ ನೀಡುತ್ತವೆ...

- ಸುರೇಶ್ ಭಟ್ ಬಾಕ್ರಬ...

(ಆಧಾರ: aslibharat.com ನಲ್ಲಿ ಅಜಿತ್ ... ಲೇಖನ; 8.8.2016ರ ಔಟ್‌ಲುಕ್ ನಲ್ಲಿ ಉಶಿನ... ಮಜುಂದಾರ್ ಲೇಖನ)

ಇನ್ನೇನಿದ್ರು ರಾಯಣ್ಣ ಬ್ರಿಗೇಡ್ V/s ಬಿಎಸ್‌ವೈ ಬ್ರಿಗೇಡ್

ಕರ್ನಾಟಕದ ಭಾಗಕ್ಕೆ ಶಿವಮೊಗ್ಗ ಚೆಡ್ಡಿಗಳ ನಾಗಪುರವಿದ್ದಂತೆ. ಮೊದಲಿನಿಂದಲೂ ಅಲ್ಲಿ ದುಷ್ಟಚತುಷ್ಟಯರ ಕಾರುಬಾರು ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ. ಈ ದುಷ್ಟ ಚತುಷ್ಟಯರ ಮೊದಲಿಗನಾಗಲೇ ಉಪಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿಯಾಗಿ ಮೆರೆದಿದ್ದಾರೆ. ಆತನಿಗೆ ಶಕುನಿಯಂತೆ ಸಾಥ್ ಕೊಟ್ಟಿದ್ದ ಆಸಾಮಿ ಈಗ ವಿಧಾನ ಪರಿಷತ್ ಅಧ್ಯಕ್ಷ. ಮತ್ತೊಬ್ಬ ದುಶ್ಶಾಸನ ಈಗ ವಿಧಾನ ಪರಿಷತ್ ವಿರೋಧಿ ನಾಯಕ. ಕರ್ಣನ ಪಾತ್ರಕ್ಕೆ ಪರವಾಗಿಲ್ಲ ಎಂಬಂತಿದ್ದ ವ್ಯಕ್ತಿ ಪರಿಷತ್ ಸದಸ್ಯತ್ವ ಮುಗಿಸಿ ಈಗ ಆಯನೂರ್ ಕಡೆ ಹೋಗಿದ್ದಾರೆ. ಈ ಪೈಕಿ ದುಶ್ಶಾಸನನೇ ಯಡ್ಡಿಗೆ ತಿರುಗಿ ಬಿದ್ದಿದ್ದಾನಂತಲ್ಲಾ, ಗುದ್ದಾಡುವ ಜೋಡೆತ್ತನ್ನು ರೈತ ಮಾರಿಬಿಡುತ್ತಾನೆ. ಆದರೆ ಈಗ ಕೋಡುಮುರುಕ ಎತ್ತುಗಳ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ ಎಂದು ಬಿಜೆಪಿ ಯೋಚಿಸುತ್ತಿದೆಯಂತಲ್ಲಾ, ಥೂತ್ತೇರಿ!

*****

ಬಿಜೆಪಿ ಎತ್ತುಗಳ ಕಾದಾಟ ಹರಿಯಮುರಿಯು ನಡೆದುಹೋಗಿ, ಒಂದೆಡೆ ರಾಯಣ್ಣ ಬ್ರಿಗೇಡ್ ರಚನೆಯಾದರೆ ಮತ್ತೊಂದೆಡೆ ಬಿಎಸ್‌ವೈ ಬ್ರಿಗೇಡ್ ಎಂಬ ಪಡೆಯೊಂದು ಆದಾಗಲೇ ಶಸ್ತ್ರಾಸ್ತ್ರಗಳನ್ನು ರೆಡಿ ಮಾಡುತ್ತಿದೆಯಂತಲ್ಲಾ, ಈ ಬಗ್ಗೆ ರಾಯಣ್ಣ ಬ್ರಿಗೇಡ್ ನಾಯಕನನ್ನು ಮಾತನಾಡಿಸಿದರೆ ಹೇಗೆ ಎಂದು ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಬೆಳ್ಳಿ ಮೂಡಿತೊ ಕೋಳಿ ಕೂಗಿತೋ. ಆಹ ಬೆಳ್ಳಿ ಮೂಡಿತೊ ಕೋಳಿ ಕೂಗಿತೊ."

"ಹಲೋ ಯಾರು?"

"ಈಶ್ವರಪ್ಪನೋರೆ ನಮಸ್ಕಾರ. ನಾನು ಯಾಹು."

"ಎಲ್ಲಿದ್ದಿರಿ ಯಾಹು? ಸ್ವಲ್ಪ ಬತ್ತಿರ?"

"ಆಫೀಸಲ್ಲಿದ್ದಿನಿ ಸಾರ್. ಪತ್ರಿಕೆ ಪ್ರಿಂಟಿಗೋಗಬೇಕು."

"ತಿಂಡಿ ಕೊಡುಸ್ತೀನಿ ಬನ್ರಿ."

"ಇನ್ನೊಂದಿನ ಬತ್ತಿನಿ ಸಾರ್. ಒಂದೆರಡು ಪ್ರಶ್ನೆ ಇವೆ."

"ಅದೇನು ಕೇಳಿ. ಪ್ರಶ್ನೆ ಕೇಳಕ್ಕೆ ಅಲವ ನೀವು ಇರದು. ಕೇಳಿ, ಸಂಕೋಚ ಮಾಡಿಕೊಬೇಡಿ."

"ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಬಗ್ಗೆ ಹೇಳಿ ಸಾರ್."

"ಬ್ರಿಗೇಡ್ ಈಗಿನ್ನು ಹುಟ್ಟುತಾಯಿದೆ ಕಂಡ್ರಿ. ಅದು ಹುಟ್ಟಿ, ಹೆಜ್ಜೆ ಹಾಕಿ, ನಾಡಿನ ತುಂಬ ಓಡಾಡಿದ ಮೇಲೆ ಹೇಳ್ತಿನಿ."



"ರಾಯಣ್ಣನ ಹೆಸರೇಕಿಟ್ರಿ ಸಾರ್?"

"ಆತ ಬ್ರಿಟಿಷರ ವಿರುದ್ಧ ಹೋರಾಡಿದ ಅದ್ಕೆ."

"ತಗಂಡೋಗಿ ಆಲದಮರಕೆ ನೇತಾಕಿದ್ರು ಗೊತ್ತೆ?"

"ಗೊತ್ತು, ಅದ್ಕೆ ಇವತ್ತಿನವರಿಗೂ ಜನಗಳು ನೆನಸ್ತಾಯಿರದು."

"ಆತ ಸ್ವಾತಂತ್ರ್ಯ ಹೋರಾಟ ಮಾಡಿದ. ರಾಣಿ ಚೆನ್ನಮ್ಮನ ಮತ್ತೆ ರಾಣಿ ಮಾಡಬೇಕು ಅಂತ ಹಟ ತೊಟ್ಟಿದ್ದ, ತಮ್ಮ ಹೋರಾಟದ ಉದ್ದೇಶ ಯಾವುದು?"

"ಕರ್ನಾಟಕದಲ್ಲಿ ಮತ್ತೆ ಬಿಜೆಪಿನ ಅಧಿಕಾರಕ್ಕೆ ತರಬೇಕು. ಯೋಗ್ಯರನ್ನ ಮುಖ್ಯಮಂತ್ರಿ ಮಾಡಬೇಕು."

"ಬಿಜೆಪಿಲಿ ಅಂತ ಯೋಗ್ಯರು ಯಾರವ್ರುರೆ ಸಾರ್?"

"ರಾಯಣ್ಣನ ಕಮ್ಯುನಿಟಲಿ ಅವ್ರುರೆ."

"ಶಿವಮೊಗ್ಗದಲ್ಲೇ ಇರಬೇಕಲವೆ?"

"ಗೊತ್ತಿದ್ದೂ ಕೇಳ್ತಿರಲ್ರೀ."

"ಸಾರಿ ಸಾರ್. ಕರ್ನಾಟಕಕ್ಕೆ ಇನ್ನು ಏನೇನು ಕಾದಿದೆಯೋ ಗೊತ್ತಿಲ್ಲ ಸಾರ್."

"ಯಾಕ್ರಿ ಅಂಗಂತಿರ?"

"ಅಲ್ಲ ಸಾರ್, ಆ ಎಡೂರಪ್ಪ ಶರಣ. ಆತನ ಶರಣತ್ವ-ಬಸವಣ್ಣ, ಇದೆಲ್ಲಾನು ಕಟ್ಟಿಟ್ಟು ಚೆಡ್ಡಿಗಳು ಕೊಟ್ಟ ಲಾಠಿ, ಅಂಗಿ, ಚೆಡ್ಡಿ ಇಕ್ಕಂಡು ಗೋಳವಲಕರ್, ಹರ್ಡೀಕರ್, ಸಾವರ್‌ಕರ್ ಅಂತ ಕುಣದು ಸುಸ್ತಾಗಿ, ಕೆಜೆಪಿ ಮಾಡಿಕೊಂಡು ಸುಧಾರಿಸಿಕೊಂಡ್ರು. ನಿಮ್ಮ ಕತೆನು ಅದೇ ಅಲವೆ?"

"ರಿ, ನನ್ನ ಕತೆನೂ ಅದೇ ಆಗಕ್ಕೆ ನಾನು ಬಿಜೆಪಿ ಬಿಟ್ರಲವೆ. ನಾನು ಎಡೂರಪ್ಪನಿಗಿಂತ ನಿಷ್ಠಾವಂತ ಆರೆಸ್ಸೆಸವ್ರುನು."

"ಅದೇನೊ ನಿಜ. ಆರೆಸ್ಸೆಸ್ನಲ್ಲಿ ನಿಮ್ಮನ್ನ ಮೀರಿಸೋ ಕಾರ್ಯಕರ್ತನೇ ಇಲ್ಲ, ಯಾಕೆ ಅಂತಿರ?"

"ನಿಷ್ಠೆ ಪ್ರಾಮಾಣಿಕತೆ, ಧೈರ್ಯ."

"ಅದಲ್ಲ ಸಾರ್. ಸಿದ್ದರಾಮಯ್ಯ ಹೇಳೊ ಪ್ರಕಾರ ಸ್ವಂತ ಮೆದುಳೇ ಇಲ್ಲ."

"ಯಾಕ್ರಿ ಅಂಗಂತಿರ? ನಿಮ್ಮ ಬಾಯಲ್ಲಿ ನಾಲಗೆ ಇರಬೇಕೊ ಬೇಡವೊ?"

"ಸಾರಿ ಸಾರ್. ನಿಮಗೆ ಸ್ವಂತ ಮೆದುಳಿದ್ರೆ ರಾಯಣ್ಣನ ಹೆಸರನ್ನ ಹಾಳು ಮಾಡೊ ಕೆಲಸಕ್ಕೆ ಕೈಹಾಕ್ತಿರಲಿಲ್ಲ, ಆ ಸಿದ್ದರಾಮಯ್ಯ ಉಗುದು ಓಡಿಸಿರೊ ಮುಕುಡಪ್ಪನ ಕೈಗೆ ತಲೆ ಕೊಟ್ಟಿದ್ದಿರಲ್ಲಾ, ಉಳೀತಿರ ಸಾರ್?"

"ಮುಕುಡಪ್ಪ ನೀವು ತಿಳದಂಗಿಲ್ಲ."

"ಒಳ್ಳೆಯವನಾಗಿದ್ರೆ ಸಿದ್ದರಾಮಯ್ಯ ಇಟಗತಿರಲಿಲ್ವೆ?"

"ಆ ಸಿದ್ದರಾಮಯ್ಯ ಉಪಕಾರ ಮಾಡಿದೋರನೆ ದೂರ ಇಟ್ಟವ್ರುನೆ. ನಾವಂಗಲ್ಲ."

"ಸಾರ್, ಮುಕುಡಪ್ಪ ಕುರುಬರ ಪೈಕಿ. ನೀವು ಆರೆಸ್ಸೆಸ್. ಆದ್ಯಂಗೆ ಒಂದಾದ್ರಿ?"

"ಏನು ಮೂರ್ಖ ಪ್ರಶ್ನೆ ಕೇಳ್ತಿರಿ ನೀವು. ಜಾತಿ ಬೇರೆ, ಆರೆಸ್ಸೆಸ್ ಬೇರೆ. ಎಲ್ಲಾ ಜಾತಿಲೂ ಆರೆಸೆಸ್ ನೋರವ್ರುರೆ."

"ಅವ್ರುರವ್ರುರ ಸ್ಥಾನದಲ್ಲವ್ರುರಲ್ಲವೆ?"

"ಅಂಗೇನುಯಿಲ್ಲ, ಬೈಠಕ್ ನೋಡಿದ್ದೀರ ನೀವು? ರಾಷ್ಟ್ರಪ್ರೇಮಿಗಳ ಪಡೆ ನೋಡಿದಂಗಾಗಿ ರೋಮಾಂಚನ ಆಗುತ್ತೆ, ಅಲ್ಲಿ ಜಾತಿ ಮತ ಇಲ್ಲ."

"ನಿಮ್ಮ ರೋಮಾಂಚನ ಸಹಜ ಸಾರ್. ಚೆಡ್ಡಿಗೆ ಜಾತಿಮತ ಇಲ್ಲ, ಯಾರು ಬೇಕಾದ್ರು ಇಕ್ಕಬವ್ರುದು. ಬಿಚ್ಚಿ ಅವ್ರುರ ಕೇರಿಗೋದಾಗಷ್ಟೆ ಜಾತಿ ಕಾಣದು. ಇಲ್ಲೀ, ಎಡೂರಪ್ಪನ ವಿರುದ್ಧ ನಿಮ್ಮ ನಡೆ ಹೇಳಿ."

ಥೂತ್ತೇರಿ

– ಯಾಹ...

"ಅವ್ರುರು ಮಾಡ್ತಾಯಿರೊ ಅನ್ಯಾಯಗಳನ್ನು ನಾಯಕರ ಗಮನಕ್ಕೆ ನಿರಂತರವಾಗಿ ತರ್ತಿನಿ."

"ತಂದು?"

"ಅವ್ರುರ ಸೊಕ್ಕು ಮುರೀತಿನಿ."

"ಸೊಕ್ಕು ಮುರೀತಿನಿ ಅನ್ನೋರಿಗೂ ಸೊಕ್ಕಿದೆಯೇ..."

"ಅದಿರ್ಲೆಬೇಕು. ಇನ್ನು ಬ್ರಿಗೇಡ್‌ಗಳ ಮುಖಾ... ಯುದ್ಧ ಘೋಷಣೆ ಆಗಿದೆ. ಅದು ನಡೆಯುತ್ತೆ."

"ಎಲ್ಲಿಂದ ಶುರು ಮಾಡ್ತಿರಿ ಸಾರ್?"

"ಚಿಕ್ಕಮಗಳೂರಿಂದ ಶುರುವಾಗುತ್ತೆ."

"ಅದು ಒಳ್ಳೆ ಯುದ್ಧ ಭೂಮಿನೆ."

"ಹೌದು. ಎಡೂರಪ್ಪನವರಿಗೆ ಕೆಟ್ಟ ಹೆಸರು ತಂ... ಅಲ್ದೆ ನಮ್ಮನ್ನೆಲ್ಲಾ ತಾತ್ಸಾರ ಮಾಡಂಗೆ ಮಾಡಿರೊ... ಅದು. ನಮ್ಮ ಸಿ.ಟಿ. ರವಿ ಕೂಡ ಒಳಗೊಳಗೆ ಸ... ಮಾಡ್ತೀನ್ರಿ ಅಂದವ್ರುನೆ."

"ಆ ಪ್ರದೇಶದ ನಿಮ್ಮ ವೈರಿ ಯಾರು ಸಾರ್..."

"ಅದನ್ನೆಲ್ಲಾ ಬಾಯಿಬಿಟ್ಟೆ ಹೇಳಬೇಕೇನ್ರಿ? ಎಂ.ಪಿ. ಕಂಡ್ರಿ."

"ಓಹೊಹೊ, ಕುಮಾರಿ ಕರಂದ್ಲಾಜೆ ಅನ್ನಿ."

"ಹೌದು, ಆಕೇನೆ."


"ಯೋಚನೆ ಮಾಡಿದ್ರೆ ಯಾಕೊ ನಿಮಗೆ ಉಳ... ಇಲ್ಲ ಅನ್ನುಸ್ತಾ ಆದೆ ಸಾರ್."

"ಯಾಕ್ರಿ ಅಂಗಂತಿರಿ?"

"ದೇವಿ ಮಹಾತ್ಮೆ ಯಕ್ಷಗಾನದಲ್ಲಿ ದೇವಿ ಪ... ಬಂದ ಎಲ್ಲಾ ರಾಕ್ಷಸರನ್ನು ಸಂಹಾರ ಮಾಡ್ತಳೆ. ನಿಮ್ಮ ಕತೆನೂ ಆಗಬವ್ರುದು."

"ರೀ, ಅದ್ಯಾವುದೊ ಪುರಾಣದ ಕತೆ ಹೇಳಿ ನ... ಹೆದರಿಸಬೇಡಿ. ಎಡೂರಪ್ಪನಿಗೆ ಚುನಾವಣೆ ಟೈಮಿ... ವರ್ಷ ಆಗುತ್ತೆ, ನನಗಿನ್ನೂ ಆಗಿಲ್ಲ. ಉಪಮ... ಮಂತ್ರಿಯಾಗಿದ್ದೋನು ಮುಖ್ಯಮಂತ್ರಿಯಾಗಬೇ... ಮುಖ್ಯಮಂತ್ರಿಯಾಗಿ ಜೈಲಿಗೂ ಹೋಗಿ ಬಂದ... ಪುನಃ ಮುಖ್ಯಮಂತ್ರಿ ಆಗಬೇಕೊ? ನೀವೇ ಹೇಳಿ..."

"ಥೂತ್ತೇರಿ!!!"



ಯೋಗೇಶ್ ಮಾಸ್ಟರ್

ಸುರಾಣದ ಹೂರಣ

ಕುಲದ ನೆಲೆಯನೇನಾದರೂ ಬಲ್ಲಿರಾ?

ಕುಲ ಎಂದರೇನು ಎಂದು ಅರ್ಥಮಾಡಿಕೊಂಡರೆ ಕುಲಚೂಡಾಮಣಿಯಲ್ಲಿರುವ ಕುಲವಾಗಲಿ, ಕುಲಾರ್ಣವದಲ್ಲಿರುವ ಕುಲವಾಗಲಿ ಅರ್ಥವಾಗಬಲ್ಲದು. ಕುಲ, ಅಕುಲ, ಕೌಲಿನಿ, ಕುಲಯೋಗಿನಿ ಇತ್ಯಾದಿಗಳು ಏನೆಂದೂ ತಿಳಿಯುತ್ತಾ ಹೋಗುವವು.

ಹಂಚಿಕೊಂಡಿರುವ ಸಾಮಾನ್ಯ ಗುಣಸ್ವಭಾವಗಳು


ಕುಟುಂಬ, ಗುಂಪು ಅಥವಾ ಯಾವುದಾದರೊಂದು ಮೂಲಭೂತ ವಿಷಯವನ್ನು ಸಾಮಾನ್ಯವಾಗಿ ಹಂಚಿಕೊಂಡಿರುವವರ ಸಮೂಹವನ್ನು ಕುಲವೆಂದರೆ ಸರಳವಾಗಿ ವಿವರಿಸಬಹುದು. ಅವರಲ್ಲಿ ಯಾವುದೋ ಒಂದು "ಮೂಲಭೂತವಾಗಿರುವ ವಿಷಯವನ್ನು" ಸಾಮಾನ್ಯವಾಗಿ ಅನುವಡಿಸಿಕೊಂಡಿರಬೇಕು ಅಥವಾ ಹೊಂದಿರಬೇಕು. ಅದನ್ನ ಕುಲ ಎನ್ನೋಣ. ಉದಾಹರಣೆಗೆ ಕುಟುಂಬದವರು ಎಲ್ಲಿದ್ದರೂ ಕುಟುಂಬದ ಕವಲಿನವರು ರಕ್ತವನ್ನು ಹಂಚಿಕೊಂಡಿರುತ್ತಾರೆ. ಎಷ್ಟೇ ದೂರದಲ್ಲಿರಲಿ ಒಬ್ಬರನ್ನೊಬ್ಬರು ನೋಡದೇ ಇರಲಿ ಅವರನ್ನು ಅವರ ಕುಲಸ್ಥರು ಎಂದು ಗುರುತಿಸಿಕೊಳ್ಳುತ್ತಾರೆ.


ತಂತ್ರ ಶಾಸ್ತ್ರಗಳಲ್ಲಿ ಹೇಳುವಂತಹ ಕುಲಗಳೂ ಅಷ್ಟೇ. ಒಂದು ಮೂಲಭೂತವಾದ ವಿಷಯವೊಂದನ್ನು ಸಾಮಾನ್ಯವಾಗಿ ಹಂಚಿಕೊಂಡಿರುತ್ತಾರೆ. ಅದು ಯಾವುದೇ ಆಗಿರಲಿ ಅದು ಶುದ್ಧವಾಗಿರುವಂತೆ ನೋಡಿಕೊಳ್ಳುವುದು, ಕಲುಷಿತವಾಗದಂತೆ ಎಚ್ಚರ ವಹಿಸುವುದು, ಆ ವಿಷಯವನ್ನು ಹುಟ್ಟುಹಾಕಿದ ಪೂರ್ವಜರನ್ನು, ಉಳಿಸಿ, ಬೆಳೆಸಿದ, ಕಾಪಾಡಿದ ಹಿರಿಯರನ್ನು ಗೌರವಿಸುವುದು ಯಾರೇ ಒಬ್ಬನು ನಿರ್ದಿಷ್ಟ ಕುಲದಲ್ಲಿ ಗುರುತಿಸಿಕೊಂಡಿರುವವನ ಕರ್ತವ್ಯ ವಾಗುತ್ತದೆ. ಸಾಮಾಜಿಕ ಚೌಕಟ್ಟಿನಲ್ಲಿ ಇಂತಹ ಕರ್ತವ್ಯಲೋಪ ಮಾಡಿದವನಿಗೆ ಬಹಿಷ್ಕಾರ ಹಾಕುವುದೂ ಇತ್ತು. ಆದರೆ ತಾಂತ್ರಿಕ ಸಾಧಕರ ವಿಷಯದಲ್ಲಿ ಕುಲ ಎನ್ನುವುದು ಇನ್ನೂ ಸೂಕ್ಷ್ಮವಸ್ಥೆಗೆ ಇಳಿಯುತ್ತದೆ. ಜೀವ, ಮನಸ್ಸು ಮತ್ತು ವಿಶ್ವ ಈ ಮೂರರ ಆಳಕ್ಕೆ ಅಥವಾ ಮೂಲಕ್ಕೆ ತೆರಳಬೇಕಾಗುತ್ತದೆ. ಈ ಮೂರರ ಸಮೀಕರಣದ ವ್ಯಾಪ್ತಿಯಲ್ಲಿ ಅಥವಾ ಕವಲುಗಳಲ್ಲಿ ಕುಲವನ್ನು ಗುರುತಿಸಿಕೊಳ್ಳುವುದರ ಬಗ್ಗೆ ವಿಶ್ಲೇಷಣೆ ಮಾಡಬೇಕಾಗುತ್ತದೆ.

ಕುಲದ ಮೂಲ ಅರಣ್ಯದಲ್ಲಿ

ಕುಲವನ್ನು ಅರಿತುಕೊಳ್ಳಲು ನಾವು ಅರಣ್ಯದ ಕಡೆಗೆ ಹೊರಳಬೇಕಾದ ಅಗತ್ಯವಿದೆ. ಇಂದು ನಮ್ಮೊಡನೆ ಇರುವ ಬಹಳಷ್ಟು ಮಂದಿಗೆ ಅರಣ್ಯವೆಂದರೇನೆಂದೇ ತಿಳಿದಿಲ್ಲ. ದೊಡ್ಡ ದೊಡ್ಡ ಮರಗಳು ಮತ್ತು ಗಿಡಗಳು ಒತ್ತೊತ್ತಾಗಿ ಬೆಳೆದಿರುವಂತಹ ಪ್ರದೇಶವೆಂದು ಭಾವಿಸುತ್ತಾರೆ. ಆದರೆ, ಅರಣ್ಯವೆಂದರೆ ಬರಿಯ ಗಿಡಮರಗಳು ಮಾತ್ರವಲ್ಲ, ಪ್ರಾಣಿಗಳು, ಪಕ್ಷಿಗಳು ಮತ್ತು ಮನುಷ್ಯರೂ ಸೇರುತ್ತಾರೆ. ಮನುಷ್ಯನ ಮೂಲಸ್ಥಾನ ಅರಣ್ಯ ಮತ್ತು ಅವನೂ ಪ್ರಾಣಿ, ಪಕ್ಷಿ, ಮರಗಿಡಗಳಂತೆ ಅರಣ್ಯದ ಭಾಗವೇ ಆಗಿದ್ದನೆಂಬುದನ್ನು ನಾವು ಎಂದಿಗೂ ಮರೆಯಲಾಗದು. ಹಾಗೆಯೇ ಪ್ರಾಣಿಗಳ, ಪಕ್ಷಿಗಳ ಸಂಕುಲ, ಮನುಷ್ಯರ ಕುಲದ ನೆಲೆ ಎಂದರೆ ಅರಣ್ಯವೇ. ಮನುಷ್ಯನನ್ನು ಒಳಗೊಂಡು ಯಾವುದೇ ಜೀವಿಯು ಹುಟ್ಟಿದ್ದು, ಬಾಳಿದ್ದು, ಬದುಕಿದ್ದು ಎಲ್ಲವೂ ಅರಣ್ಯದಲ್ಲಿಯೇ. ನದಿಪಾತ್ರಗಳನ್ನು ನಾಗರಿಕತೆಯ ತೊಟ್ಟಿಲು ಎಂದು ಬಣ್ಣಿಸುವುದುಂಟು. ಕೃಷಿಯನ್ನು ಕಂಡುಕೊಂಡ ಮನುಷ್ಯ ನದಿದಡಗಳನ್ನು ತನ್ನ ನಾಗರಿಕತೆಯ ತೊಟ್ಟಿಲನ್ನಾಗಿ ಮಾಡಿಕೊಂಡರೂ ಅವನ ಹುಟ್ಟಿನ ಮತ್ತು ಬಾಳಿನ ಮೂಲ ಇರುವುದು ಅರಣ್ಯದಲ್ಲಿಯೇ. ಇನ್ನೂ ಸೂಕ್ಷ್ಮವಾಗಿ ಹೇಳಬೇಕೆಂದರೆ, ನದಿಪಾತ್ರಗಳೂ ಅರಣ್ಯದ ಭಾಗವೇ. ಹೆಚ್ಚು ಹೆಚ್ಚು ಅರಣ್ಯ ನಾಶವಾದಂತೆ ಮನುಷ್ಯನ ನಾಗರಿಕತೆ ವಿಷಮವಾಗುತ್ತಾ ಬಂದಿತು. ಹೆಚ್ಚು ಹೆಚ್ಚು ನಾಗರಿಕನಾಗುತ್ತಾ ಬಂದಂತೆ ಅವನ ಮೂಲ ಸತ್ವಸಾರಗಳನ್ನು ಕಳೆದುಕೊಳ್ಳುತ್ತಾ ಬಂದ. ಅವನ ಸಹಜತೆ ಮತ್ತು ನೈಸರ್ಗಿಕತೆಯೂ ಕೂಡ ಕ್ಷೀಣಿಸುತ್ತಾ ಬಂದಿತು.

ಈಗ ಅರಣ್ಯದಲ್ಲಿ ಕುಲಗಳ ಬಗ್ಗೆ ವಿಚಾರಿಸಿದರೆ, ಒಂದೇ ಅರಣ್ಯದಲ್ಲಿ ಹಲವು ಬಗೆಯ ಪ್ರಾಣಿಗಳಿರುತ್ತವೆ. ಈ ಬಗೆಬಗೆಗಳಲ್ಲಿರುವ ಪ್ರಾಣಿಗಳ ಸ್ವಭಾವ, ಗುಣ, ರಚನೆ ಇತ್ಯಾದಿ ಸಮಾನ ಅಂಶಗಳು ಅವುಗಳನ್ನು ಒಟ್ಟಾಗಿರುವಂತೆ ಮಾಡುತ್ತವೆ. ಸಿಂಹಗಳು ತಮ್ಮ ಸಿಂಹ ಕುಟುಂಬದೊಡನೆ, ಆನೆ ತನ್ನ ಹಿಂಡಿನೊಡನೆ, ಜಿಂಕೆಗಳು ತನ್ನ ಬಳಗದೊಡನೆ, ಹಕ್ಕಿಗಳು ತಮ್ಮ ಕಾಲೋನಿಗಳಲ್ಲಿ, ಹೆಸರುಗತ್ತೆಗಳು ತಮ್ಮ ಸಮೂಹಗಳಲ್ಲಿ; ಹೀಗೆ ಆಯಾ ಪ್ರಾಣಿಗಳು ಸಾಮಾನ್ಯ ಗುಣಲಕ್ಷಣ ಮತ್ತು ಸ್ವಭಾವಗಳನ್ನು ಹೊಂದಿರುವಂತಹ ಪ್ರಾಣಿಗಳ ಜೊತೆಜೊತೆಯಲ್ಲಿ ವಾಸಿಸುತ್ತವೆ. ಆದರೆ ಅವುಗಳ ಈ ಸಾಂಘಿಕ ಜೀವನವು ಉದ್ದೇಶಪೂರ್ವಕವ್ವೋ, ಆಶಯಪೂರಿತವ್ವೋ ಅಲ್ಲ, ನಿಸರ್ಗದಿಂದಲೇ ಅದು ಸಹಜವಾಗಿ ಸಂಯೋಜಿತವಾಗಿರುತ್ತದೆ. ಆ ಪ್ರಾಣಿಗಳು ತಮಗೇ ತಿಳಿಯದಂತೆ ಅಂತರ್ವಾಹಿನಿಯಾಗಿ ಹರಿಯುತ್ತಿರುವ ಕಂಪನಗಳ ಮೂಲಕ ಪರಸ್ಪರ ಸಂಪರ್ಕಿಸಿಕೊಂಡಿರುತ್ತವೆ.





ಸಹಜ ತರಂಗಗಳು

ಓರ್ವ ಕಮ್ಯುನಿಸ್ಟೋ, ಸಮಾಜವಾದಿಯೋ ಯಾವುದೇ ಸಿದ್ಧಾಂತವಾದಿ ಅಥವಾ ಧಾರ್ಮಿಕ ಮುಖಂಡ ತಾವುಗಳು ಸಾಮಾನ್ಯವಾಗಿ ಎದುರಿಸುತ್ತಿರುವ ಸವಾಲುಗಳನ್ನು, ಸಮಸ್ಯೆಗಳನ್ನು ಮುಂದಿಟ್ಟು, ಸಮಾನ ಆಶಯ ಮತ್ತು ಮನಸ್ಥಿತಿಗಳನ್ನು ಹೇಳಿ, ಅದನ್ನು ಕೇಳಿ ವ್ಯಕ್ತಿಗಳು ಸಂಘಟಿತರಾಗಿ ಸಾಂಘಿಕ ಚಟುವಟಿಕೆಗಳನ್ನು ಮಾಡುತ್ತಾರೆ. ಹೇಳುವ ಕೇಳುವ ಕ್ರಿಯೆಯಲ್ಲಿ ಶಬ್ದ ತರಂಗಗಳು ಕ್ರಿಯಾಶೀಲವಾಗಿರುತ್ತದೆ. ಹೇಳುವವನ ಮಾತುಗಳು ಕೇಳುವವನ ವಿಚಾರಕ್ಕೆ ಸಮೀಕರಿಸಲ್ಪಟ್ಟಾಗ ಇಬ್ಬರದೂ ವಿಚಾರಗಳು ಒಂದೇ ಎಂದೋ, ಇಬ್ಬರಲ್ಲಿ ಸಹಮತವಿದೆಯೆಂದೋ ಒಂದು ತಿಳಿವಳಿಕೆಗೆ ಬಂದು ಒಟ್ಟಾಗಿ ಮುಂದುವರಿಯಲು ಆಶಿಸುತ್ತಾರೆ. ಆದರೆ ನಿಸರ್ಗದಲ್ಲಿ, ಪ್ರಾಣಿಪಕ್ಷಿಗಳ ವಿಷಯದಲ್ಲಿ ಇವ್ಯಾವುದೂ ಉದ್ದೇಶಪೂರ್ವಕವಾಗಿಯೋ, ಆಶಯಪೂರಿತವಾಗಿಯೋ ನಡೆಯುವುದಿಲ್ಲ, ಹೇಳಿ ಕೇಳಿಗಳ ಮೂಲಕ ಏಳುವ ಶಬ್ದ ತರಂಗಗಳಿಂದ ಅವು ಸಂಪರ್ಕ ಸಾಧಿಸುವುದಿಲ್ಲ, ಆದರೆ ತರಂಗಗಳಿವೆ. ನಿಸರ್ಗದಲ್ಲಿ ಸದಾ ಹರಿಯುತ್ತಿರುವ ತರಂಗಗಳಿಗೆ 'ಟ್ಯೂನ್' ಮಾಡಿಕೊಳ್ಳಲು ಅಥವಾ ಸಮೀಕರಿಸಿಕೊಳ್ಳಲು ಅವಕ್ಕೆ ಸಾಧ್ಯವಿದೆ. ಅದೂ ನೈಸರ್ಗಿಕವಾಗಿಯೇ ನಡೆಯುತ್ತದೆ.



ಇದೇ ರೀತಿಯಲ್ಲಿ ಸಾಮಾನ್ಯ ಗುಣಲಕ್ಷಣಗಳನ್ನು ಒಳಗೊಂಡ ಪ್ರಾಣಿಗಳು ಒತ್ತೊತ್ತಾಗಿ ಬಾಳುವಂತೆ, ಇದೇ ಅರಣ್ಯಗಳಲ್ಲಿದ್ದ ಮನುಷ್ಯರೂ ಕೂಡ ತಮ್ಮ ಸಾಮಾನ್ಯ ಗುಣಲಕ್ಷಣಗಳನ್ನು ಗುರುತಿಸಿಕೊಂಡಿದ್ದರು. ಅದರಂತೆ ಅವರ ಸಾಮೂಹಿಕ ಜೀವನವೂ ಕೂಡ ಇತ್ತು. ಈ ಸಮೂಹ ಜೀವನ ಸಮಾಜ ಜೀವನವಲ್ಲ ಎಂಬ ಅಂಶವನ್ನು ನೆನಪಿನಲ್ಲಿಟ್ಟುಕೊಳ್ಳೋಣ. ಸಮೂಹವು ಸರಳವಾಗಿ ಮತ್ತು ಸಹಜವಾಗಿ ಉಂಟಾಗಿರುವುದಾದರೆ, ಸಂಘದಲ್ಲಿ ಯೋಜಿತ ಮತ್ತು ಉದ್ದೇಶಿತ ಆಶಯ ಮತ್ತು ನಡಾವಳಿಗಳ ರೂಪುರೇಷೆಗಳನ್ನು ನಿರ್ಧರಿಸಲಾಗಿರುತ್ತದೆ. ಇನ್ನು ಸಂಘದ ವಿಸ್ತೃತ ರೂಪ ಸಮಾಜ. ಸಂಘವೊಂದರಲ್ಲಿ ಏಕರೂಪವಾದ ರೀತಿ ನಿಯಮಗಳು ನಿರ್ದಿಷ್ಟವಾಗಿದ್ದರೆ, ಸಮಾಜದಲ್ಲಿ ಅಂತಹ ಹಲವು ಸಂಘಗಳು ಒಟ್ಟಾಗಿರುತ್ತವೆ ಹಾಗೂ ಒಟ್ಟಾಗಿ ಪರಸ್ಪರ ಕೊಟ್ಟುಕೊಡುಕೊಳ್ಳುತ್ತಾ ಒಟ್ಟಾಗಿ ಬಾಳುವ ದಿಸೆಯಲ್ಲಿ ರೂಪುರೇಷೆಗಳು ನಿಯೋಜಿತವಾಗಿರುತ್ತವೆ.

ಹಾಗಾಗಿ ಅರಣ್ಯದಲ್ಲಿರುವ ಸಮೂಹ ಜೀವನ ಸಾಮಾಜಿಕ ಜೀವನವಲ್ಲ, ಸಂಘ ಮತ್ತು ಸಮಾಜಗಳು ಸಮೂಹದಿಂದ ಕವಲೊಡೆದು ಮತ್ತಷ್ಟು ನಿರ್ದಿಷ್ಟಗೊಂಡಿರುವಂತವು.

ಸಾಮಾನ್ಯ ಗುಣಲಕ್ಷಣ ಮತ್ತು ಸ್ವಭಾವಗಳನ್ನು ಹೊಂದಿರುವ ಒಂದೊಂದು ಜೀವಿಗಳ ಗುಂಪುಗಳೇ ಪ್ರಾಥಮಿಕ ಸಮೂಹಗಳಾಗಿ ರೂಪುಗೊಂಡು ಕುಲಗಳಾಗಿ ಹೆಸರಾದವು.

ಮನುಷ್ಯರ ಪ್ರಾಣಿಕುಲಗಳು

ಇದರಲ್ಲಿ ನನಗೆ ಬಹಳ ಆಸಕ್ತಿ ಮತ್ತು ಕುತೂಹಲ ಕೆರಳಿಸಿದ್ದು ಮನುಷ್ಯನ ಕುಲಗಳು ಪ್ರಾಣಿಗಳ ಕುಲಗಳೊಡನೆ ಸಮೀಕರಿಸಿಕೊಂಡಿದ್ದು, ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಪ್ರಾಣಿಗಳ ಹೆಸರುಗಳನ್ನು ಮುಕ್ತವಾಗಿ ಬಳಸಿಕೊಳ್ಳುವ ರೂಢಿಯಿದೆ. (ಇದರ ಬಗ್ಗೆ ದೇವಿಪ್ರಸಾದ್ ಚಟ್ಟೋಪಾಧ್ಯಾಯ ತಮ್ಮ ಲೋಕಾಯತದಲ್ಲಿ ನಾನಾ ರೀತಿಗಳಲ್ಲಿ ವಿಶ್ಲೇಷಿಸಿದ್ದಾರೆ) ಬುಡಕಟ್ಟು ಸಮುದಾಯದವರು (ಸಮೂಹ ಪರಿಶಿಷ್ಟಗೊಂಡು ಸಮುದಾಯಗಳಾದವು) ತಮ್ಮ ಗುಂಪುಗಳನ್ನು ಅಥವಾ ಗಣಗಳನ್ನು ಪ್ರಾಣಿಗಳ ಹೆಸರಿನಲ್ಲಿ ಕರೆದುಕೊಳ್ಳುತ್ತಾರೆ. ಕೆಲವೊಮ್ಮೆ ಪ್ರಾಣಿಗಳಂತೆ ಅರಣ್ಯದ ಇತರ ವಸ್ತುಗಳ ಜೊತೆ ಸಮೀಕರಿಸಿಕೊಳ್ಳುತ್ತಾರೆ. ವೇದಗಳಲ್ಲಿ, ಅರಣ್ಯಕಗಳಲ್ಲಿ, ಉಪನಿಷತ್ತುಗಳಲ್ಲಿ ಕೂಡ ತೈತ್ತಿರೀಯ (ತಿತ್ತಿರ ಎಂಬ ಪಕ್ಷಿ), ಮಾಂಡೂಕೇಯ (ಕಪ್ಪೆ), ಶಾರ್ದೂಲೀಯ (ಹುಲಿ), ಪಿಪ್ಪಲಾದ (ಯಾವುದೋ ಪಕ್ಷಿ), ಶೌನಕ (ನಾಯಿ) ಹೀಗೆ ಅನೇಕ ಉಲ್ಲೇಖಗಳಿವೆ. ಇನ್ನು ಜನರ ಗುಂಪುಗಳಿಗೆ ಮತ್ತು ವ್ಯಕ್ತಿಗಳಿಗೂ ಪ್ರಾಣಿಗಳ ಹೆಸರುಗಳನ್ನೇ ಇಟ್ಟಿರುತ್ತಿದ್ದರು. ಕೌಶಿಕ (ಗೂಬೆ), ಮಾಂಡೂಕೇಯ (ಕಪ್ಪೆ), ಗೋತಮ (ಎತ್ತು), ವತ್ಸ (ಹಸುವಿನ ಕರು), ಶುನಕ (ನಾಯಿ), ಕಾಪೇಯ (ಕೋತಿ) ಅಲ್ಲದೇ ಋಗ್ವೇದದಲ್ಲಿ 'ಅಜರು' (ಮೇಕೆಗಳು), ಸಿಗ್ರುಗಳು (ಒಂದು ತರಹದ ಮೂಲಂಗಿ), ಮತ್ಸ್ಯರು (ಮೀನುಗಳು), ಮಾತಂಗರು (ಆನೆ) ಹೀಗೆ ಅನೇಕ ಜನಸಮುದಾಯಗಳೂ ಕೂಡ ಪ್ರಾಣಿಗಳ ಸಂಕೇತಗಳಿಂದಲೇ ಹೆಸರಿಸಲ್ಪಟ್ಟಿದ್ದವು. ಸಮುದ್ರದಲ್ಲಿ ಮೀನು ಹಿಡಿಯುತ್ತಾ ಸಮುದ್ರದ ಮೇಲೆಯೇ ಬದುಕುತ್ತಿದ್ದ ಜನರನ್ನೇ ರೂಪಕಾಲಂಕಾರದಲ್ಲಿ ಮತ್ಸ್ಯರು ಎಂದರೋ, ಬಯಲು ಪ್ರದೇಶಗಳಲ್ಲಿ ಬೃಹತ್ ಮೊತ್ತದಲ್ಲಿ ಮೇಕೆಗಳನ್ನು ಸಾಕುತ್ತಾ ಅವುಗಳ ಮೇಲೆಯೇ ತಮ್ಮ ಜೀವನವನ್ನು ಕಟ್ಟಿಕೊಂಡಿದ್ದ ಜನರನ್ನು ಅಜರು ಎಂದರೋ, ಒಟ್ಟಿನಲ್ಲಿ ಭಾರತವೆಂದು ಈಗ ಗುರುತಿಸಿಕೊಂಡಿರುವಂತಹ ಈ ಹಳೆಯ ಭೂಭಾಗದಲ್ಲಿ ಮಾತ್ರವಲ್ಲ, ಪ್ರಾಚೀನ ಆಫ್ರಿಕಾ ಮತ್ತು ಅಮೆರಿಕದ ಬುಡಕಟ್ಟುಗಳಲ್ಲಿ ಕೂಡ ಈ ಪದ್ಧತಿಯನ್ನು ಕಾಣುತ್ತೇವೆ. ಸೆನೆಕಾ ಎಂಬ ಅಮೆರಿಕದ ಪ್ರಾಚೀನ ಬುಡಕಟ್ಟುಗಳು ಹಲವು ಕುಲಗಳಾಗಿ ಕವಲೊಡೆದಿವೆ. ಆ ಕುಲಗಳೆಲ್ಲವೂ ಕರಡಿ, ತೋಳ, ಆಮೆ, ಜಿಂಕೆ, ಹದ್ದು ಹೀಗೆ ಪ್ರಾಣಿಗಳ ಹೆಸರಿನಲ್ಲಿವೆ. ಓಜಿಬ್ವ ಎಂಬ ಬುಡಕಟ್ಟಿನಲ್ಲಿ ಕೊಕ್ಕರೆ, ಕರಡಿ, ತೋಳ ಹೀಗೆ ಹೆಸರುಗಳಿವೆ. ಹೀಗೆ ಪ್ರಾಣಿಗಳಿಂದ ಅಥವಾ ಸಸ್ಯಗಳಿಂದ ಹೆಸರು ಪಡೆಯುವುದನ್ನು ಕುಲದೇವತಾ ಪದ್ಧತಿ ಎಂದು ಕರೆಯುತ್ತಾರೆ. ಟೋಟೆಮ್ ಎಂಬುದು ಅಮೆರಿಕದ ಓಜಿಬ್ವ ಬುಡಕಟ್ಟುಗಳ ಆಡುಭಾಷೆಯಿಂದ ಬಂದ ಪದ. ಈ ಪದ್ಧತಿ ಆಸ್ಟ್ರೇಲಿಯಾ, ಅಮೆರಿಕ, ಏಷ್ಯಾ, ಆಫ್ರಿಕಾ, ಭಾರತ ಹೀಗೆ ಹಲವೆಡೆ ನೋಡಸಿಗುತ್ತದೆ. ಹೀಗೆ ಜನ ಸಮೂಹಗಳು ಏಕಾಗಿ ಪ್ರಾಣಿಗಳನ್ನು ತಮ್ಮ ಲಾಂಛನವನ್ನಾಗಿ ಸ್ವೀಕರಿಸುತ್ತಿದ್ದದ್ದು ಮಾತ್ರವಲ್ಲದೇ ಆರಾಧಿಸುತ್ತಿದ್ದರು. ಅವರು ಹಾಗೆ ಪ್ರಾಣಿಗಳನ್ನು ತಮ್ಮೊಂದಿಗೆ ಹೆಸರಿಸಿಕೊಳ್ಳುವುದಕ್ಕೆ ಬಲವಾದ ಕಾರಣಗಳೇ ಇರುತ್ತವೆ. ಅದು ಈಗ ನಮಗೆ ಸರಳವಾಗಿಯೋ ಅಥವಾ ಪರಿಗಣಿಸಲಾಗದಂತಹ ವಿಷಯವೆಂದೆನಿಸುವುದೇನೋ ಆಗಬಹುದು. ಆದರೆ ಆಗಿನ ಕಾರಣಗಳು ಮಾತ್ರ ಬಹಳ ಗಂಭೀರ ಮತ್ತು ಮಹತ್ತರವಾದದ್ದು.

ತೋಡಾ ಬುಡಕಟ್ಟಿನವರು ಎಮ್ಮೆಗಳನ್ನು ತಮ್ಮ ಪವಿತ್ರ ಪ್ರಾಣಿಗಳೆಂದು ಪೂಜಿಸುವುದಲ್ಲದೇ, ಈಗಲೂ ಅದನ್ನು ಹೊರತಾಗಿ ಯಾವ ದೇವರನ್ನೂ ಪೂಜಿಸುವುದಿಲ್ಲ, ಎಮ್ಮೆಯಿಂದ ಹಾಲು ಕರೆಯುವ ಕಾಯಕ ಬಹಳ ಪವಿತ್ರವಾದದ್ದು ಮತ್ತೂ ಕುತೂಹಲಕರವಾದ ಅಂಶವೆಂದರೆ ಸಾಮಾನ್ಯವಾಗಿ ಬುಡಕಟ್ಟುಗಳು ಮಾಂಸಾಹಾರಿಗಳಾಗಿದ್ದು ಇವರೋ ಪಕ್ಕಾ ಸಸ್ಯಾಹಾರಿಗಳಾಗಿದ್ದಾರೆ. ತೋಡ ಈಗ ಉದಕಮಂಡಲ ಮತ್ತು ನೀಲಗಿರಿಯ ಶ್ರೇಣಿಗಳಲ್ಲಿ ಅಲ್ಲಲ್ಲಿ ಚದುರಿದ್ದಾರೆ. ಅವರ ಮುಖಗಳನ್ನು ಮತ್ತು ದೇಹವನ್ನು ಗಮನಿಸಿದರೆ ದ್ರಾವಿಡರ ರೀತಿ ಕಾಣುವುದಿಲ್ಲ, ನಾಗಾಲ್ಯಾಂಡ್, ಅಸ್ಸಾಂ ಕಡೆಯ ಭೌಗೋಳಿಕ ಪ್ರದೇಶಗಳಲ್ಲಿ ಯಾವುದೋ ಇದ್ದಿರಬಹುದು ಎನಿಸುತ್ತದೆ. ಅವರು ಎಲ್ಲಿಂದಲೇ ಬಂದಿರಲಿ, ಅವರ ಪೂರ್ವಿಕರು ಎಮ್ಮೆಗಳನ್ನು ಆರಾಧಿಸಲು ಕಾರಣ ಅಲ್ಲಿ ಮಾಂಸಾಹಾರಕ್ಕೆ ಬೇಟೆಯಾಡಲೂ ಪ್ರಾಣಿಗಳಿರದೇ, ಈ ಎಮ್ಮೆಗಳನ್ನು ಮಾತ್ರ ಹೊಂದಿದ್ದಿರಬಹುದು ಹಾಗೂ ಅದರ ಉತ್ಪನ್ನಗಳನ್ನು ಬಳಸುತ್ತಿದುದರಿಂದ ಅದನ್ನು ಗೌರವದಿಂದ ಕಾಣುತ್ತಿದ್ದರು. ತಮ್ಮ ಜೀವವನ್ನು ಉಳಿಸಿಕೊಳ್ಳಲು, ಜೀವನವನ್ನು ಸಮೃದ್ಧಿಯಿಂದ ಸಾಗಿಸಲು ಆಸರೆಯಾಗಿರುವ ಪ್ರಾಣಿ ಅಥವಾ ವಸ್ತುವಿನ ಬಗ್ಗೆ ಉಂಟಾಗುವ ಸಹಜ ಗೌರವವೇ ಮತ್ತು ಅವಲಂಬನೆಯೇ ಆ ಪ್ರಾಣಿ ಅಥವಾ ವಸ್ತುವನ್ನು ಆರಾಧನಾ ಮಟ್ಟಕ್ಕೆ ಒಯ್ಯುತ್ತದೆ. ಒಟ್ಟಾರೆ ತಮಗಿರುವ ಉಪಯುಕ್ತತೆ ಮತ್ತು ಭಾವನಾತ್ಮಕ ವಿಚಾರಗಳಿಂದ ಪ್ರಾಣಿ ಮತ್ತು ಸಸ್ಯಗಳು ಲಾಂಛನ ಮತ್ತು ಆರಾಧನಾ ವಸ್ತುಗಳಾದವು. ಸರಿ, ಅದನ್ನು ಗಾಢಗೊಳಿಸಲು ವಿಶ್ವದ ಶಕ್ತಿಗಳಿಗೆ ಸಮೀಕರಿಸಿ ತಮ್ಮ ಆರಾಧನಾ ಪ್ರಾಣಿಗಳನ್ನು ಮಹತ್ತರವಾದದ್ದೆನಿಸಲು ಪೌರಾಣಿಕ ಕಥೆಗಳು ಹುಟ್ಟಿಕೊಂಡವು.

ಹಾಗೆಯೇ ಯಾವುದಾದರೂ ಸಮೂಹದ ಮೂಲ ಪುರುಷನೆಂದು ಗುರುತಿಸಲ್ಪಟ್ಟ ವ್ಯಕ್ತಿಗೆ ಯಾವುದಾದರೊಂದು ರೀತಿಯಲ್ಲಿ ಸಹಾಯ ಮಾಡಿದ್ದೋ, ಅಥವಾ ಸಕಾರಾತ್ಮಕವಾಗಿ ಸ್ಪಂದಿಸಿದ್ದೋ ಆಗಿದ್ದರೂ ಆ ಪ್ರಾಣಿಗಳನ್ನು ಸಾಂಕೇತಿಕವಾಗಿ ಮಾನ್ಯ ಮಾಡಲು ಪ್ರಾರಂಭಿಸಿರುತ್ತಾರೆ.


ಅದೇನೇ ಇರಲಿ, ಬೈಬಲ್ಲಿನ ಹಳೆಯ ಒಡಂಬಡಿಕೆಗಳಲ್ಲೂ ವಿವಿಧ ಪ್ರಾಣಿಗಳನ್ನು ದೇವರೆಂದು ಪೂಜಿಸುತ್ತಿದ್ದ ಉಲ್ಲೇಖಗಳಿವೆ. ಈಜಿಪ್ಟಿನ ಸಂಸ್ಕೃತಿಯಲ್ಲೂ ಆರಾಧನೆಗೊಳಗಾಗಿರುವ ಬೆಕ್ಕಿನ ಲಾಂಛನ ಮಿಯಾಂಗುಡುತ್ತದೆ.

ಆದರೆ ಮೋಶೆಯಂತಹ ಪ್ರವಾದಿಗಳು ತಮ್ಮ ಉಪಯುಕ್ತವಾದಂತಹ ಅಥವಾ ಪ್ರಾಣಿಲಾಂಛನಗಳಾದ ಹಸುವನ್ನೋ ಮತ್ತೊಂದನ್ನೋ ದೇವರೆಂದು ಪೂಜಿಸುವುದನ್ನು ನಿರಾಕರಿಸಿದರು. ಅದನ್ನು ದೇವರಲ್ಲ ಎಂದೋ ಅಥವಾ ಸುಳ್ಳು ದೇವರುಗಳು ಎಂದು ಕರೆದು ನಿಜವಾದ ದೇವರ ಕಡೆಗೆ ತಮ್ಮ ಪ್ರಾರ್ಥನೆ ಮತ್ತು ಆರಾಧನೆಗಳನ್ನು ಹೊರಳಿಸಬೇಕೆಂದು ತಮ್ಮ ಜನರಲ್ಲಿ ಸುಧಾರಣೆ ತರಲು ಯತ್ನಿಸಿದರು.

ಆದರೆ, ಇಲ್ಲೊಂದು ಸೂಕ್ಷ್ಮವನ್ನು ನಾವು ಕೈತಪ್ಪಿ ಹೋಗುವಂತೆ ಮಾಡಿಕೊಳ್ಳುತ್ತಿದ್ದೇವೆ. ಅದೇನೆಂದರೆ ಪ್ರಾಣಿಗಳನ್ನು ಭೌತಿಕವಾಗಿ ಗುರುತಿಸುತ್ತಾ ಅವುಗಳೊಂದಿಗೆ ತಮ್ಮ ವ್ಯಾವಹಾರಿಕ ಜೀವನವನ್ನು ಗುರುತಿಸಿಕೊಳ್ಳುತ್ತಾ ಹೆಸರಿಸಿಕೊಳ್ಳುವುದರ ಬಗ್ಗೆ ಮಾತಾಡುತ್ತಾ ಆಳಕ್ಕಿಳಿಯದೇ ಹೋಗುತ್ತಿದ್ದೇವೆ.

ಗಮನಿಸಿ, ಒಂದೊಂದು ಪ್ರಾಣಿಯೂ ಒಂದೊಂದು ಬಗೆಯ ಚಾತುರ್ಯವನ್ನು, ಸಾಮರ್ಥ್ಯವನ್ನು, ಜೀವನ ಪದ್ಧತಿಯನ್ನು ನೈಸರ್ಗಿಕವಾಗಿ ಹೊಂದಿರುತ್ತದೆ. ಕೋತಿ ಕೊಂಬೆಯಿಂದ ಕೊಂಬೆಗೆ ಹಾರುವಂತಹ ಶಕ್ತಿಯಿದ್ದರೆ, ಚಿರತೆಗೆ ವೇಗವಾಗಿ ಓಡುವ ಶಕ್ತಿ, ಆನೆಗೆ ಭಾರವನ್ನೆತ್ತುವ, ಎಳೆವ, ಹೊರುವ ಶಕ್ತಿಯಾದರೆ, ಜೇನ್ನೊಣದಂತಹ ಚಿಕ್ಕ ನೊಣದಲ್ಲಿ ಹೂವಿನಲ್ಲಿರುವ ಮಕರಂದವನ್ನು ಹೀರುವ, ಅದನ್ನು ತನ್ನ ಜೇನುಗೂಡಿನ ರೊಟ್ಟಿತಟ್ಟಿಗಳಲ್ಲಿ ಸಂಗ್ರಹಿಸುವ ಶಕ್ತಿ. ಈ ಎಲ್ಲಾ ಸಾಮರ್ಥ್ಯ, ಚಾತುರ್ಯ, ಜೀವನ ಕ್ರಮಗಳ ಹಿಂದಿರುವ ಒಂದು ಸಾಮಾನ್ಯ ಅಂಶ "ಶಕ್ತಿ". ನೈಸರ್ಗಿಕ ಶಕ್ತಿ.


ಈ ಶಕ್ತಿಗಳಿಗೂ ಮನುಷ್ಯನಿಗೂ ಏನು ಸಂಬಂಧ. ಇವುಗಳು ಕುಲಗಳ ಸಂಕೇತಗಳಾಗಲು ಏನಾದರು ಕಾರಣವಿದೆಯೇ? ಕುಲಾಚಾರವೆಂದರೇನು? ಕುಲಕ್ಕೆ ಆಚಾರವಾದರೂ ಏಕೆ ಬೇಕು? ತಂತ್ರ ಸಾಧನೆಗಳಿಗೂ ಈ ಕುಲಗಳಿಗೂ ಇರುವ ಸಂಬಂಧವೇನು? ಮುಂದೆ ನೋಡೋಣ. ■



‘ಬುಲೆಟ್ ಬಸ್ಸ್ಯಾ ಪಾರ್ಟ್-2’ನಲ್ಲಿ ಮೋದಿ

ಮೋದಿ ಪ್ರಧಾನಿಯಾಗುವುದಕ್ಕೂ ಮೊದಲಿನಿಂದ ಇಲ್ಲಿಯವರೆಗೆ ನಮ್ಮ ಗೌರಿ ಲಂಕೇಶ್ ಪತ್ರಿಕೆಯಲ್ಲಿ ಮೋದಿ ಬಗೆಗಿನ ಅಂಕಣವೊಂದು ನಿರಂತರವಾಗಿ ಬರುತ್ತಿದೆ. ಅದೇ ಜನಪ್ರಿಯ 'ಬೂಸಿ ಬಸ್ಯಾ' ಅಂಕಣ. ಅದನ್ನೇ ನೆನಪಿಸುವಂತೆ ಮೋದಿ ಈಗ ಹೊಸ ಗೆಟಪ್ಪಿನಲ್ಲಿ 'ಮುಖ ಉಳಿಸಿಕೊಳ್ಳಲು' ನಾಟಕಕ್ಕಿಳಿದಿದ್ದಾನೆ. ಅದೇ 'ಬುಲೆಟ್ ಬಸ್ಯಾ ಮೋದಿ'.

ಮನುಗಳಿಗಷ್ಟೇ ಅಲ್ಲ ಜೀವಗಳಿಗೂ ಕೂಡ ಎಕ್ಸ್‌ಪೈರಿ ಡೇಟ್‌ಗಳಿರುತ್ತವೆ. ಅಂಥಾದ್ದರಲ್ಲಿ ನ್ಯೂಸ್‌ಗಳಿಗಿರುವುದಿಲ್ಲವೇ? ಎಂಥದ್ದೇ ಘನ ಘೋರ ದುರಂತ, ಸಾವುನೋವು, ಮಾರಣಹೋಮ, ವೈಚಿತ್ರ್ಯಗಳು ಸಂಭವಿಸಿರಲಿ ಒಂದೆರಡು ದಿನ ಅದನ್ನು ಕುರಿತ ಸುದ್ದಿ ವಿಜೃಂಭಿಸಿ ನಂತರ ಅವು ಜನಮಾನಸದಿಂದ ಮರೆಯಾಗಿಬಿಡುತ್ತವೆ. ಇಂತಹ ವಿಚಾರಗಳಿಗೆ ಆ ಕ್ಷಣದ ಪ್ರತಿಕ್ರಿಯೆಯೇ ನಿಜವಾದ ಪ್ರತಿಕ್ರಿಯೆ ಎನಿಸುತ್ತದೆಯೇ ವಿನಃ ವಿಚಾರ ಹಳಸಿದ ಮೇಲೆ ಬರುವ ಪ್ರತಿಕ್ರಿಯೆಗಳು ಸಹಜತೆಯನ್ನು ಕಳೆದುಕೊಂಡಿರುತ್ತವೆ.



ದೇಶ ವಿದೇಶ ಎಂದು ಹೋದಹೋದಲ್ಲಿ ಭೀಕರ ಮಾತುಗಾರಿಕೆಗೇ ಕುಖ್ಯಾತನಾಗಿದ್ದ ಮೋದಿ ದೇಶದ ಜವಾಬ್ದಾರಿಯುತ ಪ್ರಧಾನಿಯಾಗಿ ಇಲ್ಲಿ ನಡೆದ ಘಟನೆಗಳಿಗೆ ಉತ್ತರದಾಯಿಯಾಗಿಯೂ ಅಂತಹ ವಿಚಾರಗಳಿಗೆ ತಕ್ಷಣ ಪ್ರತಿಕ್ರಿಯಿಸುವುದಿಲ್ಲ. ಆದರೆ ಯಾವಾಗ ಆ ವಿಚಾರ ತನ್ನ ಬುಡ ಅಲುಗಾಡಲು ಮೂಲವಾಗುವುದೆಂಬ ಮುನ್ಸೂಚನೆ ಸಿಕ್ಕಾಗ ಬಾಯಿ ತೆರೆದು ಸ್ಮೃತಿ ಇರಾನಿಯಂತೆ ನಾಟಕೀಯ ಡೈಲಾಗ್‌ಗಳನ್ನು ಹೊಡೆಯುತ್ತಾನೆ. ಇಂಥದ್ದೇ ಸನ್ನಿವೇಶ ಗುಜರಾತ್ ಉನಾ ಘಟನೆ ಸಂಬಂಧ ದಲಿತರು ತಿರುಗಿಬಿದ್ದಾಗ ಇದು ತನ್ನ ಅಸ್ತಿತ್ವಕ್ಕೆ ಕಂಟಕ ಎಂದರಿತು ಈಗ ಮೋದಿ ಭಯಾನಕವಾಗಿ ಬಾಯಿ ಬಿಚ್ಚಿದ್ದಾನೆ. ಸದಾ ಇನ್ನಿಲ್ಲದ ಭದ್ರ ಸೆಕ್ಯುರಿಟಿ ವ್ಯವಸ್ಥೆ, ಪ್ರಾಮಾಣಿಕ ಮಾಧ್ಯಮಗಳಿಂದ ಅಂತರವಿರಿಸುವಿಕೆಯಲ್ಲೇ ಇರುವ ಮೋದಿ ಈಗ “ದಲಿತರಿಗೆ ಗುಂಡಿಕ್ಕುವ ಬದಲು ನನಗೆ ಗುಂಡಿಕ್ಕಿ” ಎಂದು ನಾಟಕವಾಡುತಿದ್ದಾನೆ. (ಸ್ಮೃತಿ ಇರಾನಿಯ ತನ್ನ ತಲೆ ಕಡಿದು ಪಾದಕ್ಕಿಡುವೆ ಡೈಲಾಗ್‌ನಂತೆ) ಈ ಮಾತು ನಿಜವೇ ಆಗಿದ್ದರೆ ಆತ ಸೆಕ್ಯುರಿಟಿ ಇಲ್ಲದೇ ಹೊರಬಂದ ಒಂದೇ ದಿನದಲ್ಲಿ ಆತನ ಪಾಪದ ಪ್ರಾಯಶ್ಚಿತ್ತ ಖಚಿತ. ಇದು ಗೊತ್ತಿದ್ದೂ ತನ್ನವರ ದುಷ್ಕಾರ್ಯ ಹಾಗೂ ದಲಿತರ ಓಟಿನ ನಡುವಿನ ಕಂದಕ ಮುಚ್ಚಲು 'ಬುಲೆಟ್ ಬಸ್ಯಾ' ಡೈಲಾಗ್ ಉದುರಿಸುತ್ತಿದ್ದಾನೆ ಈ ಬೂಸಿ ಬಸ್ಯಾ. ಮೋದಿಯ ಮಾತು ನಿಜಕ್ಕೂ ಪ್ರಾಮಾಣಿಕವಾಗಿದ್ದಲ್ಲಿ ದೊಡ್ಡ ದೊಡ್ಡ ಮಾತು ಬೇಡ; ದಲಿತರಿಗೆ ದೇಶಾದ್ಯಂತ ಹಲ್ಲೆ ಮಾಡಿದ ಈ ಗೋಸೇವಕರನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸುವ ಸಹಜ ಕಾನೂನು ಪ್ರಕ್ರಿಯೆಗೆ ಅವಕಾಶ ಮಾಡಿಕೊಡಲಿ ನೋಡುವ. ಅದು ಈ ಬೂಸಿ ಬಸ್ಯಾನಿಂದ ಸಾಧ್ಯವೇ?

-ಎ.ಎಮ್.ಎಸ್. ನೆಲ್ಲಿಕಾರ್

ಸಂಘಿಗಳಿಗೆ ಶೂದ್ರರು ಟಿಶ್ಯು ಪೇಪರ್ ಅಷ್ಟೇ

ಮೂರು ವರ್ಷಗಳ ಹಿಂದೆ ಸಂಘ ಪರಿವಾರದವರು ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿ ಜನರ ಅಭಿಪ್ರಾಯಗಳನ್ನು ಕಾಂಗ್ರೆಸ್ ವಿರುದ್ಧ ಹಾಗೂ ತಮ್ಮ ಪಕ್ಷದ ಪರವಾಗಿ ತಿರುಗಿಸುವಲ್ಲಿ ಯಶಸ್ವಿಯಾಗಿದ್ದರು. ಲೋಕಸಭಾ ಚುನಾವಣೆಯ ನಂತರವೂ ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆ ಕಾಲಕ್ಕೂ ಅದನ್ನೇ ಅವರು ಮುಂದುವರಿಸಿದ್ದರು. ಆದರೆ ಅದು ಅಷ್ಟು ಫಲಕಾರಿಯಾಗಲಿಲ್ಲ, ಮೇಲಾಗಿ ಈಗ ಅದುವೇ ಅವರಿಗೆ ಉಲ್ಟಾ ಹೊಡೆಯುತ್ತಿದೆ. ಈಗ ಸಾಮಾನ್ಯ ಜನರು ಸಂಘಿಗಳ ಆಟ ಚೆನ್ನಾಗಿ ಅರಿತು ಅವರ ಅಸ್ತ್ರವನ್ನು ಅವರ ವಿರುದ್ಧವೇ ಬಳಸುತ್ತಿದ್ದಾರೆ. ಗುಜರಾತಿನ ಉನಾದಲ್ಲಿ ಸಂಘಿಗಳೇ ಚಿತ್ರೀಕರಿಸಿದ ದಲಿತರ ಮೇಲಿನ ಅವರದೇ ಹಲ್ಲೆಯ ವಿಡಿಯೋ ಅವರಿಗೇ ಉಲ್ಟಾ ಹೊಡೆದು ಇಡೀ ಭಾರತದ ದಲಿತರು ಮತ್ತು ಪ್ರಜ್ಞಾವಂತರು ಸಿಡಿದೇಳುವಂತೆ ಮಾಡಿದೆ. ಉನಾ ಪ್ರಕರಣದ ನಂತರ ಪ್ರಜ್ಞಾವಂತರು ಸೋಷಿಯಲ್ ಮೀಡಿಯಾದಲ್ಲಿ ಪ್ರಸಾರ ಮಾಡಿದ ಕೆಲವು ಫೋಟೋಗಳು ತುಂಬಾ ಪರಿಣಾಮಕಾರಿಯಾಗಿದ್ದವು. ಅವುಗಳಲ್ಲಿ ಗುಜರಾತಿನ ರಸ್ತೆಗಳಲ್ಲಿ ದಲಿತರು ಬಿಸಾಡಿಹೋದ ಸತ್ತ ದನಗಳ ಶವಗಳು ಮತ್ತು ಎಲುಬಿನ ಹಂದರಗಳ ಫೋಟೋಗಳು, ಹಾಗೂ ಅವುಗಳನ್ನು ಕೈಯಿಂದ ಮುಟ್ಟದೇ ಉದ್ದದ ಕೋಲು, ಕ್ರೇನು, ಹಗ್ಗ ಉಪಯೋಗಿಸಿ ತೆರವುಗೊಳಿಸಲು ಹರಸಾಹಸ ಪಡುತ್ತಿರುವ ಮೇಲ್ಜಾತಿಯವರ ಫಜೀತಿ ನೋಡುವಾಗ ನಮ್ಮ ಸಮಾಜಕ್ಕೆ ದಲಿತರು ಯುಗಯುಗದಿಂದ ಮಾಡುತ್ತಿದ್ದ ಸೇವೆಯ ಮೌಲ್ಯ ಜನಗಳಿಗೆ ಅರ್ಥವಾಗುವಂತಾಯಿತು.

“ನಿಮ್ಮ ತಾಯಿಯ ಶವವನ್ನು ನೀವೇ ಎತ್ತಿ” ಎಂದು ದಲಿತರು ಹೇಳಿದ್ದಂತೂ ಅದ್ಭುತವಾಗಿತ್ತು, ಗೋವು ತಮ್ಮ ತಾಯಿ ಎಂದು ಬೊಬ್ಬಿರಿಯುತ್ತಿದ್ದ ಸಂಘಿಗಳ ಆಷಾಢಭೂತಿತನ ಈ ದಲಿತರ ಸವಾಲಿನಿಂದ ಹೊರಬಂದಿತು. ಅವರ ತಾಯಿಯ ಶವ ಕೊಳೆಯುತ್ತಾ ರಸ್ತೆಬದಿ ಬಿದ್ದಿರುವುದುನ್ನು ನೋಡಿ ಸಂಘಿಗಳ ಮನ ಕರಗಲಿಲ್ಲ; ಆದರೆ ಅವರ ಮಡಿವಂತಿಕೆ ಮತ್ತು ಬೂಟಾಟಿಕೆ ಕರಗಿತು. ಅಮಿತಾಭ್ ಬಚ್ಚನ್ ಗುಜರಾತ್ ರಾಜ್ಯ ಪ್ರವಾಸೋದ್ಯಮದ ಬ್ರಾಂಡ್ ಅಂಬ್ಯಾಸಡರ್ ಆಗಿದ್ದು “ಬನ್ನಿ ಗುಜರಾತಿನಲ್ಲಿ ಕೆಲದಿನ ಕಳೆಯಿರಿ” ಎಂದು ಆಹ್ವಾನಿಸುವ ಕ್ಯಾಪ್ಷನ್‌ಉಳ್ಳ ಅವರ ಫೋಟೋ ನಾಡಿನ ಎಲ್ಲಾ ಪತ್ರಿಕೆಗಳಲ್ಲಿ ತುಂಬಾ ಸಮಯದಿಂದ ರಾರಾಜಿಸುತ್ತಿತ್ತು, ಇದನ್ನು ಕೆಲವರು ಮಾರ್ಫ್ ಮಾಡಿ ಅದೇ ಫೋಟೋದಲ್ಲಿ ಅಮಿತಾಭರು ಸುತ್ತ ಸತ್ತ ದನಗಳ ಹಲವಾರು ಕೊಳೆತ ಶವಗಳ ನಡುವೆ ನಿಂತು ಗರ್ವದಿಂದ ಹೇಳುತ್ತಾರೆ “ಬನ್ನಿ ಈ ಗುಜರಾತಿನಲ್ಲಿ ಕೆಲದಿನ ಕಳೆಯಿರಿ!” ನೂರಾರು ಕೊಳೆತ ದನಗಳ ಶವದ ನಡುವೆ ಒಬ್ಬ ಸೆಲೆಬ್ರಿಟಿ! ಈ ಅದ್ಭುತ ಐಡಿಯಾ ಸೋಷಿಯಲ್ ಮೀಡಿಯಾದಲ್ಲಿ ದೇಶವಿದೇಶದಲ್ಲಿ ಎಲ್ಲರ ಮನಸ್ಸನ್ನು ತಾಕಿತು. ಅದರ ನಂತರವೇ ನ್ಯೂಯಾರ್ಕ್ ಟೈಮ್ಸ್ ಮೋದಿಯ ಮುಖಕ್ಕೆ ಗುದ್ದಿ ಸಂಪಾದಕೀಯ ಬರೆದದ್ದು ಮತ್ತು ವಿಶ್ವದ ಮಾನವ ಹಕ್ಕು ಸಂಘಟನೆಗಳು ಭಾರತ ಸರಕಾರದ ಮೇಲೆ ಮುಗಿಬಿದ್ದದ್ದು. ಇದರ ಹೊಡೆತಕ್ಕೆ ಕೊನೆಗೂ ಮೋದಿಯ ಬಾಯಿ ತೆರೆಯುವಂತಾಯಿತು ಹಾಗೂ ಗೋರಕ್ಷಕರೆಲ್ಲಾ ಕ್ರಿಮಿನಲ್ಲುಗಳು ಎಂದು ಮೋದಿ ಕೃತ್ರಿಮವಾಗಿ ಹಲುಬುವಂತಾಯಿತು. ಇದುವೇ ಸಾಮಾಜಿಕ ಜಾಲತಾಣಗಳ ಧನಾತ್ಮಕ ತಾಕತ್ತು.

ಮೋದಿಯ ಆಕ್ರೋಶಕ್ಕೆ ತುತ್ತಾಗಿದ್ದು ಸಂಘಿಗಳು ಹುಟ್ಟು ಹಾಕಿದ ಹೊಡಿ-ಬಡಿ ಪುಂಡ ಗುಂಪುಗಳಾದ ಬಜರಂಗದಳ, ಗೋರಕ್ಷಾ ಸೇನೆ ಮುಂತಾದ ಶೂದ್ರರ ಗುಂಪು ಮಾತ್ರ. ಮೂಲತಃ ಗೋವು ಹಿಂದೂಗಳ ತಾಯಿ (ಹೋರಿ ತಂದೆ) ಎಂಬ ಮೂರ್ಖ ಕಲ್ಪನೆ ಹುಟ್ಟುಹಾಕಿ ಶೂದ್ರರ ಹಾದಿ ತಪ್ಪಿಸಿದವರು ಬ್ರಾಹ್ಮಣರು. ಆದರೂ ಬ್ರಾಹ್ಮಣರ ಆರ್‌ಎಸ್‌ಎಸ್ ಗುಂಪು ಮಾತ್ರ ಮೋದಿಯ ಆಕ್ರೋಶಕ್ಕೆ ತುತ್ತಾಗಲಿಲ್ಲ, ಇದರ ಅರ್ಥ ಸಂಘಿಗಳಿಗೆ ಮಧ್ಯಮ ಜಾತಿಯ ಶೂದ್ರರೆಂದರೆ ಬೇಕಾದಾಗ ಉಪಯೋಗಿಸಿ ಬಿಸಾಡುವ ಟಿಶ್ಯು ಪೇಪರ್ ಅಷ್ಟೇ. ಇನ್ನಾದರೂ ಶೂದ್ರರು (ಮಧ್ಯಮ ಸ್ತರದ ಜಾತಿಗಳವರು) ಆರ್‌ಎಸ್‌ಎಸ್‌ನವರ ಈ ಕುಟಿಲನೀತಿ ಅರಿತುಕೊಳ್ಳಬಲ್ಲರೇ?

ಕುವೆಂಪುರವರು ದಶಕಗಳ ಹಿಂದೆ ಬರೆದ ಜಲಗಾರ ಕವಿತೆಯ ಈ ಸಾಲುಗಳು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತಿವೆ: ಮೊದಲ ಶಕ್ರನು ಮೊದಲ ಬೆಪ್ಪನ ಸಂಧಿಸಲು ಸಂಭವಿಸಿತು ಮತವೆಂಬ ಮತಿವಿಕಾರ. ದೊರೆ ಪುರೋಹಿತರು ಅವಳಿ ಮೊಲೆಯೂಡಿ ಸಲುಹಿದರದನು, ಮತದ ಮದಿರೆಯ ನೀಡಿ ಮಂಕು ಬಡಿಸಿದರು ಜನಕೆ, ಕೊನೆಯ ದೊರೆಯ ಕೊರಳಿಗೆ ಆ ಕೊನೆಯ ಪುರೋಹಿತನ ಕರುಳು ಉರುಳಾಗುವವರೆಗೆ ಸುಖವಿಲ್ಲ ಈ ಧರೆಗೆ!

ಇಲ್ಲಿ ಪುರೋಹಿತ ಎಂದರೆ ಈಗಿನ ಆರ್‌ಎಸ್‌ಎಸ್ ಮತ್ತು ದೊರೆ ಎಂದರೆ ಪ್ರಬಲ ಮೇಲ್ಜಾತಿ ಶೂದ್ರರು. ಅಂದರೆ ಆರ್‌ಎಸ್‌ಎಸ್ ನವರ ಕರುಳು ಬಜರಂಗಿ ಮತ್ತು ಗೌರಕ್ಷಕ ಶೂದ್ರರ ಕೊರಳಿಗೆ ಉರುಳಾಗುವವರೆಗೆ ನಾಡಿಗೆ ಸುಖವಿಲ್ಲ ಎಂಬುದನ್ನು ಮೊದಲೇ ಊಹಿಸಿದ್ದ ಕುವೆಂಪು ಭಾರತದ ಇಂದಿನ ಸಾಮಾಜಿಕ ಸ್ಥಿತಿಯ ಕರಾರುವಾಕ್ಕು ಭವಿಷ್ಯ ಹೇಳಿದ ನೊಸ್ಟ್ರಾಡಮಸ್ ಎನ್ನಲೇ ಬೇಕು.

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು.

ಸಂಘಿಗಳಿಗೆ ವೋಟು ಗಳಿಸಲು ಕ್ರೈಸ್ತ-ಮುಸ್ಲಿಂ-ದಲಿತ ವೈರಿಗಳು ಬೇಕು

ಸಿದ್ಧರಾಮಯ್ಯನವರ ಮಗ ತೀರಿಕೊಂಡಾಗ ಸಂಘಿಗಳಿಗೆ ವಿಕೃತ ಖುಷಿಯಾಗಿರಬಹುದು, ಆದರೆ ಸೋನಿಯಾ ಗಾಂಧಿ ಅಸ್ವಸ್ಥರಾಗಿ ತೀವ್ರ ನಿಗಾ ಘಟಕದಲ್ಲಿ ಇರುವುದನ್ನು ಕೇಳಿದ ಸಂಘ ಪರಿವಾರದ ಜಂಘಾಬಲ ಉಡುಗಿಹೋಯಿತಂತೆ. ಹಾಗಾಗಿ ಸೋನಿಯಾರಿಗೆ ಏನೂ ಆಗದಿರಲಿ ಎಂದು ಸಂಘಿಗಳು ದೇವಸ್ಥಾನಗಳಲ್ಲಿ ದೊಡ್ಡ ದೊಡ್ಡ ಹರಕೆ ಹೊತ್ತಿದ್ದು ಎಷ್ಟು ಜನರಿಗೆ ಗೊತ್ತಿದೆ? ಇಂತಹ ಹರಕೆ ಚೆಡ್ಡಿಗಳು ಹೊತ್ತಿದ್ದು ಯಾಕೆ ಗೊತ್ತೇ? ಕಾಂಗ್ರೆಸ್ ಮುಖಂಡರಾಗಿ ಸೋನಿಯಾ ಇಲ್ಲದಿದ್ದರೆ ಯಾವ ವಿಷಯದಲ್ಲಿ ಅಪವಾದ ಹೊರಿಸಿ ಹಿಂದೂಗಳನ್ನು ಕಾಂಗ್ರೆಸ್ ವಿರುದ್ಧ ಎತ್ತಿ ಕಟ್ಟಿ ಹಿಂದೂ ಮತಬ್ಯಾಂಕ್ ಸೃಷ್ಟಿಸಲು ಸಾಧ್ಯ?

ಈಗ ಸೋನಿಯಾ ವಿದೇಶಿ ಮೂಲದವರು ಎಂಬುದು ಮೊದಲನೆಯ ಅಪವಾದ (ವೈದಿಕರಾದ ತಾವೇ ವಿದೇಶಿ ಮೂಲದವರು ಎಂಬುದನ್ನು ಸಂಘಿಗಳು ಮರೆತಿದ್ದಾರೆ). ಸೋನಿಯಾ ಕ್ರೈಸ್ತ ಮತಾವಲಂಬಿ ಎನ್ನುವುದು ಎರಡನೆಯ ಅಪವಾದ. ಅವರು ಗೋಮಾಂಸ ಸೇವಿಸುತ್ತಾರೆ ಎಂಬುದು ಮೂರನೇಯ ಅಪವಾದ. ಅವರು ಮನಮೋಹನ್ ಸಿಂಗರನ್ನು ಕೈಗೊಂಬೆ ಮಾಡಿಕೊಂಡಿದ್ದರು ಎಂಬುದು ನಾಲ್ಕನೇ ಮೂರ್ಖ ಆರೋಪ. ಕಾಂಗ್ರೆಸ್ ಅವರ ಖಾಸಗಿ ಆಸ್ತಿಯಂತಿದೆ ಎಂಬುದು ಇನ್ನೊಂದು ಆರೋಪ.

ಒಂದುವೇಳೆ ಸೋನಿಯಾ ಮುಖಂಡರಾಗಿರದಿದ್ದರೆ ಕಾಂಗ್ರೆಸ್ ಪಕ್ಷ ನೆಹರೂ ಕುಟುಂಬದ ಆನುವಂಶಿಕ ಪಾರ್ಟಿ ಎಂಬ ಅಪವಾದ ಹೊರಿಸಿ ಜನರನ್ನು ಕಾಂಗ್ರೆಸ್ ವಿರುದ್ಧ ಪ್ರಚೋದಿಸಲು ಬಿಜೆಪಿಗೆ ಸಾಧ್ಯವಾಗಲಾರದು. ಸೋನಿಯಾ ಇರದಿದ್ದರೆ ರಾಹುಲ್ ಗಾಂಧಿಯ ಬದಲಿಗೆ ಕಾಂಗ್ರೆಸ್ ಪಕ್ಷ ಬೇರೊಬ್ಬ ಉನ್ನತ ವಿದ್ಯಾವಂತ, ಬುದ್ಧಿ... ಯುವಕನನ್ನು ತಮ್ಮ ಮುಖಂಡ ಎಂದು ಆರಿಸು... ಸಾಧ್ಯವಾಗುತಿತ್ತು, ಹಾಗೇನಾದರೂ ಆದರೆ ಬಿ... ಸೋನಿಯಾ-ದ್ವೇಷವನ್ನು ಹಾಗೂ ರಾಹುಲರ ದಡ್ಡತ... ಬಂಡವಾಳ ಮಾಡಿಕೊಂಡು ವೋಟು ಗಳಿ... ಸಾಧ್ಯವಾಗಲಾರದು. ಸೋನಿಯಾ ಮತ್ತು ರಾಹುಲ್ ಕಾ... ಮುಖಂಡರಾಗಿರುವವರೆಗೆ ಬಿಜೆಪಿಗೆ ಮನೋವೈ... ಲಾಭವಿದೆ. ಅವರಿರದಿದ್ದರೆ ಈ ಮನೋವೈ... ಪ್ರಯೋಜನ ಕೈತಪ್ಪಿ ಹೋಗಿ, ಬಿಜೆಪಿಯ ಅ... ಬಂಡೆದ್ದು ಬೇರೆ ರಾಷ್ಟ್ರೀಯ ಪಕ್ಷಗಳತ್ತ ಅಥವಾ ಪ್ರಾ... ಪಕ್ಷಗಳತ್ತ ಹೊರಳುವ ಸಾಧ್ಯತೆಯಿದೆ. ನಂತರ ... ಗೋಮಾತೆಯ ಹೆಸರಲ್ಲಿ ವೋಟು ಗಳಿಸಲು ಬಿ... ಸಾಧ್ಯವಾಗಲಾರದು. ಈಗಾಗಲೇ ಗೋವಿನ ಹೆಸರ... ಲಕ್ಷ ಹಣ ಗಳಿಸುತ್ತಿರುವ ಪುಂಡ ಪೋಕರಿ ಕೇಸರಿ ... ವಿರುದ್ಧ ಬಿಜೆಪಿಯೊಳಗೆಯೇ ಭಾರಿ ಅತೃಪ್ತಿ ... (ಪುಣ್ಯಕೋಟಿಯಲ್ಲಿ ಯಾರಿಗೂ ಪುಣ್ಯ ಬೇಕಿಲ್ಲ, ... ಕೋಟಿ ಸಿಕ್ಕರೆ ಸಾಕು.) ಹಾಗಾಗಿಯೇ ತನ್ನ ಲಾಭ... ಬಿಜೆಪಿಗೆ ಸೋನಿಯಾರೇ ಕಾಂಗ್ರೆಸ್ ಮುಖಂ... ಮುಂದುವರಿಯುವುದು ಬೇಕಾಗಿದೆ. ನಿಂದಕರಿರ... ತಮ್ಮಾ ನಿಂದಕರಿರಬೇಕು ಎಂದು ಶರಣರು ಹಾಡಿ... ಆದರೆ ಸಂಘಿಗಳು ಮಾತ್ರ ವೈರಿಗಳಿರಬೇಕು ... ವೈರಿಗಳಿರಬೇಕು ಆದರೆ ಅವರು ದುರ್ಬಲರಿರ... ದ್ವೇಷ ಹರಡಿ ಸುಲಭದ ವೋಟು ಗಳಿಸಲು ... ಮುಸ್ಲಿಂ- ದಲಿತ ವೈರಿಗಳಿರಬೇಕು. ಬೆದರು ಬೊಂ... ರಬೇಕು ಎಂದು ಹಂಬಲಿಸುತ್ತಾರೆ.

-ಆರ್.ಬಿ.ಶೆಣಾವ, ಮಂಗ...

ಮತದಾರರೇ ಮೋಹಿನಿಯಾಗಿ ಭಸ್ಮಾಸುರರನ್ನು ಕೊಲ್ಲಬೇಕಿದೆ

“ಕೆಲವರು ಗೋರಕ್ಷಣೆಯ ಹೆಸರಿನಲ್ಲಿ ಅ... ತೆರೆದುಕೊಂಡು ಕೂತಿದ್ದಾರೆ. ಇವರೆಲ್ಲ ರಾತ್ರಿ... ಸಮಾಜಘಾತುಕ ಕೆಲಸ ಮಾಡುತ್ತಾರೆ. ಹಗಲಲ್ಲಿ ಗೋ... ವೇಷ ಧರಿಸುತ್ತಾರೆ. ಇದು ನನ್ನಲ್ಲಿ ಆಕ್ರೋಶ ತರಿಸು... ಎಂದು ಮೋದಿ ಕಡೆಗೂ ಬಾಯಿ ಬಿಟ್ಟ... “ಕಸಾಯಿಖಾನೆಗಳಲ್ಲಿ ಜೀವ ಕಳೆದುಕೊಳ್ಳುವುದಕ್ಕಿಂತ ... ಸಂಖ್ಯೆಯ ಗೋವುಗಳು ಪ್ಲಾಸ್ಟಿಕ್ ಸೇವಿಸಿ ಸಾಯು... ಗೋಸೇವೆ ಮಾಡುವ ಉದ್ದೇಶ ಹೊಂದಿರುವ ಗೋ... ಗೋವಿನ ಆಹಾರದಲ್ಲಿ ಪ್ಲಾಸ್ಟಿಕ್ ಅಂಶ ಸೇರದಂತೆ ... ಇಡಬೇಕು. ಇದು ಗೋವಿಗೆ ಮಾಡುವ ದೊಡ್ಡ ಸ... ಎಂದೂ ಮೋದಿ ಹೇಳಿದ್ದಾರೆ.

ಕೊಂದರಷ್ಟೇ ಕೊಲೆಯಲ್ಲವೊ ಓ ಭ...



ದನದ ಚರ್ಮದ ಚಪ್ಪಲಿಯಿಂದ ರಕ್ಷಿತವಾದ ನಿಮ್ ತಾತ ಮುತ್ತಾತರ ಸುಂದರ ಪಾದಗಳನ್ನು ಎಂದಾದರೂ ಕಂಡಿರುವಿರಾ ಗೋರಕ್ಷಕರೆ?

ಟಾಟಾ ಬಾಟಾ ಹುಟ್ಟುವ ಸಾವಿರಾರು ವರ್ಷಗಳಿಂದ ನಿಮ್ಮ ವಂಶದ ಕಾಲುಗಳನ್ನು ಕಲ್ಲು ಮುಳ್ಳು ಚುಚ್ಚದಂತೆ ಚಪ್ಪಲಿ ತೊಡಿಸಿ ಕಾಯ್ದಾ ನಮ್ಮ ತಾತ ಮುತ್ತಾತರ ಕೈಗಳನ್ನೆಂದಾದರೂ ಮುಟ್ಟಿರುವಿರಾ ಓ ಬಜರಂಗಿಗಳೆ?

ದನಗಳ ಕುತ್ತಿಗೆ ಮೇಲೆ ಎತ್ತಿನಗಾಡಿ ಕಟ್ಟಿ ವ್ಯವಸಾಯ, ಸುಗ್ಗಿ, ಪ್ರಯಾಣ ಮಾಡಿದ ರೈತರನ್ನು ಥಳಿಸಿದವರನ್ನೆಂದಾದರು ಕಂಡಿದ್ದೀರಾ ಓ ಗೋಪಾಲಕರೆ?

ರಾಜರು ತಮ್ಮ ಯುದ್ಧ ಸಲಕರಣೆಗೆ ಬಳಸಿದ ದನದ ಚರ್ಮ ನಿಮ್ಮ ರಾಜ್ಯ ದೇಶ ರಕ್ಷಿಸಲು ನೆರವಾಗಿದ್ದು ಮರೆತಿದ್ದೀರಾ ಓ ಮತಿಹೀನರೆ?

ನೀವೀಗ 'ಲೆದರ್ ಬೆಲ್ಟ್, ಲೆದರ್ ಬ್ಯಾಗ್, ಲೆದರ್ ಪರ್ಸು, ಲೆದರ್ ಶೂ' ಎಂದು ಹೆಮ್ಮೆಯಿಂದ ಖರೀದಿಸಿ ಬೀಗುತ್ತಿರುವುದು ಯಾವ ಪ್ರಾಣಿಯ ಚರ್ಮದ್ದೆಂದು ತಿಳಿದಿರುವಿರಾ ಓ ಶೋಕಿಲಾಲ್‌ಗಳೆ?

ನೀವು ತಿಕ್ಕುವ ಟೂಥ್ ಪೇಸ್ಟ್, ನುಂಗುವ ಮಾತ್ರೆಯಲ್ಲಿ ಇರುವ ಪುಡಿ ಯಾವ ಪ್ರಾಣಿಯ ಎಲುಬಿನದೆಂದು ತಿಳಿದಿದೆಯಾ ಓ ಆರೋಗ್ಯವಂತರೆ?

ನಿಮ್ಮ ಹಬ್ಬಕ್ಕೆ ರುಚಿ ರುಚಿ ಕರಿದ ತಿಂಡಿ ಮಾ... ನಿಮ್ಮ ಅಜ್ಜಿ ಮುತ್ತಜ್ಜಿ ತರುತ್ತಿದ್ದ ಎಣ್ಣೆ ಕೊಡಲು ... ಪ್ರೀತಿಯ ದನ ಗಾಣದೆತ್ತಾಗಿ ಎಷ್ಟೊಂದು ಬಾರುಕೋ... ಏಟು ತಿಂದು ಸತ್ತಿತೆಂದು ಅರಿವಿದೆಯಾ... ಅರಿವುಗೇಡಿಗಳೆ?

ದೇವಾಲಯ ಕಟ್ಟಲು ಗಾರೆ ಕೆಲಸಕ್ಕೆ ದುಡಿಸಿ ದ... ಬೆನ್ನು ಸವೆಸಿದ ದೈವ ಭಕ್ತರನ್ನು ಥಳಿಸಿರುವ... ಇತಿಹಾಸದಲ್ಲಿ ಎಲ್ಲಾದರೂ ಕಂಡೀದ್ದೀರಾ ಓ ದೈವಭ...

ಹುಲಿ ಸಿಂಹಗಳ ಮುಂದೆ ಫೋಟೊ ತೆಗೆದುಕೊ... ವಾಗ ಅವು ಏನನ್ನು ತಿಂದು ಬೆಳೆದು ಪೋಸು ಕೊ... ಇವೆ ಎಂದು ತಿಳಿದ್ದೀರಾ ಓ ಪೋಸುಗಾರರೆ?

ನೀವು ಸದಾ ಹೊಗಳುವ ಪ್ರಾಣ ರಕ್ಷಿಸೊ ಸೈ... ಏನುಂಡು, ಏನ್ ತಿಂದು ಬೆಳೆದು ಸೈನಿಕರಾಗಿದ್ದಾ... ಅವರ ಹೊಟ್ಟೆ ಹೊಕ್ಕು ನೋಡಿದ್ದೀರಾ ಓ ದೇಶಭ...

ನೀವು ಅನುಭವಿಸುತ್ತಿರೊ ವಿಜ್ಞಾನ ತಂತ್ರಜ್ಞಾ... ಕೊಡುಗೆ ಕೊಟ್ಟ ದೇಶ ವಿದೇಶದ 'ದನತಿಂದ ವ... ಗಳನ್ನ' ಅಂದೇ ನಿಮ್ಮಂತ ಗೋರಕ್ಷಕರು ಕೊಂ... ಡಿಜಿಟಲ್ ಇಂಡಿಯಾಕ್ಕೆ ಬರ್ತಾ ಇದ್ವಾ ಓ ಗಾ... ಪ್ರೀಯರೆ?

ಕೊಂದ್ರೆ ಅಷ್ಟೇ ಕೊಲೆಯಲ್ಲವೋ...

ಬಾರುಕೋಲು, ಮೂಗುದಾರ, ಎತ್ತಿನ ... ಕಂಡುಹಿಡಿದಾಗಲೆ ನಿಮ್ಮ ಗೋಮಾತೆಗೆ ನೀವು ಹಿಂಸೆ... ಶುರುಮಾಡಿದ್ದೀರಿ. ನಿಮ್ಮನ್ನ ಯಾರಾದರೂ ಥಳಿಸಿ... ಓ ಅಹಿಂಸಾವಾದಿಗಳೆ?

ಯಜ್ಞಕುಂಡದಲ್ಲಿ ಬೆಂದೋದ ಲಕ್ಷಾಂತರ ಗೋ... ಐತಿಹಾಸಿಕ ಬೂದಿಯನ್ನು ನಿಮ್ಮ ಹಣೆಗೆ ಹಚ್ಚಿ... ಕೆಡಿಸಿದ್ದು ಯಾರೆಂದು ಸ್ವಲ್ಪ ಚಿಂತಿಸಿ ಓ ಧರ್ಮಾ...

-ಪ್ರಶಾಂತ್ ದಾನಪ್ಪ, ಈ ಮೇಲ್ ಮ...

ಆದೇನೋ ಸರಿ, ಆದರೆ ಈ ಗೋರಕ್ಷಕರೆಂಬ ಭಸ್ಮಾಸುರರನ್ನು ಹುಟ್ಟು ಹಾಕಿದ್ದು ನೀವೇ ತಾನೇ ಮೋದಿಜಿ. ಈಗ ಭಸ್ಮಾಸುರನ ಮೂಲಗುಣದಂತೆ ಅವನು ಎಲ್ಲವನ್ನೂ ಸುಡುತ್ತಾನೆ. ಜತೆಗೆ ವರ ಕೊಟ್ಟ ಶಿವನನ್ನೂ ಭಸ್ಮಾಸುರ ಬಿಡುವುದಿಲ್ಲ. ಈಗ ಮೋಹಿನಿಯಾಗಿ ಅವತರಿಸಿ ಈ ಭಸ್ಮಾಸುರನನ್ನು ಕೊಲ್ಲುವ ಜವಾಬ್ದಾರಿ ಮತದಾರರ ಮೇಲಿದೆ.

ಮೋದಿಯವರೇ ನಿಮ್ಮ ಭಸ್ಮಾಸುರರಿಗೆ ನೀವೇ ಹೊಸ ಅಂಗಡಿ ತೆರೆಯಲು ಈಗ ಮತ್ತೆ ಟಿಪ್ಸ್ ಕೊಟ್ಟಿದ್ದೀರಿ ತಾನೇ?! ಅಂದರೆ ಇನ್ನು ಮುಂದೆ ಅವರು ಬೀದಿಯಲ್ಲಿ ಹೋಗುತ್ತಿರುವ ದನವನ್ನು ಹಿಡಿದು ಅದಕ್ಕೆ ಬಲಾತ್ಕಾರದಿಂದ ಪ್ಲಾಸ್ಟಿಕ್ ತಿನ್ನಿಸಿ ಆಮೇಲೆ ಆ ಪ್ಲಾಸ್ಟಿಕನ್ನು ದನದ ಹೊಟ್ಟೆಯಿಂದ ತೆಗೆಯುವ ಸಾರ್ವಜನಿಕ ಪ್ರದರ್ಶನ ಏರ್ಪಡಿಸಿ ಪ್ಲಾಸ್ಟಿಕ್ ತೆಗೆದದ್ದಕ್ಕಾಗಿ ಸರಕಾರದಿಂದ ಮತ್ತು ಸಾರ್ವಜನಿಕರಿಂದ ಕೋಟಿ ಕೋಟಿ ಹಣ ಪೀಕಿಸುತ್ತಾರೆ. ಈ ಮೂಲಕ ಮತ್ತೆ ಅವರು ಕೋಟ್ಯಾಧೀಶರಾಗುತ್ತಾರೆ. ಪುಣ್ಯಕೋಟಿಯ ಹೆಸರಲ್ಲಿ ಹಣ ಸುಲಿಯುವ 'ಪುಣ್ಯ-ಕೋತಿ' ಆಗುತ್ತಾರೆ ಸಂಘ ಪುಂಡ-ಕೋತಿಗಳು. ಒಟ್ಟಾರೆ ಮೂವತ್ಮೂರು ಕೋಟಿ ದೇವರ ಹೆಸರಲ್ಲಿ ಮೂವತ್ಮೂರು ಕೋಟಿ ಹಣ ಸಂಪಾದಿಸುವುದೇ ಸಂಘಿ ಪುಣ್ಯಕೋಟಿಗಳ ಗುರಿ ತಾನೇ.

ಪೊಲೀಸರು ಆಗಾಗ ಅಕ್ರಮ ದನ ಸಾಗಾಣಿಕೆ ಮಾಡುವವರನ್ನು ಹಿಡಿದ ಬಗ್ಗೆ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗುತ್ತವೆ. ಕಳೆದ ವಾರ ಉಡುಪಿಯಲ್ಲಿ ದನಗಳ್ಳರನ್ನು ಹಿಡಿದು ಅವರ ಟೆಂಪೋದಲ್ಲಿದ್ದ 23 ದನಗಳನ್ನು ಪೊಲೀಸರು ವಶಪಡಿಸಿಕೊಂಡರೆಂದೂ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆ ದನಗಳು ನಿಜವಾಗಿ ಕಳವು ಮಾಡಿರುವ ದನಗಳಾದರೆ ಕನಿಷ್ಠ ಅದರ ಹತ್ತು ಮಾಲಕರಾದರೂ ತಮ್ಮ ತಮ್ಮ ಸ್ಥಳೀಯ ಪೊಲೀಸ್ ಸ್ಟೇಷನ್ನುಗಳಲ್ಲಿ ತಮ್ಮ ದನ ಕಳುವಾಗಿರುವ ಬಗ್ಗೆ ದೂರು ಕೊಟ್ಟಿರಬೇಕು ಅಲ್ಲವೇ? ಹಾಗಾದರೆ ಆ ದೂರುಗಳು ಎಲ್ಲಿವೆ? ಹಿಂದಿನ ಒಂದೇ ವರ್ಷದ ಪೊಲೀಸ್ ವರದಿ ನೋಡಿದರೂ ಅವರು ದನಗಳ್ಳರನ್ನು ಹಿಡಿದು ಕನಿಷ್ಠ ಒಂದು ಸಾವಿರ ದನಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಎಲ್ಲ ದನಗಳು ಕೊನೆಗೆ ಏನಾದವು? ಅವುಗಳ ಮಾಲೀಕರನ್ನು ಹುಡುಕಿ ಅವರಿಗೆ ಈ ದನಗಳನ್ನು ಹಿಂತಿರುಗಿಸಲಾಯಿತೆ? ದನಗಳ್ಳರನ್ನು ಕೋರ್ಟಿನಲ್ಲಿ ಹಾಜರುಪಡಿಸಿ ಅವರಲ್ಲಿ ಎಷ್ಟು ದನಗಳ್ಳರಿಗೆ ಕೋರ್ಟಿನಲ್ಲಿ ಶಿಕ್ಷೆ ಆಗುವಂತೆ ಪೊಲೀಸರು ನೋಡಿಕೊಂಡಿದ್ದಾರೆ? ಕಾನೂನುಬದ್ಧ ದನ ಸಾಗಾಣಿಕೆದಾರರನ್ನೂ ಪೊಲೀಸರು ಹಿಡಿದು ಅವರಿಗೆ ದನಗಳ್ಳರು ಎಂದು ಹಣೆಪಟ್ಟಿ ಕಟ್ಟಿ ನಂತರ ಅವರಿಂದ ಹಣ ಪೀಕಿಸಿ ಅವರನ್ನು ಪೊಲೀಸರು ಮತ್ತು ಕೇಸರಿ ಸಂಘಟನೆಗಳು ಬಿಟ್ಟುಬಿಡುತ್ತವೆ ಎಂದು ಆರೋಪಗಳಿವೆ. ಹಾಗಿರುವಾಗ ಕಾನೂನುಬದ್ಧವಾಗಿ ದನ ಸಾಗಿಸುವುದೂ ಅಪರಾಧ ಆಗಿದೆಯೇ? ವಿಚಾರಣೆಗೆ ಮುಂಚೆಯೇ ದನಗಳ್ಳರನ್ನು ಪೊಲೀಸರು ಮತ್ತು ಸಂಘಿಗಳು ಕೂಡಿ ಹಿಡಿದರು ಎಂದು ಪತ್ರಿಕೆಗಳಿಗೆ ಸುದ್ದಿ ಕೊಡುವುದು ಅಪರಾಧವಲ್ಲವೇ? ಅಕ್ರಮ ದನ ಸಾಗಾಣಿಕೆ ಎಂದು ಪೊಲೀಸರು ಮತ್ತು ಸಂಘಿಗಳು ಹಿಡಿಯುವ ಹತ್ತು ಪ್ರಕರಣಗಳಲ್ಲಿ ಕನಿಷ್ಠ ಏಳು ಪ್ರಕರಣಗಳು ಕಾನೂನುಬದ್ಧ ಸಕ್ರಮ ದನ ಸಾಗಾಣಿಕೆ ಆಗಿರುತ್ತದೆ ಎಂಬುದು ಈಗ ಗುಟ್ಟಾಗಿ ಉಳಿದಿಲ್ಲ. ಹಾಗಾಗಿ ಎಲ್ಲಾ ದನ ಸಾಗಾಣಿಕೆಯನ್ನು ದನ ಕಳ್ಳರೇ ಮಾಡುತ್ತಿರುವರು ಎಂದು ಅಭಿಪ್ರಾಯ ಹುಟ್ಟುವಂತೆ ಮಾಡುವಲ್ಲಿ ಪೊಲೀಸರ ಯಾವ ಸ್ವಾರ್ಥ ಅಡಗಿದೆ? ಕಾನೂನುಬದ್ಧ ದನ ಸಾಗಾಣಿಕೆಗೆ ದನ ವ್ಯಾಪಾರಿಗಳು ಯಾವ-ಯಾವ ದಾಖಲೆಗಳನ್ನು ತಮ್ಮಲ್ಲಿ ಇಟ್ಟುಕೊಂಡಿರಬೇಕು ಎಂಬ ವಿವರ ಪೊಲೀಸರು ತಮ್ಮ ವೆಬ್‌ಸೈಟಿನಲ್ಲಿ ಅಥವಾ ಪತ್ರಿಕೆಗಳಲ್ಲಿ ಸಾರ್ವಜನಿಕ ಅವಗಾಹನೆಗಾಗಿ ಪ್ರಕಟಿಸುವರೇ?

-ಕ್ಷಿತಿಜ್ ಕೆ ಹೆಗ್ಡೆ, ಮಂಗಳೂರು

ವಿಮರ್ಶೆ ನಂತರ ಚಿತ್ರ ನೋಡಿದೆ


ಪತ್ರಿಕೆಯಲ್ಲಿ ಮೂಡಿಬಂದ ರಜನೀಕಾಂತ್ ಅವರ 'ಕಬಾಲಿ' ಚಿತ್ರದ ವಿಮರ್ಶೆ ತುಂಬಾ ಚೆನ್ನಾಗಿದೆ. ಆ ಚಿತ್ರದ ಕತೆಯಿಂದ ಹಿಡಿದು, ಅಭಿನಯ, ತಂತ್ರಾಂಶ, ಸಂಗೀತ, ಮೇಕಿಂಗ್ ಎಲ್ಲದರ ಬಗ್ಗೆ ತುಂಬ ತುಂಬ ಸುಂದರವಾಗಿ ಮೂಡಿಬಂದಿದೆ. ಈ ವಿಮರ್ಶೆಯನ್ನು ಓದಿದನಂತರ ಚಿತ್ರವನ್ನು ನೋಡಿದ ನಮಗೆ ಚಿತ್ರ ತುಂಬಾ ಹಿಡಿಸಿತು. ಇದೀಗ ವಿಶ್ವದಾದ್ಯಂತ ಗಳಿಕೆಯಲ್ಲಿ ನೂತನ ದಾಖಲೆ ಮಾಡುತ್ತಿರುವ 'ಕಬಾಲಿ' ಚಿತ್ರತಂಡಕ್ಕೆ, ನಿಮಗೆ ಹಾಗು ವಿಮರ್ಶೆಯನ್ನು ಬರೆದ ಲೇಖಕರಿಗೆ ನಮ್ಮ ಹೃದಯಪೂರ್ವಕ ವಂದನೆಗಳು.

- ತೇಜಸ್, ಈ ಮೇಲ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಸ್ಪಷ್ಟವಾಗಿ ಮತ್ತು ಚುಟುಕಾಗಿ SMS ಕಳುಹಿಸಬಹುದು.

ಒಟ್ಟಿಗೆ ಕೆಲಸ ಮಾಡಲು ಎಂಟು ವರ್ಷ ಬೇಕಾಯಿತು: ಯೋಗರಾಜ್ ಭಟ್

ತ್ರಿಶಂಕು ಸ್ಥಿತಿಯಲ್ಲಿದ್ದಾರೆ ನಿರ್ದೇಶಕ ಯೋಗರಾಜ್ ಭಟ್. ಹಣಕಾಸಿನ ಮುಗ್ಗಟ್ಟಿನಿಂದಾಗಿ 'ದನಕಾಯೋನು' ಸಿನಿಮಾ ಥಿಯೇಟರ್‌ಗೆ ಬರುತ್ತಿಲ್ಲ. ಒಂದು ವರ್ಷದಿಂದ ಪ್ರಚಾರದಲ್ಲಿರುವ 'ನನ್ನ ಹೆಸರೇ ಅನುರಾಗಿ' ಚಿತ್ರ ಕೂಡ ಮುಂದಕ್ಕೆ ಹೋಗಿದೆ. ಹೀಗಾಗಿ ಸದ್ಯ ಗಣೇಶ್ ಜತೆಗಿನ ಸಿನಿಮಾದ ಬಗ್ಗೆ ಭಟ್ ಮಾತಾಡುತ್ತಿದ್ದಾರೆ.




ಕನ್ನಡದ ಪಾಪ್ಯುಲರ್ ನಿರ್ದೇಶಕ ಯೋಗರಾಜ್ ಭಟ್. ಆದರೂ ಇವರ ಚಿತ್ರಗಳಿಗೆ ಹಲವು ವಿಘ್ನಗಳು ಎದುರಾಗುತ್ತಿವೆ. 'ದನಕಾಯೋನು' ಸಿನಿಮಾ ರೆಡಿಯಾಗಿ ಐದಾರು ತಿಂಗಳಾದರೂ ಅದಕ್ಕೆ ಬಿಡುಗಡೆಯ ಭಾಗ್ಯ ದೊರೆಯುತ್ತಿಲ್ಲ. ವರ್ಷದ ಹಿಂದೆಯೇ ಕೈಗೆತ್ತಿಕೊಂಡ 'ನನ್ನ ಹೆಸರೇ ಅನುರಾಗಿ' ಚಿತ್ರಕ್ಕೆ ಮುಹೂರ್ತವಾಗಿಲ್ಲ. ಈ ನಡುವೆ ಮತ್ತೊಂದು ಸಿನಿಮಾದ ಬಗ್ಗೆ ಮಾತಾಡುತ್ತಿದ್ದಾರೆ. 'ನನ್ನ ಹೆಸರೇ ಅನುರಾಗಿ' ಚಿತ್ರಕ್ಕೆ ಕೊಂಚ ವಿರಾಮ ಘೋಷಿಸಿ, ಗಣೇಶ್ ಜತೆಗಿನ ಚಿತ್ರವನ್ನು ಮಾಡಲು ಮುಂದಾಗಿದ್ದಾರೆ. ಹಾಡೊಂದಕ್ಕೆ ಲಕ್ಷಾಂತರ ರೂಪಾಯಿ ಪಡೆಯುವ ಈ ನಿರ್ದೇಶಕರ ಚಿತ್ರಗಳಿಗೆ ಏನಾಗುತ್ತಿವೆ ಅನ್ನುವ ಕುರಿತು ಯೋಗರಾಜ್ ಭಟ್ ಮಾತಾಡಿದ್ದಾರೆ.

** ನಿಮ್ಮ ಸಿನಿಮಾಗಳಿಗಾಗಿ ಕಾಯುವ ಪ್ರೇಕ್ಷಕರು ಇರುವಾಗ 'ದನಕಾಯೋನು' ಚಿತ್ರವನ್ನು ಥಿಯೇಟರ್‌ಗೆ ತರದಿರಲು ಕಾರಣವೇನು?*

ನನ್ನ ಕೆಲಸವನ್ನು ನಾನು ಮಾಡಿ ಮುಗಿಸಿದ್ದೇನೆ. ಒಂದು ಸಿನಿಮಾವನ್ನು ರಿಲೀಸ್ ಮಾಡುವುದು ಸದ್ಯಕ್ಕೆ ಸುಲಭದ ಮಾತಲ್ಲ. ರಿಲೀಸ್ ಆಗದೇ ಇರಲಿಕ್ಕೆ ನಿರ್ಮಾಪಕರಿಗೆ ಕಾರಣ ಇದ್ದೇ ಇರುತ್ತದೆ. ಹಾಗಂತ ಬಿಡುಗಡೆ ಮಾಡದೇ ಇರುವುದಕ್ಕೆ ಆಗಲ್ಲ. ತಡವಾಗಿದ್ದರೂ ಸಿನಿಮಾವನ್ನು ಜನರಿಗೆ ತಲುಪಿಸುತ್ತೇವೆ.

** ರಿಲೀಸ್ ಆಗದೇ ಇರುವುದಕ್ಕೆ ನಿರ್ದಿಷ್ಟ ಕಾರಣವೇನಾದರೂ ಇದೆಯಾ?*

ಆ ಕಾರಣವನ್ನು ನೀವು ನಿರ್ಮಾಪಕರಿಗೆ ಕೇಳಬೇಕು. ನಿರ್ದೇಶಕನಾಗಿ ನಾನು ಸಿನಿಮಾ ತಯಾರು ಮಾಡಿಕೊಟ್ಟಿದ್ದೇನೆ. ಅದನ್ನು ಪ್ರೇಕ್ಷಕರಿಗೆ ಮುಟ್ಟಿಸುವ ಜವಾಬ್ದಾರಿಯನ್ನು ನಿರ್ದೇಶಕರ ಜತೆ ನಿರ್ಮಾಪಕರೂ ಹೊತ್ತಿಕೊಳ್ಳಬೇಕು.



** ಎಲ್ಲವೂ ಅಂದುಕೊಂಡಂತೆ ಆಗಿದ್ದರೆ 'ನನ್ನ ಹೆಸರೇ ಅನುರಾಗಿ' ಸಿನಿಮಾ ಇಷ್ಟೊತ್ತಿಗೆ ಸೆಟ್ಟೇರಬೇಕಿತ್ತು. ಅದು ತಡವಾಗಿದ್ದು ಯಾಕೆ?*

ಸ್ಕ್ರಿಪ್ಟ್ ಕೆಲಸ ಮುಗಿದಿದೆ. ನಾಯಕ ಮತ್ತು ನಾಯಕಿಯರು ಹೊಸಬರು. ಅವರಿಗೆ ಇನ್ನಷ್ಟು ತಯಾರಿ ಬೇಕು. ಹೀಗಾಗಿ ಅವರಿಗೆ ಕೊಂಚ ಸಮಯ ಕೊಟ್ಟಿದ್ದೇನೆ. ಮುಂದಿನ ದಿನಗಳಲ್ಲಿ ಈ ಸಿನಿಮಾ ಕೂಡ ಸೆಟ್ಟೇರಲಿದೆ.

** ಎಂಟು ವರ್ಷಗಳಿಂದ ಸುಮ್ಮನೆ ಇದ್ದವರು ಈಗ ಮತ್ತೆ ಗಣೇಶ್ ಜತೆ ಕೈ ಜೋಡಿಸಿದ್ದೀರಿ. ದಿಢೀರ್ ಸ್ನೇಹ ಹುಟ್ಟಿದ್ದು ಹೇಗೆ?*



ಇದು ದಿಢೀರ್ ಸ್ನೇಹವಲ್ಲ. 'ಗಾಳಿಪಟ' ಸಿನಿಮಾದ ನಂತರ ಇಬ್ಬರೂ ಸಿನಿಮಾ ಮಾಡಬೇಕು ಅಂತ ಚರ್ಚೆ ಮಾಡುತ್ತಲೇ ಇದ್ದೆವು. ಕಾಲ ಕೂಡಿ ಬರಲೇ ಇಲ್ಲ. ಮೂರು ವರ್ಷಗಳ ಹಿಂದೆ, ಅತೀ ಶೀಘ್ರದಲ್ಲೇ ಇಬ್ಬರೂ ಡೇಟ್ ಹೊಂದಿಸಿಕೊಳ್ಳೋಣ ಅಂತ ಸೀರಿಯಸ್ ಆಗಿ ಮಾತಾಡಿದೆವು. ಈಗ ಅದಕ್ಕೆ ಸಂದರ್ಭ ಒದಗಿಬಂದಿದೆ.

** 'ಮುಂಗಾರು ಮಳೆ' ಎಂಬ ಟ್ರೆಂಡ್ ಸೆಟರ್ ಸಿನಿಮಾ ಕೊಟ್ಟವರು ನೀವು. ಮತ್ತೆ ಆ ಟ್ರೆಂಡ್ ಸೃಷ್ಟಿ ಸಾಧ್ಯವಾಗತ್ತಾ?*

'ಮುಂಗಾರು ಮಳೆ' ಸಿನಿಮಾ ಮಾಡುವಾಗ ನಾವ್ಯಾರು ಈ ರೀತಿಯಲ್ಲಿ ಗೆಲುವು ಸಿಗತ್ತೆ ಅಂತ ಅಂದುಕೊಂಡವರು ಅಲ್ಲ. ಪ್ರೀತಿಯಿಂದ ಸಿನಿಮಾ ಮಾಡಿದವರು. ಆ ಪ್ರೀತಿಗೆ ಬೆಲೆ ಬಂತು. ಹೊಸ ಸಿನಿಮಾ ಕೂಡ ಹಾಗೆಯೇ ಮಾಡುತ್ತೇವೆ. ಟ್ರೆಂಡ್ ಸೃಷ್ಟಿ ಮಾಡಬೇಕಾದವರು ಪ್ರೇಕ್ಷಕರು. ಆ ನಂಬಿಕೆಯಲ್ಲೇ ಕೆಲಸ ಮಾಡುತ್ತಿದ್ದೇವೆ.

** ಹೊಸ ಸಿನಿಮಾದ ಕತೆಯೇನು? ಏನನ್ನು ಹೇಳಲು ಹೊರಟಿದ್ದೀರಿ?*

ಸಂದೇಶ, ತತ್ವ ಅಂತ ಸಿನಿಮಾದಲ್ಲಿ ಹೇಳೋಕೆ ಹೋಗಬಾರದು. ಅದನ್ನು ಯಾರೂ ಕೇಳುವುದಿಲ್ಲ. ದುಡ್ಡು ಕೊಟ್ಟು ಬರುವ ಪ್ರೇಕ್ಷಕನಿಗೆ ಮನರಂಜನೆ ಬೇಕು. ಈ ಸಿನಿಮಾದಲ್ಲೂ ಅಂಥದ್ದೊಂದು ಮನರಂಜನೆ ಇದೆ. ದಿನನಿತ್ಯ ಬದುಕು ಹೇಗಿರುತ್ತದೆಯೋ, ಹಾಗೆಯೇ ಸಿನಿಮಾವನ್ನು ಕಟ್ಟಿಕೊಡುತ್ತಿದ್ದೇನೆ. ಒಬ್ಬ ಹುಡುಗನ ಜೀವನದಲ್ಲಿ ನಡೆಯಬಹುದಾದಂತಹ ಕತೆ ಇಲ್ಲಿದೆ.

** ನಿಮ್ಮ ಚಿತ್ರದ ಕಥಾನಾಯಕರು ಉಡಾಫೆಯಾಗಿಯೇ ಇರುತ್ತಾರೆ. ಇಲ್ಲಿ ಗಣೇಶ್ ಪಾತ್ರ ಹೇಗಿರುತ್ತದೆ?*


ಪಾತ್ರದ ಬಗ್ಗೆ ಸದ್ಯ ಏನೂ ಹೇಳುವುದು ಬೇಡ. ಈವರೆಗೂ ಮಾಡದೇ ಇರುವಂತಹ ಪಾತ್ರ ಇಲ್ಲಿದೆ. ಅಲ್ಲದೇ ಈ ಪಾತ್ರಕ್ಕಾಗಿ ಗಣೇಶ್ ಅವರು ಒಂದಿಷ್ಟು ಬದಲಾಗಲಿದ್ದಾರೆ.

** ಸಿನಿಮಾದಲ್ಲಿ ಮತ್ತೇನು ವಿಶೇಷತೆ ಇರಲಿವೆ?*

ಎಂದಿನಂತೆ ವಿ.ಹರಿಕೃಷ್ಣ ಸಂಗೀತ ಚಿತ್ರಕ್ಕಿದೆ. ಜಯಂತ್ ಕಾಯ್ಕಿಣಿ ಅವರ ಸಾಹಿತ್ಯವನ್ನು ಕೇಳಬಹುದು. ಕನ್ನಡದ ನಾಯಕಿಯೇ ಇರಲಿದ್ದಾರೆ. ನನ್ನ ಟೀಮ್ ಈ ಚಿತ್ರಕ್ಕೆ ಕೆಲಸ ಮಾಡಲಿದೆ. ಅಲ್ಲದೇ, ಗಣೇಶ್ ಮತ್ತು ನಾನು ಇಬ್ಬರೂ ಈ ಸಿನಿಮಾವನ್ನು ನಿರ್ಮಾಣ ಮಾಡಲಿದ್ದೇವೆ. ಸೆಪ್ಟೆಂಬರ್ ಮೂರನೇ ವಾರದಲ್ಲಿ ಚಿತ್ರ ಸೆಟ್ಟೇರಲಿದೆ. ■

Registered No.RNP/KA/BGS/2036/2014-16 Posted at :Bangalore-26, PSO, Mysore Road. Thursday R B P LANKESH, Kannada Weekly Price Rs. 15/- 24-08-2016 RNI No. KARKAN20

ಚಂಗುಮಣಿಯಾದ ಮನು



ರವಿಚಂದ್ರನ್ ಅವರ ಹಿರಿಯ ಪುತ್ರ ಮನೋರಂಜನ್ ನಟನೆಯಲ್ಲಿ ಸಿಕ್ಕಾಪಟ್ಟೆ ಬ್ಯುಸಿ ಆಗುತ್ತಿದ್ದಾರೆ. ಈಗಷ್ಟೇ ಅವರು 'ಸಾಹೇಬ' ಸಿನಿಮಾದ ಶೂಟಿಂಗ್ ಮುಗಿಸಿ ಡಬ್ಬಿಂಗ್‌ನಲ್ಲಿ ತೊಡಗಿದ್ದಾರೆ. ಜತೆಗೆ 'ಏಐಪಿ' ಚಿತ್ರಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಇವೆರಡೂ ಸಿನಿಮಾ ಮುಗಿಯುತ್ತಿದ್ದಂತೆಯೇ 'ಚಂಗುಮಣಿ' ಎಂಬ ಚಿತ್ರದಲ್ಲಿ ನಟಿಸಲಿದ್ದಾರೆ ಅನ್ನುವುದು ಲೇಟೆಸ್ಟ್ ಸುದ್ದಿ. ಚೊಚ್ಚಲು ಸಿನಿಮಾ ಇನ್ನೂ ರಿಲೀಸ್ ಆಗದೇ ಇದ್ದರೂ ತಮ್ಮ ಪುತ್ರನ ಕೈಯಲ್ಲಿ ಮೂರು ಸಿನಿಮಾಗಳು ಇರುವುದರಿಂದ ರವಿಚಂದ್ರನ್‌ಗೆ ಸಹಜವಾಗಿಯೇ ಖುಷಿಯಾಗಿದೆ. ಅದರಲ್ಲೂ 1979 ರಲ್ಲಿ ಬಿಡುಗಡೆಯಾದ ಐತಿಹಾಸಿಕ ಚಿತ್ರ 'ಹುಲಿಯ ಹಾಲಿನ ಮೇವು' ಸಿನಿಮಾದಲ್ಲಿ ರಾಜ್‌ಕುಮಾರ್ ಚಂಗುಮಣಿ ಅನ್ನುವ ಪಾತ್ರವನ್ನು ನಿರ್ವಹಿಸಿದ್ದರು. ಅದೇ ಹೆಸರಿನ ಪಾತ್ರವು ತಮ್ಮ ಮಗನಿಗೆ ಸಿಕ್ಕಿದ್ದು ಮತ್ತಷ್ಟು ಸಂಭ್ರಮಕ್ಕೆ ಕಾರಣವಾಗಿದೆ. ಹಾಗಂತ ಆ ಚಿತ್ರಕ್ಕೂ ಈ ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲ, ಇದು ಪಕ್ಕಾ ಕಮರ್ಷಿಯಲ್ ಸಿನಿಮಾ ಅಂತಾರೆ ಮನೋರಂಜನ್.


ಭರತ್ ನಿರ್ದೇಶನದಲ್ಲಿ 'ಸಾಹೇಬ' ಚಿತ್ರ ಮೂಡಿಬರುತ್ತಿದ್ದರೆ, ತಮಿಳಿನ 'ಏಐಪಿ' ಸಿನಿಮಾವನ್ನು ಕನ್ನಡದಲ್ಲಿ ರಿಮೇಕ್ ಮಾಡುತ್ತಿದ್ದಾರೆ ನಿರ್ದೇಶಕ ನಂದಕಿಶೋರ್. 'ಗೋಲಿಸೋಡಾ' ಚಿತ್ರದಲ್ಲಿ ಸಹಾಯಕ ನಿರ್ದೇಶಕರಾಗಿರುವ ರಘುರಾಜು 'ಚಂಗುಮಣಿ'ಗೆ ಆಕ್ಷನ್ ಕಟ್ ಹೇಳಲಿದ್ದಾರೆ.

ರಾಧಿಕಾ ಸಿಬಿಐ ಆಫೀಸರ್



'ರಂಗಿತರಂಗ' ಖ್ಯಾತಿಯ ರಾಧಿಕಾ ಚೇತನ್ ಮೂರ್‍ನಾಲ್ಕು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಅಲ್ಲದೇ ತಮಿಳಿನ ಸಿನಿಮಾಗೂ ಆಯ್ಕೆಯಾಗಿದ್ದಾರೆ. ಆದರೂ, ಕಿರುಚಿತ್ರದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. ಬ್ಯುಸಿ ಇರುವ ಹೊತ್ತಲ್ಲಿ, ಶಾರ್ಟ್ ಮೂವಿಗೆ ಒಪ್ಪಿಕೊಳ್ಳಲು ಕಾರಣ, ಸಿಕ್ಕಿರುವ ಪಾತ್ರವಂತೆ. ಇದೇ ಮೊದಲ ಬಾರಿಗೆ ಸಿಬಿಐ ಆಫೀಸರ್ ಪಾತ್ರ ಅವರನ್ನು ಹುಡುಕಿಕೊಂಡು ಬಂದಿದೆಯಂತೆ. ಹೀಗಾಗಿ 'ನೆವರ್ ಎಂಡ್' ಹೆಸರಿನ ಕಿರುಚಿತ್ರದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. "ಇದೊಂದು ಮರ್ಡರ್ ಮಿಸ್ಟರಿ ಕತೆ. ಕೊಲೆಯ ರಹಸ್ಯವನ್ನು ಭೇದಿಸಲು ಹೊರಡುವ ಅಧಿಕಾರಿಗೆ ಹಲವು ಕಷ್ಟಗಳು ಎದುರಾಗುತ್ತವೆ. ಅವುಗಳನ್ನು ದಾಟಿಕೊಂಡು ಕೇಸ್‌ನಲ್ಲಿ ಹೇಗೆ ಗೆಲ್ಲುತ್ತಾರೆ ಅನ್ನುವ ರೋಚಕ ಸ್ಟೋರಿ ಇದೆ. ಹೀಗಾಗಿಯೇ ಸಿನಿಮಾ ಮಾಡಲು ಒಪ್ಪಿಕೊಂಡೆ" ಅಂದಿದ್ದಾರೆ ರಾಧಿಕಾ ಚೇತನ್.

ರಾಧಿಕಾ ಜತೆ ಪ್ರಾಸ್ ಎಂಬ ನವನಟ ನಟಿಸಿದ್ದಾರೆ. ಧೀರಜ್ ನಿರ್ದೇಶಕರು.



'ಜಾಗ್ವರ್' ಏರಿದ ಭಜರಂಗಿ ಲೋಕಿ

'ಭಜರಂಗಿ' ಚಿತ್ರ ಖ್ಯಾತಿಯ ಲೋಕಿಗೆ 'ಜಾಗ್ವರ್' ಸಿನಿಮಾದಲ್ಲಿ ನಟಿಸಲು ಅವಕಾಶ ಸಿಕ್ಕಿದೆ. ಕನ್ನಡದಲ್ಲಷ್ಟೇ ಅಲ್ಲ, ತೆಲುಗಿನ ಅವತರಣಿಕೆಯಲ್ಲೂ ಲೋಕಿ ಇರಲಿದ್ದಾರೆ ಅನ್ನುವುದು ವಿಶೇಷ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಪುತ್ರ ನಿಖಿಲ್‌ಕುಮಾರ್ ನಟನೆಯ ಸಿನಿಮಾ 'ಜಾಗ್ವರ್'. ಇದು ತೆಲುಗು ಮತ್ತು ಕನ್ನಡದಲ್ಲಿ ಏಕಕಾಲಕ್ಕೆ ತಯಾರಾಗುತ್ತಿದೆ. ಹೀಗಾಗಿ ಆಯಾ ರಂಗದ ನಟರು ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಲೋಕಿಗೆ ಎರಡೂ ಭಾಷೆಯಲ್ಲಿ ನಟಿಸಲು ಅವಕಾಶ ಸಿಕ್ಕಿದ್ದರಿಂದ, ಈ ಚಿತ್ರದ ಮೂಲಕ ಅವರು ತೆಲುಗಿಗೂ ಹಾರಿದ್ದಾರೆ.

'ಜಾಗ್ವರ್' ಸಿನಿಮಾದಲ್ಲಿ ಸಂಪತ್ ಮುಖ್ಯ ವಿಲನ್ ಪಾತ್ರ ನಿರ್ವಹಿಸಿದ್ದರೆ, ನಾಯಕನಿಗೆ ಸವಾಲೊಡ್ಡುವ ಮತ್ತೊಂದು ಪಾತ್ರವು ಲೋಕಿಗೆ ಒಲಿದು ಬಂದಿದೆ. ಇಂಥದ್ದೊಂದು ಪಾತ್ರ ಸಿಗಲು 'ಭಜರಂಗಿ' ಸಿನಿಮಾನೇ ಕಾರಣ ಅನ್ನುವುದು ಲೋಕಿ ಮಾತು. "ವಿಲನ್ ಪಾತ್ರದಲ್ಲೇ ಗುರುತಿಸಿಕೊಳ್ಳುತ್ತಿರುವುದಕ್ಕೆ ಹೆಮ್ಮೆ ಅನಿಸುತ್ತಿದೆ. ಚಾಲೇಂಜ್ ಅನಿಸುವ ಪಾತ್ರಗಳೇ ನನಗೆ ಸಿಗುತ್ತಿವೆ. ಹೀಗಾಗಿ ನಿರ್ದೇಶಕರಿಗೆ ನಾನು ಋಣಿ ಆಗಿರುತ್ತೇನೆ" ಅಂತಾರೆ ಲೋಕಿ.

ಭಟ್ಟರ ಸಿನಿಮಾದಲ್ಲಿ ಗಣೇ



ಎಂಟು ವರ್ಷಗಳ ನಂತರ ಗೋಲ್ಡನ್ ಸ್ಟಾರ್ ಗಣೇಶ್ ಮತ್ತು ನಿರ್ದೇಶಕ ಯೋಗರಾಜ್ ಭಟ್ ಮತ್ತೆ ಒಂದಾಗಲಿದ್ದಾರೆ. ಗಣೇಶ್‌ಗಾಗಿಯೇ ನಿರ್ದೇಶಕರು ವಿಭಿನ್ನ ರೀತಿಯ ಕತೆಯನ್ನು ಹೆಣೆದಿದ್ದಾರಂತೆ. ಎಂದಿನಂತೆ ಉಡಾಫೆ ಹುಡುಗನ ಕತೆಯನ್ನು ಬಿಟ್ಟು, ಈ ಬಾರಿ ಹುಡುಗ-ಹುಡುಗಿಯರ ಭಾವನಾ ಪ್ರಪಂಚವನ್ನು ಈ ಸಿನಿಮಾದ ಮೂಲಕ ತೋರಿಸಲು ಹೊರಟಿದ್ದಾರಂತೆ ನಿರ್ದೇಶಕರು. ಚಿತ್ರಕ್ಕೆ ಇನ್ನೂ ಶೀರ್ಷಿಕೆ ಇಟ್ಟಿಲ್ಲವಾದರೂ, ಸೆಪ್ಟಂಬರ್ 25ರ ಆಸುಪಾಸು ಮುಹೂರ್ತ ಫಿಕ್ಸ್ ಆಗಿದೆ. ಈ ಸಿನಿಮಾದ ಮತ್ತೊಂದು ವಿಶೇಷತೆ ಈ ಜೋಡಿಯೇ ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. ಶಿಲ್ಪಾ ಮತ್ತು ಯೋಗರಾಜ್ ಭಟ್ ಚಿತ್ರಕ್ಕೆ ಹಣ ಹೂಡುತ್ತಿದ್ದಾರೆ.

"ಎಲ್ಲವೂ ಅಂದುಕೊಂಡಂತೆ ಆಗಿದ್ದರೆ, ಮೂರ್‍ನಾಲ್ಕು ವರ್ಷಗಳ ಹಿ ನಮ್ಮಿಬ್ಬರ ಸಿನಿಮಾ ಬರಬೇಕಿತ್ತು, ಆದರೆ ಆಗಲಿಲ್ಲ. ಈಗ ಆ ಕೂಡಿಬಂದಿದೆ. ಒಟ್ಟಿಗೆ ಕೆಲಸ ಮಾಡಲು ಉತ್ಸುಕರಾಗಿದ್ದೇವೆ" ಅ ಗಣೇಶ್.

ಚೇತನ್‌ಗೆ ಕೊನೆಗೂ ಸಿನಿಮಾ

'ಆ ದಿನಗಳು' ಚೇತನ್ ಕೆಲವು ತಿಂಗಳ ಹಿಂದೆಯಷ್ಟೇ ಅ ಸರ್ಜಾ ನಿರ್ದೇಶನದ ಸಿನಿಮಾದಿಂದ ಹೊರಬಂದು ಸುದ್ದಿಯಾಗಿದ್ದರು. ಅವರು ಏನು ಮಾಡುತ್ತಿದ್ದಾರೆ ಅನ್ನುವ ಕುತೂಹಲ ಸಹಜವಾಗಿಯೇ ಅಭಿಮಾನಿಗಳಲ್ಲಿತ್ತು. ಅದಕ್ಕೀಗ ಉತ್ತರ ಸಿಕ್ಕಿದೆ. 'ಆಕಾಶ್' ಮತ್ತು ಸಿನಿಮಾಗಳ ನಿರ್ದೇಶಕ ಮಹೇಶ್ ಬಾಬು ಚಿತ್ರವೊಂದನ್ನು ಕೈಗೆತ್ತಿಕೊಂ ಆ ಚಿತ್ರಕ್ಕೆ ಚೇತನ್ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಿಕೊಂ

ಸಿನಿಮಾದ ಕತೆ ವಿಶೇಷವಾಗಿರುವ ಕಾರಣ, ಚೇತನ್ ನ ಒಪ್ಪಿಕೊಂಡಿದ್ದಾರಂತೆ. ಸಾಮಾಜಿಕ ಆಯಾಮವಿರುವ ಈ ಚಿತ್ರದಲ್ಲಿ ಅವರದ್ದು ಟಿವಿ ವಾಹಿನಿಯ ವರದಿಗಾರನ ಪಾತ್ರವಂತೆ. ಇದು ಆಸಕ್ತಿದಾಯಕ ವಿಷಯ ಕೂಡ ಆಗಿದೆಯಂತೆ. ಹೀಗಾಗಿ ಈ ವಿ ಕುರಿತು ಚೇತನ್ ಅಧ್ಯಯನ ಮಾಡುತ್ತಿದ್ದಾರೆ. ಈ ಸಿನಿಮಾ ಅಕ್ಟೋಬ ಚಿತ್ರೀಕರಣ ಪ್ರಾರಂಭವಾಗಲಿದ್ದು, ನಾಯಕಿಯ ಆಯ್ಕೆ ನಡೆಯುತ್ತಿದೆ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com